"VARTHA JANAPADA" Monthly - Feb 2020
"ವಾರ್ತಾ ಜನಪದ" ಮಾಸಿಕ – ಫೆಬ್ರವರಿ 2020

Page No. -52
RNI No. KAR/KAN/2017/75029

Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-

ಫೆಬ್ರವರಿ 2020



Download From : www.kpscvaani.com




ಜನವರಿ 2 ರಂದು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಲುವಾಗಿ ಬೆಂಗಳೂರಿನ ಯಲಹಂಕ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮತ್ತು ಕೇಂದ್ರ ಸಚಿವರಾದ ಸದಾನಂದಗೌಡರು ಸ್ವಾಗತಿಸುತ್ತಿರುವುದು.



ಸ್ವಾತಂತ್ರ್ಯ ಉದ್ಯಾನವನದಲ್ಲಿ ಜನವರಿ 16 ರಂದು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅವರು ಏರ್ಪಡಿಸಿರುವ ಖಾದಿ ಉತ್ಸವ–2020 ರಾಷ್ಟ್ರ ಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ ಮತ್ತು ಮಾರಾಟವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಖಾದಿ ನೂಲು ತಯಾರಿಸುವ ಯಂತ್ರವನ್ನು ಚಲಾಯಿಸುತ್ತಿರುವುದು.



ಗಣರಾಜ್ಯೋತ್ಸವ ನಿಮಿತ್ತ ಈ ವರ್ಷ ವಿವೇಕಾನಂದರ ಜಯಂತೋತ್ಸವದ ವಿಷಯವಾಗಿ ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನವನ್ನು ಜನವರಿ 17 ರಂದು ಉದ್ಘಾಟಿಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವಿವೇಕಾನಂದರ ಮೂರ್ತಿಗೆ ಪುಷ್ಪ ನಮನ ಸಲ್ಲಿಸುತ್ತಿರುವುದು.



ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಜನವರಿ 18 ರಂದು ಬೆಂಗಳೂರಿನ ಹೆಚ್.ಎ.ಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಕೇಂದ್ರ ಗೃಹ ಸಚಿವರಾದ ಅಮಿತ್ ಷಾ ಅವರನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮತ್ತು ಉಪಮುಖ್ಯಮಂತ್ರಿ ಡಾ.ಸಿ.ಎಸ್.ಅಶ್ವತ್ಥ್ ನಾರಾಯಣ್ ಅವರು ಸ್ವಾಗತಿಸುತ್ತಿರುವುದು.

Download From : www.kpscvaani.com

# ವಾರ್ತಾ ಜನಪದ

ಸಂಪುಟ–03 • ಸಂಚಿಕೆ–05• ಫೆಬ್ರವರಿ 2020



05 ಹೊಸ ಆವಿಷ್ಕಾರಗಳಿಗೆ ಮುನ್ನುಡಿ ಬರೆದ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮ್ಮೇಳನ–
• ಧ್ಯಾನ್ ಪೂಣಚ್ಚ ಮತ್ತು ಕೆ.ಚೇತನ್

11 ತುಮಕೂರಿನಲ್ಲಿ ಕಿಸಾನ್ ಸಮ್ಮಾನ್ ಕಾರ್ಯಕ್ರಮ: ಪ್ರಧಾನಿಯವರಿಂದ ರೈತರಿಗೆ ಕೃಷಿ ಕರ್ಮಣ ಪ್ರಶಸ್ತಿ ವಿತರಣೆ
• ಡಿ.ಮಂಜುನಾಥ್

14 ಪೌರತ್ವ ತಿದ್ದುಪಡಿ ಕಾಯಿದೆ 2019
• ಬಿದರೆ ಪ್ರಕಾಶ್

16 ಶಿಕ್ಷಣ ಸಚಿವರ ಮುಂದಾಲೋಚನೆಯಲ್ಲಿ ಶಿಕ್ಷಣ ವ್ಯವಸ್ಥೆ ಸುಧಾರಣೆ
• ಉಮೇಶ್ ಕೂಲಿಗೆರೆ

22 ಕೃಷ್ಣನ ಆರಾಧಕ ಬಡಜನರ ಪರಿಪಾಲಕ
• ಎಚ್.ಆರ್.ಶ್ರೀಶ

30 ಡಾ.ಎಂ.ಚಿದಾನಂದಮೂರ್ತಿ: ಬದುಕು..ಬರಹ..ಮೆಲುಕು
• ಡಾ. ಎಚ್.ಎಸ್.ಸತ್ಯನಾರಾಯಣ

34 ದ್ವಾದಶ ಜ್ಯೋತಿರ್ಲಿಂಗಳು
• ಶೋಭಾ ಹೆಚ್.ಜಿ

39 ಮೀನುಗಾರಿಕೆಗೆ ಸಹಾಯಧನ: ಮೀನುಗಾರರಲ್ಲಿ ಹೊಸ ಆಶಾಕಿರಣ
• ರಮ್ಯಾ ಜಿ.ಎಸ್

42 ಕಾವ್ಯ ಲೋಕದ ತಪಸ್ವಿ: ಹೆಚ್.ಎಸ್.ವೆಂಕಟೇಶ ಮೂರ್ತಿ
• ಡಾ.ಎನ್. ಜಗದೀಶ್ ಕೊಪ್ಪ

46 ಎರಡನೇ ಬಾರಿಗೆ ಸಕಾಲ ಸಾಧನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ
• ಅರುಣಾ ಬಿ.ಗೌರಿಬಿದನೂರು

48 ವಿನೂತನ ರೀತಿಯಲ್ಲಿ ಪ್ಲಾಸ್ಟಿಕ್ ಮುಕ್ತ ಆಂದೋಲನ
• ಹರೀಶ್ ಟಿ.ಕೆ

50 ಪದಬಂಧ–4
• ವಿದ್ಯಾ ವಿ. ಹಾಲಭಾವಿ

ಪ್ರಧಾನ ಸಂಪಾದಕರು
ಎಸ್. ಎನ್. ಸಿದ್ದರಾಮಪ್ಪ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂಬಿ
ಜಂಟಿ ನಿರ್ದೇಶಕರು

ಸಹನಾ ಎಂ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Download From : www.kpscvaani.com

# ಓದುಗರಿಂದ...




ನಮ್ಮ ನೆಚ್ಚಿನ ಹೆಮ್ಮೆಯ ವಾರ್ತಾ ಜನಪದ ಜನವರಿ 2020 ವರ್ಣರಂಜಿತ ಮುಖ ಪುಟದಲ್ಲಿ ಕಲಬುರ್ಗಿ ವಿಮಾನ ನಿಲ್ದಾಣ ಉದ್ಘಾಟನಾ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಆದಿಯಾಗಿ ಸಂಪುಟ ಸಹೋದ್ಯೋಗಿಗಳ ಚಿತ್ರವು ತುಂಬಾ ಉತ್ಕೃಷ್ಟವಾಗಿ ಮೂಡಿ ಬಂದಿದೆ. ಹಾಗೆಯೇ ಜನತಂತ್ರದ ದೊಡ್ಡ ಹಬ್ಬವಾದ ಗಣರಾಜ್ಯೋತ್ಸವದ ಲೇಖನವೂ ಕೂಡ ಚಿತ್ರದೃಶ್ಯಗಳಿಂದ ಉತ್ತಮವಾದ ಮಾಹಿತಿಯನ್ನು ನೀಡಿದೆ.

ಸಂವಿಧಾನವನ್ನು ಕೈಬರಹದಲ್ಲಿ ಬರೆದಿರುವುದಕ್ಕೆ ಪ್ರೇಮ್ ರಾಯ್ಜಾದಾ ಅವರು ಸಂಭಾವನೆಯನ್ನು ನಿರಾಕರಿಸಿ, ಪ್ರತಿ ಪುಟದಲ್ಲೂ ತಮ್ಮ ಹಾಗೂ ತಮ್ಮ ತಾತನ ಹೆಸರನ್ನು ಬರೆಯುವುದಾಗಿ ಹೇಳಿದ್ದರು ಎಂಬ ವಿಷಯ ನನಗೆ ಲೇಖನದ ಮೂಲಕ ಇದೇ ಮೊದಲ ಬಾರಿಗೆ ತಿಳಿಯಿತು. ಚಿತ್ರದುರ್ಗದ ಕೃಷ್ಣರಾಜೇಂದ್ರ ಗ್ರಂಥಾಲಯದ ಹಿರಿಮೆ ಲೇಖನ ಓದಿ ನನಗೆ ಹೆಮ್ಮೆ ಪಡುವಂತ್ತಾಯಿತು.

**–ಯುವರಾಜ, ವಿಜಯಪುರ**

ವಾರ್ತಾ ಜನಪದ 2020ರ ಜನವರಿ ಆಕರ್ಷಿಸಿದೆ. ಶಿಕ್ಷಕ, ಕವಿ, ಸಾಹಿತಿ ಹೀಗೆ ಹಲವಾರು ಕ್ಷೇತ್ರದ ಜನ ಓದುಗರ ಸಂಖ್ಯೆಯನ್ನು ಹೆಚ್ಚಿಸಿದೆ. ಅದರಲ್ಲೂ ನಿರುದ್ಯೋಗಿ ಯುವಕ–ಯುವತಿಯರಿಗೆ ಜ್ಞಾನದ ಹಸಿವನ್ನು ನಿವಾರಿಸಿದೆ. ನಮ್ಮ ಹೆಮ್ಮೆಯ ಕನ್ನಡ ನಾಡಿನ ಹಿರಿಮೆ, ಗರಿಮೆ, ನೆಲ, ಜಲ, ನಾಡು ನುಡಿಯನ್ನು ಮೆಚ್ಚಿಸಿದೆ. ಜನ ಮೆಚ್ಚುಗೆಯಾಗಿ ಶಾಲೆಗಳಲ್ಲಿನ ಮಕ್ಕಳಿಗೆ ಶೈಕ್ಷಣಿಕ ಮಾಹಿತಿಯನ್ನು ಒದಗಿಸಿದೆ.

ತಿಂಗಳಿಗೊಮ್ಮೆ ನಿಗದಿತ ಸಮಯದಲ್ಲಿ ಅಂಚೆ ಮೂಲಕ ಮನೆಮನೆಗೆ ತಲುಪಿಸಲಾಗುತ್ತದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಈ ಪತ್ರಿಕೆಯು ವಿವಿಧ ಇಲಾಖೆಯ ಅಧಿಕಾರಿಗಳನ್ನು ಉತ್ತೇಜಿಸಿದೆ. ಅತ್ಯುತ್ತಮವಾಗಿ ಪತ್ರಿಕೆಯನ್ನು ಹೊರತರುತ್ತಿರುವ ಸಂಪಾದಕರಿಗೆ ಮತ್ತು ಆಡಳಿತ ವರ್ಗದವರಿಗೆ ನನ್ನ ಅನಂತ ಧನ್ಯವಾದಗಳು.

**–ಮಹಾಂತಯ್ಯ ಕೆ. ಮಠ, ಅಫಜಲಪೂರ**

ಜನವರಿ 2020 ರ ಸಂಚಿಕೆಯ ಮುಖಪುಟ ಕಲಬುರಗಿ ವಿಮಾನ ನಿಲ್ದಾಣದ ಉದ್ಘಾಟನಾ ಸಮಾರಂಭದಲ್ಲಿ ಜ್ಯೋತಿ ಬೆಳಗಿಸುತ್ತಿರುವ ಚಿತ್ರ ಬಹಳ ಚನ್ನಾಗಿ ಮೂಡಿ ಬಂದಿದೆ. ಸುಗ್ಗಿ ಹಬ್ಬದಲ್ಲಿ ಸಂಕ್ರಾಂತಿ ಸಂಭ್ರಮದ ಲೇಖನದಲ್ಲಿ ಧಾನ್ಯ ರಾಶಿಯ ಚಿತ್ರ ಕೂಡ ಚನ್ನಾಗಿದೆ. ಲೇಖಕ ಎಸ್.ಆರ್. ಆರಾಧ್ಯ ಅವರು ಲೇಖನದಲ್ಲಿ ಕರ್ನಾಟಕದಲ್ಲಿ ಮಾತ್ರವಲ್ಲದೆ ವಿವಿಧ ರಾಜ್ಯಗಳಲ್ಲಿ ಸಂಕ್ರಾಂತಿ ಆಚರಣೆಯ ಕುರಿತು ಬೆಳಕು ಚೆಲ್ಲಿದ್ದಾರೆ. ಸಂಕ್ರಾಂತಿ ಕುರಿತು ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿರುವುದರಿಂದ ಸಂಕ್ರಾಂತಿ ಆಚರಣೆಯ ಬಗ್ಗೆ ತಿಳಿದುಕೊಳ್ಳಲು ಅನುಕೂಲವಾಯಿತು.

**–ಮಹದೇವಶೆಟ್ಟಿ, ಟಿ.ನರಸೀಪುರ**

ಎಲ್ಲರಿಗೂ ಒಂದು ಕಾಲ ಬರುತ್ತದೆ ಎಂದು ಹೇಳಲಾಗುತ್ತದೆ. ಅದೇ ರೀತಿಯಲ್ಲಿ ಬಾರೆಹಣ್ಣಿಗೂ ಒಳ್ಳೆಯ ಕಾಲ ಬಂದಿರುವುದನ್ನು ತಿಳಿದು ಆಶ್ಚರ್ಯವಾಯಿತು. ಹಿಂದಿನ ಕಾಲದಲ್ಲಿ ಹಿತ್ತಲಿನಲ್ಲಿ ಬೆಳೆಯಲಾಗುತ್ತಿದ್ದ ಬಾರೆಹಣ್ಣಿನಿಂದ ಲಕ್ಷಾಂತರ ಲಾಭ ದೊರೆಯುತ್ತಿರುವುದು ಎಲ್ಲದಕ್ಕೂ ಒಂದು ಕಾಲ ಬರುತ್ತದೆ ಎಂಬುದಕ್ಕೆ ಸಾಕ್ಷಿ.

ಹಿತ್ತಲಿನಲ್ಲಿ ಬೆಳೆಯಲಾಗುತ್ತಿದ್ದ ಬಾರೆಹಣ್ಣನ್ನು ಅಂದು ಯಾರೂ ಜೋಪಾನ ಮಾಡುತ್ತಿರಲಿಲ್ಲ. ಅಕ್ಕ ಪಕ್ಕದ ಮನೆಯವರು ಯಾರದೇ ಹಿತ್ತಲಿನಲ್ಲಿ ಬೆಳೆದಿರುವ ಬಾರೆಹಣ್ಣನ್ನು ಕಿತ್ತು ತಿನ್ನುತಿದ್ದರು. ಆದರೆ ಈಗ ಅದೇ ಹಣ್ಣು ವಾಣಿಜ್ಯ ಬೆಳೆಯಾಗಿ ರೈತನಿಗೆ ಅಧಿಕ ಆದಾಯ ತರುತ್ತಿರುವ ಕುರಿತು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುವ ಲೇಖನ ಓದಿದ ನನಗೆ ನಂಬಲಿಕ್ಕೆ ಆಗಲಿಲ್ಲ. ಕುಷ್ಟಗಿ ತಾಲೂಕಿನ ಹನಮೇಶ ಉಡಮಕಲ್ ಅವರು ತಮ್ಮ 6 ಎಕರೆ ಭೂಮಿಯಲ್ಲಿ ಬಾರೆಹಣ್ಣು ಬೆಳೆದು ಲಕ್ಷಾಂತರ ರೂಪಾಯಿ ಆದಾಯ ಪಡೆದಿರುವುದು ನಮ್ಮಂತಹ ರೈತರಿಗೆ ಉತ್ಸಾಹ ತುಂಬಿದಂತ್ತಾಗಿದೆ. ಹೆಚ್ಚಿನ ಮುತುವರ್ಜಿ ಬೇಕಾಗದ ಬಾರೆಹಣ್ಣು ಬೆಳೆಯು ನಿಜಕ್ಕೂ ಲಾಭದಾಯಕ ಬೆಳೆಯಾಗಿದೆ. ಸಾಲ ಭಾದೆಯಿಂದ ಸಂಕಷ್ಟದಲ್ಲಿ ಮುಳಿಗಿರುವ ರೈತರಿಗೆ ಈ ಬೆಳೆಯು ಖಂಡಿತವಾಗಿ ಲಾಭದಾಯಕ ಬೆಳೆಯಾಗಲಿದೆ.

**–ವೀರಭದ್ರಪ್ಪ, ಕಲ್ಲಳ್ಳಿ**

ಕಂಡ ಭಕ್ತರಿಗೆ ಕೈ ಮುಗಿಯುವಾತನೇ ಭಕ್ತ. ಮೃದುವಾದ ಮಾತುಗಳೇ ಜಪ, ತಪಗಳಯ್ಯಾ...ಸದ್ವಿನಯವೇ ಸದಾಶಿವನ ಒಲುಮೆವಯ್ಯಾ ಕೂಡಲಸಂಗಮದೇವಾ ಎಂಬಂತೆ "ಜನಪದ" ಮಾಸಿಕ ಪತ್ರಿಕೆಯಲ್ಲಿ ಶ್ರಮಿಸುತ್ತಿರುವ ಸಕಲರಿಗೂ ಶರಣು–ಶರಣಾರ್ಥಿಗಳು. ತಾವು ಬಿಡುಗಡೆ ಮಾಡುವ ಜನಪದ ನನಗೆ ತುಂಬಾ ಸಂತಸವನ್ನು ತಂದಿದೆ. ಜ್ಞಾನದ ಕಣಜವಾಗಿದೆ. ಇದನ್ನು "ಜ್ಞಾನ ಪದ" ಎಂದರೆ ಅತಿಶಯೋಕ್ತಿಯಾಗಲಾರದು. ನಾನು ಜನಪದ ಓದುಗನಾಗಿದ್ದು, ಅದನ್ನು ಓದಲೆಂದೇ ಪಂಚಾಯತಿಗಳಿಗೆ ಹೋಗಿ ಬರುತ್ತೇನೆ.

**–ಮಲ್ಲಪ್ಪ, ಬಸಪ್ಪ, ಅಥಣಿ**

'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ "The Director, Department of Information & Public Relations" ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು. ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಚಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.



## ಹೊಸ ಆವಿಷ್ಕಾರಗಳಿಗೆ ಮುನ್ನುಡಿ ಬರೆದ

# ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾವೇಶ

ಧ್ಯಾನ್ ಪೂಣಚ್ಚ ಮತ್ತು ಕೆ. ಚೇತನ್

**ವಿಜ್ಞಾನ ಮತ್ತು ತಂತ್ರಜ್ಞಾನದ ಆಸಕ್ತರ ಪಾಲಿನ ಕುಂಭಮೇಳವಾದ 107 ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾವೇಶ ಐದು ದಿನಗಳ ಕಾಲ ಬೆಂಗಳೂರಿನಲ್ಲಿ ಯಶಸ್ವಿಯಾಗಿ ಜರುಗಿತು.**

ವಿಜ್ಞಾನಿಗಳ ಈ ಮಹಾಮೇಳಕ್ಕೆ ಕೃಷಿ ವಿಶ್ವವಿದ್ಯಾಲಯ(ಜಿಕೆವಿಕೆ) ವೇದಿಕೆಯಾಗಿತ್ತು. ಈ ಬಾರಿಯ ಮೇಳವನ್ನು ಕೃಷಿ ಪ್ರಧಾನವಾದ ದೇಶದ ರೈತನಿಗೆ ಅರ್ಪಿಸಿದ್ದು ಮತ್ತೊಂದು ವಿಶೇಷ. ಇದಲ್ಲದೆ ಪ್ರಧಾನಿ ನರೇಂದ್ರ ಮೋದಿ ಅವರ ಉಪಸ್ಥಿತಿ ಮೇಳಕ್ಕೆ ಹೊಸ ಹುರುಪನ್ನು ನೀಡಿತು.

ಜನವರಿ 3 ರಿಂದ 7 ರವರೆಗೆ ನಡೆದ ಐದು ದಿನದ ಸಮಾವೇಶವು ದೇಶ ವಿದೇಶಗಳಿಂದ ಬಂದ ಹಿರಿಯ ಮತ್ತು ಕಿರಿಯ ವಿಜ್ಞಾನಿಗಳು, ಆಸಕ್ತ ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಸಾಮಾನ್ಯರಿಗೆ ಅನುಕೂಲ ಪಡೆಯುವಂತೆ ಮಾಡಿತು. ಭಾರತೀಯ ವಿಜ್ಞಾನಿಗಳು ವಿವಿಧ ಕ್ಷೇತ್ರಗಳಲ್ಲಿ ನಡೆಸುತ್ತಿರುವ ಸಂಶೋಧನೆಗಳು ಮತ್ತು ಸಾಧಕ ಬಾಧಕಗಳ ಮೇಲೆ ಈ ಸಮಾವೇಶವು ಬೆಳಕು ಚೆಲ್ಲಿದ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳಿಗೆ ಮುನ್ನುಡಿ ಬರೆಯಿತು.

ನೊಬೆಲ್ ಪುರಸ್ಕೃತ ವಿಜ್ಞಾನಿ ಪ್ರೊ. ಸ್ಟೆಫನ್ ಹೆಲ್, ಡಾ. ಸುಬ್ರ ಸುರೇಶ್ ಸೇರಿದಂತೆ ಪ್ರಮುಖ ದೇಶವಿದೇಶದ ಹಲವಾರು ವಿಜ್ಞಾನಿಗಳು ಅಲ್ಟ್ರಾ ಶಾರ್ಪ್ ಫ್ಲೋರೊಸೆನ್ಸ್ ಮೈಕ್ರೊಸ್ಕೋಪಿ, ಮೂಲ ವಿಜ್ಞಾನ ಮತ್ತು ಕೈಗಾರಿಕೆಗಳಲ್ಲಿ ಅನ್ವಯವಾಗುವ ಸಂಶೋಧನೆಗಳು, ಆಧುನಿಕ ಔಷಧಿ, ಜೀವನ ಶೈಲಿಯಿಂದ ಬರುತ್ತಿರುವ ಕಾಯಿಲೆಗಳು, ಹೃದ್ರೋಗದಲ್ಲಿ ಮುಂದುವರೆದ ತಂತ್ರಜ್ಞಾನಗಳ ಬಗ್ಗೆ ಉಪನ್ಯಾಸ ನಡೆಸಿದರು. ರೈತರ ಅನ್ವೇಷಣೆಗಳು, ಉದ್ಯಮಶೀಲತೆ, ರೈತರ ಆದಾಯ ದುಪ್ಪಟ್ಟು ಗೊಳಿಸುವುದು, ಹವಾಮಾನ ಬದಲಾವಣೆ, ಜೀವ ವೈವಿಧ್ಯತೆ, ಆಹಾರ ಸಂರಕ್ಷಣೆ, ರೈತರ ಸಬಲೀಕರಣ, ಕೃಷಿ ಕ್ಷೇತ್ರದ ಸಂಕಷ್ಟಗಳು, ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಚರ್ಚೆಗೆ ರೈತರ ವಿಜ್ಞಾನ ಕಾಂಗ್ರೆಸ್ ವೇದಿಕೆಯಾಯಿತು.

ವಿಜ್ಞಾನ ವಿಭಾಗದ 14 ವಿಭಾಗಗಳ ಕುರಿತು ವಿಜ್ಞಾನಿಗಳು, ವಿಷಯ ತಜ್ಞರು, ಪ್ರಾಧ್ಯಾಪಕರು, ನಾನಾ ವೇದಿಕೆಗಳಲ್ಲಿ ಚಿಂತನ–ಮಂಥನ ನಡೆಸಿದರು. ವಿಜ್ಞಾನ ಕ್ಷೇತ್ರದಲ್ಲಿ ಭಾರತ ಸಾಧಿಸಿರುವ ಆವಿಷ್ಕಾರ, ಸಂಶೋಧನೆ ಹಾಗೂ ವಿಜ್ಞಾನ–ತಂತ್ರಜ್ಞಾನ ಹೊಸ



Download From : www.kpscvaani.com




**"ಆವಿಷ್ಕಾರ, ಹಕ್ಕುಸ್ವಾಮ್ಯ, ಉತ್ಪಾದನೆ ಮತ್ತು ಸಮೃದ್ಧಿ ಎನ್ನುವುದು ವಿಜ್ಞಾನಿಗಳಿಗೆ ಮಂತ್ರವಾಗಬೇಕು. ಇವು ದೇಶವನ್ನು ಮುನ್ನಡೆಸುವ ನಾಲ್ಕು ಮಹಾನ್ ಹೆಜ್ಜೆಗಳು. ನೀವು ಹೊಸ ಆವಿಷ್ಕಾರಗಳನ್ನು ಮಾಡಿದರೆ ಅದಕ್ಕೆ ನಾವು ಪೇಟೆಂಟ್ ನೀಡುತ್ತೇವೆ. ಇದನ್ನು ಆಧರಿಸಿ ಉತ್ಪನ್ನಗಳ ಉತ್ಪಾದನೆಯ ಮೂಲಕ ದೇಶ ಸಮೃದ್ಧಿ ಪಥದಲ್ಲಿ ಸಾಗಬೇಕು. ಜನರಿಂದ ಜನರಿಗಾಗಿ ಎನ್ನುವುದು ನವ ಭಾರತದ ಗುರಿ ಆಗಬೇಕು. ಮುಂದಿನ ದಶಕದ ಆಡಳಿತವೂ ವಿಜ್ಞಾನ ಮತ್ತು ತಂತ್ರಜ್ಞಾನದಿಂದಲೇ ನಡೆಯಬೇಕು".**

**–ಶ್ರೀ ನರೇಂದ್ರ ಮೋದಿ, ಪ್ರಧಾನಮಂತ್ರಿ**


ಶೋಧಗಳ ಕುರಿತು ಬರೋಬ್ಬರಿ 1.22 ಲಕ್ಷ ಜನರು ವೀಕ್ಷಿಸಿ ವೈಜ್ಞಾನಿಕ ಮೇಳಕ್ಕೆ ಬೆಂಬಲ ಸೂಚಿಸಿದರು.

ಇದಲ್ಲದೆ ಮಕ್ಕಳ ವಿಜ್ಞಾನ ಕಾಂಗ್ರೆಸ್‌ನಲ್ಲಿ ದೇಶದ ಎಲ್ಲಾ ರಾಜ್ಯದ ವಿದ್ಯಾರ್ಥಿಗಳ ಅನ್ವೇಷಣೆಗಳಿದ್ದವು. ಚಂಡೀಗಢ ವಿದ್ಯಾರ್ಥಿಗಳು ತಯಾರಿಸಿದ್ದ ಸೈಕಲ್ ತುಳಿದು ನೀರು ಎತ್ತುವ ಸಾಧನ, ತೆಲಂಗಾಣ ವಿದ್ಯಾರ್ಥಿಗಳು ತಯಾರಿಸಿದ್ದ ಸನ್ ಗೋಡ್ ಸ್ಮಾರ್ಟ್ ಕಸದ ತೊಟ್ಟಿಗಳು ಎಲ್ಲರ ಗಮನ ಸೆಳೆದಿತ್ತು. ಮಹಿಳಾ ವಿಜ್ಞಾನ ಕಾಂಗ್ರೆಸ್, ವಿಜ್ಞಾನ ಸಂವಹನಕಾರರ ಕಾಂಗ್ರೆಸ್ ಕೂಡ ಯಶಸ್ವಿಯಾಗಿದ್ದಲ್ಲದೆ ಹಲವು ಕ್ಷೇತ್ರಗಳ ವಿವಿಧ ವಿಚಾರಗಳ ಬಗ್ಗೆ ಚರ್ಚೆಗಳು ನಡೆದವು. ದೇಶದ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮತ್ತು ವಿಜ್ಞಾನದ ಪ್ರಯೋಗಾಲಯಗಳು ತಮ್ಮ ಇತ್ತೀಚಿನ ಸಂಶೋಧನೆಗಳು ಮಾಹಿತಿ ಮತ್ತು ಹೊಸ ಆವಿಷ್ಕಾರದ ಸಾಧನಗಳನ್ನು ಪ್ರದರ್ಶಿಸಲಾಗಿತ್ತು.

ಜಿಕೆವಿಕೆಯಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಸಮಾವೇಶದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಗ್ರಾಮೀಣಾಭಿವೃದ್ಧಿ ವಿಷಯದ ಕುರಿತು ವಿಚಾರ ಮಂಡನೆ ಮತ್ತು ಚರ್ಚೆಗಳು ನಡೆದವು. ಗ್ರಾಮೀಣ ಪ್ರದೇಶದಲ್ಲಿ ಕೃಷಿಯಿಂದ ಹಿಡಿದು ವಿವಿಧ ಕ್ಷೇತ್ರಗಳಲ್ಲಿ ಬಳಕೆ ಯಾಗುತ್ತಿರುವ ತಂತ್ರಜ್ಞಾನಗಳು, ಡಿಜಿಟಲ್ ತಂತ್ರಜ್ಞಾನ ಬಳಕೆಯ ಬಗ್ಗೆ ಹಲವು ಗೋಷ್ಠಿಗಳಲ್ಲಿ ಬೆಳಕು ಚೆಲ್ಲಲಾಯಿತು.

### ಎಲ್ಲರ ಗಮನ ಸೆಳೆದ ರಕ್ಷಣಾ ಕವಚ

ಯುದ್ಧಭೂಮಿಯಲ್ಲಿ ಸೆಣಸಾಡುವ ಮಹಿಳಾ ಸೇನಾನಿಗಳಿಗೆಂದೇ ಅಭಿವೃದ್ಧಿಪಡಿಸಲಾಗಿರುವ ವಿಶೇಷ ರಕ್ಷಾ ಕವಚವನ್ನು ಸಮಾವೇಶದಲ್ಲಿ ಪ್ರದರ್ಶನಕ್ಕಿಡಲಾಗಿತ್ತು. ಸಿಆರ್‌ಪಿಎಫ್, ಆರ್‌ಎಎಫ್ ಮಹಿಳಾ ಸಿಬ್ಬಂದಿಯೂ ಇನ್ನು ಮುಂದೆ ಧೈರ್ಯದಿಂದ ಮುನ್ನುಗ್ಗಿ ಎದುರಾಳಿಗಳನ್ನು ಸದೆ ಬಡಿಯಬಹುದಾದ ರಕ್ಷಾ ಕವಚವನ್ನು ನಮ್ಮ ಹೆಮ್ಮೆಯ ಡಿಆರ್‌ಡಿಓ ಅಂಗ ಸಂಸ್ಥೆಯಾದ ಡಿಫೆನ್ಸ್ ಇನ್ಸ್ಟಿಟ್ಯೂಟ್ ಆಫ್ ಫಿಸಿಯಾಲಜಿ ಅಂಡ್ ಅಲೈಡ್ ಸೈನ್ಸಸ್ (ಡಿಐಪಿಎಎಸ್) ಅಭಿವೃದ್ಧಿಪಡಿಸಿದೆ. ಇದು ವಿಶ್ವದಲ್ಲೇ ಪ್ರಥಮ ಎನ್ನಲಾಗಿದೆ. ಈ ರಕ್ಷಾ ಕವಚವನ್ನು ಸ್ತ್ರೀ ದೇಹದ ಅವಯವಗಳ ದತ್ತಾಂಶಗಳನ್ನು ಆಧರಿಸಿ ಕರಾರುವಕ್ಕಾಗಿ ಅಭಿವೃದ್ಧಿ ಪಡಿಸಲಾಗಿದೆ. ಇದಕ್ಕೆ ಫುಲ್ ಬಾಡಿ ಪ್ರೊಟೆಕ್ಟರ್ ಎನ್ನಲಾಗುತ್ತದೆ. ಹಿಂಸಾತ್ಮಕ ಗಲಭೆ ಅಥವಾ ದೊಂಬಿಯನ್ನು ನಿಯಂತ್ರಿಸಲು ಕೂಡ ಇದು ಪರಿಣಾಮಕಾರಿ ರಕ್ಷಾ ಕವಚವಾಗಿದೆ. ಈ ರಕ್ಷಾ ಕವಚವನ್ನು ವಿಶೇಷ ಪಡೆಗಳ ಮಹಿಳಾ ಯೋಧರ ಅಂಗರಚನೆಗೆ ತಕ್ಕಂತೆ ತಯಾರಿಸಲಾಗುತ್ತದೆ. ಇದು ಕತ್ತು, ಎದೆ, ಪಕ್ಕೆಲುಬು,




ತೋಳುಗಳು, ಮೊಣ ಕೈ, ತೊಡೆಗಳು, ಮೊಣ ಕಾಲು, ಬೆನ್ನೆಲುಬಿಗೆ ರಕ್ಷಣೆ ನೀಡಲಿದೆ. ಮೀಡಿಯಂ, ಲಾರ್ಜ್, ಎಕ್ಸ್‌ಎಲ್ ಮೂರು ಅಳತೆಗಳಲ್ಲಿ ಸಿದ್ಧಪಡಿಸಿರುವ ರಕ್ಷಣಾ ಕವಚ ತಂತ್ರಜ್ಞಾನ ತಯಾರಿಕೆಯನ್ನು ಮೂರು ಖಾಸಗಿ ಕಂಪನಿಗಳಿಗೆ ವರ್ಗಾಯಿಸಲಾಗಿದೆ. ಈಗಾಗಲೇ ಮೂರು ರಾಜ್ಯಗಳು ಈ ರಕ್ಷಾ ಕವಚಗಳಿಗೆ ಬೇಡಿಕೆ ಸಲ್ಲಿಸಿವೆ.

ಇದನ್ನು ಧರಿಸುವುದರಿಂದ ಚಾಕು, ಚೂರಿ ಇರಿತದಿಂದ ಪಾರಾಗಬಹುದು. ಚೂಪಾದ ಸಾಧನಗಳಿಂದ ಚುಚ್ಚಿದರೆ ಕೂಡ ಏನೂ ಆಗುವುದಿಲ್ಲ. ದೇಹದ ಮೇಲೆ ಆ್ಯಸಿಡ್ ಎರಚಿದರೂ ಸುಡುವುದಿಲ್ಲ. ಪೆಟ್ರೋಲ್ ಬಾಂಬ್ ಅಥವಾ ಬೆಂಕಿ ಆಕಸ್ಮಿಕ ಸಂದರ್ಭದಲ್ಲಿ ಇದು ರಕ್ಷಣೆ ನೀಡುತ್ತದೆ.

### ಸಂವಾದ ನಡೆಸುವ ರೊಬೋಟ್

ಈ ರೊಬೋಟ್ ವಿಶೇಷತೆ ಎಂದರೆ, ಇದು ನಿಯಂತ್ರಣ ಹೊಂದಿರುವವರ ಜತೆ ಸಂವಾದ ನಡೆಸುತ್ತದೆ. ರಿಮೋಟ್ ಮೂಲಕ ನಿಯಂತ್ರಣ ಹೊಂದಿರುವ ವ್ಯಕ್ತಿಗೆ ತಾನು ಎಲ್ಲಿದ್ದೇನೆ, ತನ್ನ ಸುತ್ತ ಏನೇನಿದೆ, ಹೇಗೆ ಮುಂದಕ್ಕೆ ಹೋಗಬೇಕು, ಎಲ್ಲಿಗೆ ಹೋಗಬೇಕು ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತದೆ. ನಿಯಂತ್ರಿಸುವ ವ್ಯಕ್ತಿ ಅದಕ್ಕೆ ಉತ್ತರ ನೀಡುವ ಮೂಲಕ ಸೂಕ್ತ ಸೂಚನೆ ನೀಡಿದರೆ, ಅದರ ಪ್ರಕಾರವೇ ರೋಬೋಟ್ ಮುಂದುವರಿಯುತ್ತದೆ.

### ಮಹಿಳಾ ವಿಜ್ಞಾನ ಕಾಂಗ್ರೆಸ್

ಭಾರತೀಯ ವಿಜ್ಞಾನ ಕಾಂಗ್ರೆಸ್ ಅಂಗವಾಗಿ ನಡೆದ ಮಹಿಳಾ ವಿಜ್ಞಾನ ಸಮಾವೇಶ ಹಲವು ರೀತಿಯ ವೈಶಿಷ್ಟ್ಯಗಳಿಂದ ಕೂಡಿತ್ತು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಇತ್ತೀಚಿನ ಸಾಧನೆ ಅಥವಾ ಸಂಶೋಧನೆಯ ಪ್ರಗತಿ ಬಿಂಬಿಸುವ ಕಾರ್ಯಕ್ರಮಗಳು ನಡೆದವು. ಮಕ್ಕಳ ವಿಜ್ಞಾನ ಕಾಂಗ್ರೆಸ್‌ನಲ್ಲಿ ವಸ್ತುಪ್ರದರ್ಶನ ಮಳಿಗೆಗಳು ಮತ್ತು ಅವರು ಮಾಡಿರುವ ಸಂಶೋಧನೆಗಳು ಗಮನ ಸೆಳೆದವು. ವಿದ್ಯಾರ್ಥಿಗಳು ಮಾಡಿರುವ ಸಂಶೋಧನೆಗಳಿಗೆ ಹಿರಿಯ ವಿಜ್ಞಾನಿಗಳು ತಲೆ ದೂಗಿದ್ದಲ್ಲದೆ, ಹೊಸ ಚಿಂತನೆಗೆ ವಿದ್ಯಾರ್ಥಿಗಳನ್ನು ಹುರುದುಂಬಿಸಿದರು.

### ಒಂದೂವರೆ ಲಕ್ಷ ಜನರ ಭೇಟಿ

ಈ ವರ್ಷ ವಿವಿಧ ಗೋಷ್ಠಿಗಳಿಗೆ 10,889 ಪ್ರತಿನಿಧಿಗಳು, 4,535 ನೋಂದಾಯಿತ ಪ್ರತಿನಿಧಿಗಳು, 5,795 ವಿದ್ಯಾರ್ಥಿಗಳು, 225 ರೈತರು ಪಾಲ್ಗೊಂಡಿದ್ದರು. ಐದು ದಿನಗಳಲ್ಲಿ ವಿಜ್ಞಾನ ಕಾಂಗ್ರೆಸ್ ಸಮಾವೇಶಕ್ಕೆ 1,22,200 ಬಂದಿದ್ದರು. ಅಲ್ಲದೆ ದೇಶದ 51 ಮತ್ತು ವಿದೇಶದ 23 ವಿಜ್ಞಾನಿಗಳಿಂದ ಒಟ್ಟು 74 ಉಪನ್ಯಾಸಗಳನ್ನು ನಡೆಸಲಾಯಿತು.

### ಪ್ರಧಾನಿ ಅವರ ಆಶಯ:

ನವಭಾರತ ನಿರ್ಮಾಣವಾಗಲು ಕೃಷಿ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಹೊಸ ಕ್ರಾಂತಿ ನಡೆಯಬೇಕೆಂದಿರುವ ಪ್ರಧಾನಿ



**ದೂರದ ಪ್ರದೇಶಗಳಲ್ಲಿ ಮೌಲ್ಯವರ್ಧನೆ, ಸಂರಕ್ಷಣೆ, ಆರೋಗ್ಯ ರಕ್ಷಣೆ, ಶಿಕ್ಷಣ, ಗ್ರಾಮೀಣ ಕೃಷಿ ಸಮುದಾಯದ ಅಗತ್ಯತೆಯನ್ನು ಪೂರೈಸಲು ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯನ್ನು ಸ್ಥಾಪಿಸಿದ ಮೊದಲ ರಾಜ್ಯ ಕರ್ನಾಟಕ.**

**–ಶ್ರೀ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ,**

ನರೇಂದ್ರಮೋದಿ, ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದರು.107ನೇ ವಿಜ್ಞಾನ ಕಾಂಗ್ರೆಸ್ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಅಭಿವೃದ್ಧಿಯಲ್ಲಿ ಕೃಷಿ ಮತ್ತು ತಂತ್ರಜ್ಞಾನ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಹಾಗೂ ಗ್ರಾಮೀಣಾಭಿವೃದ್ಧಿಯಲ್ಲಿ ಅವುಗಳ ಪರಿಣಾಮಕಾರಿ ಬಳಕೆಯ ತುರ್ತು ಅಗತ್ಯವಿದೆ ಎಂದರು.

2020ರ ವೇಳೆಗೆ ನಾವು ಗ್ರಾಮೀಣ ಪ್ರದೇಶಗಳನ್ನು ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿಪಡಿಸಿ ನವಭಾರತ ನಿರ್ಮಿಸಬೇಕು. ತಂತ್ರಜ್ಞಾನವೇ ಭಾರತದ ಶಕ್ತಿಯಾಗಿದ್ದು, ವಿಜ್ಞಾನಿಗಳು ಪ್ರತಿದಿನ ಆವಿಷ್ಕಾರಗಳನ್ನು ನಡೆಸಬೇಕೆಂದು ಕರೆ ನೀಡಿದರು.

ಭಾರತದ ಶಕ್ತಿಯೇ ವಿಜ್ಞಾನವಾಗಿದ್ದು, ದೇಶದ ಅಭಿವೃದ್ಧಿಯು ತಂತ್ರಜ್ಞಾನ ಮತ್ತು ವಿಜ್ಞಾನದ ಮೇಲೆ ನಿಂತಿದೆ. ವಿಶ್ವದಲ್ಲಿ ಭಾರತ ವಿಜ್ಞಾನದಲ್ಲಿ 3ನೇ ಸ್ಥಾನದಲ್ಲಿದೆ. ಇದಕ್ಕೆ ಕಾರಣ ನಮ್ಮ ವಿಜ್ಞಾನಿಗಳು. ಚಂದ್ರಯಾನ–2ನಿಂದಾಗಿ ಇಡೀ ವಿಶ್ವವೇ ಇಂದು ಭಾರತದತ್ತ ನೋಡುತ್ತಿದೆ. ವಿಜ್ಞಾನಿಗಳ ಶ್ರಮವನ್ನು ಮರೆಯುವಂತಿಲ್ಲ. ದೇಶದ ಅಭಿವೃದ್ಧಿಯಲ್ಲಿ ನಿಮ್ಮ ಪಾತ್ರ ಹಿರಿದಾದುದು ಎಂದರು.

ಗ್ರಾಮೀಣಾ ಭಾಗಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನವಾಗುತ್ತಿರುವುದರ ಹಿಂದೆ ವಿಜ್ಞಾನಿಗಳ ಪಾತ್ರ ಬಹುದೊಡ್ಡದಿದೆ. ಕುಡಿಯುವ ನೀರು, ರಸ್ತೆ, ವಿದ್ಯುತ್, ಮೂಲ ಸೌಕರ್ಯ ಸೇರಿದಂತೆ ಪ್ರತಿ ಯೋಜನೆಗಳು ತಂತ್ರಜ್ಞಾನದ ಮೂಲಕವೇ ಕಾರ್ಯಗತವಾಗುತ್ತಿವೆ ಎಂದರು.

ಮನುಕುಲಕ್ಕೆ ಕಂಟಕವಾಗಿರುವ ಪ್ಲಾಸ್ಟಿಕ್ ಸಂಪೂರ್ಣವಾಗಿ ನಿರ್ಮೂಲನೆಯಾಗಬೇಕು. ಇದಕ್ಕೆ ಪರ್ಯಾಯವಾಗಿ ವಿಜ್ಞಾನಿಗಳು ಹೊಸದೊಂದು ಸಂಶೋಧನೆ ನಡೆಸಬೇಕು.

**"ವಿಜ್ಞಾನ ಯಾವಾಗಲೂ ಹೆಚ್ಚು ಶ್ರಮ, ಸಮಯ ಮತ್ತು ತ್ಯಾಗವನ್ನು ಬಯಸುತ್ತದೆ. ವಿಜ್ಞಾನ ವಿಷಯವನ್ನು ಆರಿಸಿಕೊಂಡ ವಿದ್ಯಾರ್ಥಿಗಳು ಹೆಚ್ಚು ಶ್ರಮವಹಿಸಿ ಕೆಲಸ ಮಾಡಿದರೆ ಗುರಿ ಸಾಧಿಸಬಹುದು. ವಿಜ್ಞಾನಕ್ಕೆ ಪದವಿಗಿಂತ (ಡಿಗ್ರಿಗಿಂತ) ಆಲೋಚನಾ ಕ್ರಮವೇ ಮುಖ್ಯ."**

**– ಪ್ರೊ.ಸಿ.ಎನ್.ಆರ್. ರಾವ್, ವಿಜ್ಞಾನಿ**





Download From : www.kpscvaani.com

### 3ಡಿ ಥಿಯೇಟರ್

ರಾಜ್ಯ ಸರ್ಕಾರ ಆಯೋಜಿಸಿದ್ದ 3ಡಿ ಥಿಯೇಟರ್ ಹಾಗೂ ಹಾಗೂ ಅಗಸ್ತ್ಯ ಸಂಸ್ಥೆಯ ಪ್ರಯೋಗಾಲಯದಲ್ಲಿ ವಿಜ್ಞಾನದ ಸೂಕ್ಷ್ಮತೆ ಕುರಿತು ಸಾವಿರಾರು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. 3ಡಿ ಥಿಯೇಟರ್‌ನಲ್ಲಿ ಜೀವಶಾಸ್ತ್ರಕ್ಕೆ ಸಂಬಂಧಿಸಿದ ವಿವರಣೆ, ಗಿಡ ಮರ ಬಳ್ಳಿಗಳ ಬೆಳವಣಿಗೆ ಬೀಜ ಮೊಳಕೆ ಒಡೆಯುವ ದೃಶ್ಯ, ಶಬ್ದದಿಂದ ಉಂಟಾಗುವ ಸನ್ನಿವೇಶಗಳು ಹಾಗೂ ಸೂಕ್ಷ್ಮ ವಸ್ತುಗಳ ಚಲನವಲನವನ್ನು ತೋರಿಸಲಾಯಿತು.

### ಸಮಾವೇಶದಲ್ಲಿ ಮೆಚ್ಚುಗೆ ಪಡೆದು ಬಹುಮಾನ ಪಡೆದ ಇಲಾಖೆ ಮತ್ತು ಸಂಸ್ಥೆಗಳು

- **ಅತ್ಯುತ್ತಮ ನಾವೀನ್ಯತೆ** – ಕೇಂದ್ರ ವಿಜ್ಞಾನ, ತಂತ್ರಜ್ಞಾನ ಇಲಾಖೆ; ರಾಜ್ಯ ಐಟಿ–ಬಿಟಿ; ವಿಜ್ಞಾನ ತಂತ್ರಜ್ಞಾನ ಇಲಾಖೆ.
- **ಅತ್ಯುತ್ತಮ ಸಂವಾದ** – ಡಿ.ಆರ್.ಡಿ.ಓ
- **ಅತ್ಯುತ್ತಮ ವಿನ್ಯಾಸ** – ಆದಾಯ ತೆರಿಗೆ, ಎಫ್.ಎಸ್.ಎಸ್.ಎ.ಐ., ಭೂ ವಿಜ್ಞಾನ ಇಲಾಖೆ
- **ಅತ್ಯುತ್ತಮ ರಾಜ್ಯ** – ಒಡಿಶಾ ವಿಜ್ಞಾನ–ತಂತ್ರಜ್ಞಾನ ಇಲಾಖೆ
- **ವಿಶೇಷ ಮಾನ್ಯತೆ** – ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ
- **ಅತ್ಯುತ್ತಮ ಮಾಹಿತಿಯುಕ್ತ** – ಐ.ಸಿ.ಎಂ,ಆರ್.




ಇಲ್ಲದಿದ್ದರೆ ಇದರಿಂದ ಅಪಾಯ ಕಟ್ಟಿಟ್ಟ ಬುತ್ತಿ. ಜಾಗತಿಕ ತಾಪಮಾನ ಬದಲಾಗುತ್ತಿರುವುದರಿಂದ ನೀರಿನ ಮರುಬಳಕೆಗೆ ನಾವು ಆದ್ಯತೆ ಕೊಡಬೇಕು. ನೀರಿನ ಸಂರಕ್ಷಣೆ ಮಾಡುವುದು ಅತ್ಯಗತ್ಯ ವೆಂದು ಪ್ರತಿಪಾದಿಸಿದರು.

2025ಕ್ಕೆ ದೇಶದ ಯಾವ ಭಾಗದಲ್ಲೂ ಕ್ಷಯರೋಗ ಇರಬಾರದು. ಜನರನ್ನು ಸಾಂಕ್ರಾಮಿಕ ರೋಗಗಳಿಂದ ಕಾಪಾಡುವುದು ಅವಶ್ಯಕ. ಕಡಿಮೆ ದರದಲ್ಲಿ ಔಷಧ ನೀಡುವಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಅನ್ವೇಷಣೆ, ಉತ್ಪಾದನೆ, ಅಭಿವೃದ್ಧಿಗೆ ವಿಜ್ಞಾನದ ತಾರ್ಕಿಕ ಜ್ಞಾನವೂ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

**ಬೆಂಗಳೂರು ಸ್ಮಾರ್ಟ್ ಅಪ್ ಸಿಟಿ**

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿ, ನಮ್ಮ ಸರ್ಕಾರ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಪೂರ್ಣ ಸಹಕಾರ ಕೊಡಲಿದೆ. ಬಜೆಟ್‌ನಲ್ಲೂ ಈ ಕ್ಷೇತ್ರಕ್ಕೆ ನಾವು ಹೆಚ್ಚಿನ ಗಮನ ಹರಿಸಿದ್ದೆವು. ಬೆಂಗಳೂರು ಇಂದು ಐಟಿಬಿಟಿ ರಾಜಧಾನಿ ಜೊತೆಗೆ ಸ್ಮಾರ್ಟ್ ಅಪ್ ನಗರವೂ ಆಗಿದೆ. ಇಲ್ಲಿ ಉದ್ಯಮಿಗಳಿಗೆ ಎಲ್ಲ ರೀತಿಯ ಸವಲತ್ತುಗಳನ್ನು ಕಲ್ಪಿಸಿಕೊಡುತ್ತಿದ್ದೇವೆ. ಭಾರತ ಮುಂಚೂಣಿ ನಗರವಾಗಿ ಬೆಳೆಯುತ್ತಿದೆ. ಹಾಗಾಗಿ ಇಡೀ ವಿಶ್ವವೇ ನಮ್ಮ ಕಡೆ ನೋಡುತ್ತಿದೆ ಎಂದರು.

**ಆಹಾರ ಭದ್ರತೆಗೆ ಉಪರಾಷ್ಟ್ರಪತಿ ಕರೆ**

ರೈತರ ಜ್ವಲಂತ ಸಮಸ್ಯೆಗಳನ್ನು ಪರಿಹರಿಸದಿದ್ದರೆ, ಮುಂದಿನ

**ಯೋಗ ವಿಜ್ಞಾನ**

ಇದೇ ಮೊದಲ ಬಾರಿಗೆ ವಿಜ್ಞಾನ ಕಾಂಗ್ರೆಸ್‌ನಲ್ಲಿ ಯೋಗ ವಿಜ್ಞಾನದ ಕುರಿತು ಮಾಹಿತಿಯನ್ನು ನೀಡಲಾಯಿತು. ಎಸ್.ವ್ಯಾಸ ವಿಶ್ವವಿದ್ಯಾಲಯದ ನಾಗೇಂದ್ರ ಅವರು ವಿಚಾರಸಂಕಿರಣದಲ್ಲಿ ಯೋಗದಿಂದಾಗುವ ವೈಜ್ಞಾನಿಕ ಅನುಕೂಲಗಳ ಕುರಿತು ಮಾಹಿತಿ ನೀಡಿದರು.



## ಕಾಯಿಲೆಗಳನ್ನು ಹೆಚ್ಚಿಸುತ್ತಿರುವ ಜೀವನ ಶೈಲಿ:



ಜಯದೇವ ಹೃದಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಹೃದಯ ತಜ್ಞರು ಮತ್ತು ನಿರ್ದೇಶಕರಾದ ಡಾ. ಸಿ.ಎನ್. ಮಂಜುನಾಥ್ ಅವರು ವಿಜ್ಞಾನ ಕಾಂಗ್ರೆಸ್ ಸಮಾವೇಶದಲ್ಲಿ ಸಾರ್ವಜನಿಕ ಉಪನ್ಯಾಸ ನೀಡಿ ಮಾತನಾಡುತ್ತಾ, ಇಂದಿನ ಮಕ್ಕಳು ಆಧುನಿಕ ಜೀವನ ಶೈಲಿಯಿಂದಾಗಿ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ಒಂಟಿತನ, ಉದ್ಯೋಗ ನಷ್ಟಗಳು ಮತ್ತು ದುರ್ಬಲ ಆರ್ಥಿಕತೆಯು ಜೀವನ ಶೈಲಿಯ ಕಾಯಿಲೆಗಳಿಗೆ ಕಾರಣವಾಗಿವೆ ಎಂದು ಅವರು ಹೇಳಿದರು.

ಜಯದೇವ ಸಂಸ್ಥೆಯು ಹೃದಯ ಸಂಬಂಧಿ ಕಾಯಿಲೆಗಳಿಗೆ ಚಿಕಿತ್ಸೆ ನೀಡುವಲ್ಲಿ ಭಾರತದಲ್ಲಿ ಪ್ರಥಮ ಸ್ಥಾನದಲ್ಲಿದೆ ಎಂಬ ಸಂತೋಷದ ಸಂಗತಿಯನ್ನು ಹಂಚಿಕೊಂಡರು. ಆದರೆ 2030 ರ ವೇಳೆಗೆ ಭಾರತದಲ್ಲಿ ಅತಿ ಹೆಚ್ಚು ಹೃದಯಘಾತ ಕಾಯಿಲೆ ಸಂಭವಿಸಲಿದೆ ಎಂಬ ಆತಂಕಕಾರಿ ವಿಷಯವನ್ನು ಹೇಳಿದರು. ಆ ವೇಳೆಗೆ ಭಾರತದಲ್ಲಿ ಪ್ರತಿ ನಿಮಿಷಕ್ಕೆ 4 ಜನರು ಹೃದಯಘಾತದಿಂದ ಸಾಯುತ್ತಾರೆ ಎಂದು ಅವರು ಉಲ್ಲೇಖಿಸಿದರು.

ಹೃದಯ ಸಂಬಂಧಿ ಕಾಯಿಲೆಯಿಂದ ದೂರವಿರಬೇಕಾದರೆ ಊಟದಲ್ಲಿ ಉಪ್ಪನ್ನು ಕಡಿಮೆ ಬಳಸಬೇಕು, ಧೂಮಪಾನ ಮತ್ತು ಮದ್ಯಪಾನ ತ್ಯಜಿಸಬೇಕು, ಒತ್ತಡವನ್ನು ಕಡಿಮೆ ಮಾಡಿಕೊಳ್ಳಬೇಕು ಹಾಗೂ ಜಡ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವಂತೆ ಅವರು ಸಲಹೆ ನೀಡಿದರು.

ಹೃದಯ ಕಾಯಿಲೆಯಿಂದ ಸಾವನ್ನಪ್ಪುವವರಲ್ಲಿ ಶೇಕಡ 65% ಜನರು ಹೃದಯಘಾತಕ್ಕೆ ಒಳಗಾದರೆ ಶೇಕಡ 20 % ವಾಲ್ವ್ಯುಲರ್ ಹೃದಯ ಕಾಯಿಲೆಯಿಂದ, ಶೇಕಡ 10% ಜನ್ಮಜಾತ ಹೃದಯ ಕಾಯಿಲೆಗಳಿಂದ, ಮತ್ತು ಶೇಕಡ 5% ಜನರು ಕಾರ್ಡಿಯೋಮಿಯೋಪಥೀಸ್‌ಗೆ ಒಳಗಾಗುತ್ತಿದ್ದಾರೆ. 45 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು ಮತ್ತು ಕುಟುಂಬದ ಇತಿಹಾಸ ಹೊಂದಿರುವ 55 ವರ್ಷದ ಮಹಿಳೆಯರು ಹೃದಯಾಘಾತಕ್ಕೆ ಗುರಿಯಾಗುತ್ತಿದ್ದಾರೆ ಎಂದರು.

ಹೃದಯ ಕಾಯಿಲೆಗೆ ಸಂಬಂಧಿಸಿದಂತೆ ಎಂಬಾಲಿಸಮ್, ಆಂಜಿಯೋಪ್ಲ್ಯಾಸ್ಟಿ ಮತ್ತು ಸ್ಟೆಂಟ್‌ನಂತಹ ಹೃದಯ ನಾಳಗಳಲ್ಲಿನ ಬ್ಲಾಕ್‌ಗಳನ್ನು ತೆಗೆದು ಹಾಕಲು ವೈದ್ಯರು ಆವಿಷ್ಕರಿಸಿರುವ ವೈದ್ಯಕೀಯ ವಿಧಾನಗಳನ್ನು ಕೂಡ ಅವರು ಈ ಸಂದರ್ಭದಲ್ಲಿ ವಿವರಿಸಿದರು.

ಹೃದಯಘಾತದ ಲಕ್ಷಣಗಳನ್ನು ವಿವರಿಸಿದ ಅವರು ಎದೆ ನೋವು, ದವಡೆ, ಕುತ್ತಿಗೆ, ಭುಜಗಳು, ಬೆನ್ನು ಮೇಲ್ಭಾಗದಲ್ಲಿ ನೋವು, ಗ್ಯಾಸ್ಟ್ರಿಕ್, ಅಸಿಡಿಟಿ, ಬೆವರುವುದು, ವಾಂತಿ ಈ ಮುಂತಾದ ಲಕ್ಷಣಗಳು ಕಾಣಿಸಿಕೊಂಡಲ್ಲಿ ಕೂಡಲೇ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಬೇಕು. ಹೃದಯ ಕಾಯಿಲೆಗೆ ಸಮಯ ಅತ್ಯಂತ ಮುಖ್ಯವಾಗುತ್ತದೆ. ಸರಿಯಾದ ಸಮಯಕ್ಕೆ ವೈದ್ಯಕೀಯ ಚಿಕಿತ್ಸೆ ದೊರೆತರೆ ಮಾತ್ರ ಹೃದಯ ಕಾಯಿಲೆಯ ವ್ಯಕ್ತಿಯ ಜೀವ ಉಳಿಸಲು ಸಾಧ್ಯವೆಂದು ಅವರು ತಿಳಿಸಿದರು.

ಆಧುನಿಕ ವೈದ್ಯಕೀಯ ತಂತ್ರಜ್ಞಾನವು ಸುಲಭವಾಗಿ ಲಭ್ಯವಿದೆ. ಹಾಗೇ ಆಧುನಿಕ ರೋಗವನ್ನು ನಿಯಂತ್ರಿಸಲು ಸಾಧ್ಯವಿದೆ. ಹಾಗಾಗಿ ನಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವ ಮೂಲಕ ಹೃದಯ ರೋಗದಿಂದ ದೂರ ಇರಬಹುದು. ಆಧುನಿಕ ಜೀವನ ಶೈಲಿಯಲ್ಲಿ ವ್ಯಾಯಾಮದ ಕೊರತೆ ಇದೆ. 3 ರಿಂದ 4 ಗಂಟೆಗಳಿಗಿಂತ ಹೆಚ್ಚು ಕಾಲ ಒಂದೇ ಸ್ಥಳದಲ್ಲಿ ಕುಳಿತುಕೊಳ್ಳುವುದು ಹೃದ್ರೋಗಗಳು ಮತ್ತು ಸ್ತನ ಕ್ಯಾನ್ಸರ್ ಗೆ ಆಹ್ವಾನ ನೀಡಿದಂತೆ. ಇತ್ತೀಚಿಗೆ ಹಳ್ಳಿಗಳಲ್ಲಿಯೂ ಹೃದ್ರೋಗವು ವ್ಯಾಪಿಸುತ್ತಿದೆ. ಆದ್ದರಿಂದ ಜಡತ್ವವನ್ನು ಬಿಟ್ಟು ನಮ್ಮ ದೈನಂದಿನ ಚಟುವಟಿಕೆಯಲ್ಲಿ ವ್ಯಾಯಾಮವನ್ನು ಅಳವಡಿಸಿಕೊಳ್ಳುವಂತೆ ಅವರು ಕಿವಿಮಾತು ಹೇಳಿದರು.

ವಾಯು ಮಾಲಿನ್ಯ ಕೂಡ ಹೃದಯ ಸಂಬಂಧಿ ಕಾಯಿಲೆಗಳಿಗೆ ಪ್ರಮುಖ ಕಾರಣವಾಗಿದೆ., ಜಯದೇವ ಹೃದ್ರೋಗ ಸಂಸ್ಥೆಯು ಕಳೆದ 5 ವರ್ಷಗಳಲ್ಲಿ ಮೊದಲ ಬಾರಿಗೆ ಹೃದಯಾಘಾತಕ್ಕೆ ಒಳಪಟ್ಟವರ ಕುರಿತು ನಡೆಸಿದ ಸಮೀಕ್ಷೆಯಲ್ಲಿ ಸಣ್ಣ ವಯಸ್ಸಿನಲ್ಲಿಯೇ ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆಗೆ ದಾಖಲಾದವರ ಪ್ರಮಾಣದಲ್ಲಿ ಶೇ 22 ರಷ್ಟು ಹೆಚ್ಚಳವಾಗಿದೆ ಎಂದರು.

ಸೂಕ್ತ ಸಮಯದಲ್ಲಿ ರೋಗಿಗಳಿಗೆ ವೈದ್ಯಕೀಯ ಚಿಕಿತ್ಸೆ ದೊರೆಯುವುದು ಬಹು ಮುಖ್ಯ ಎಂದು ತಿಳಿಸಿದರು. ಭಾರತ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚುತ್ತಿದ್ದು, ಇದನ್ನು ನಿಯಂತ್ರಿಸಲು ಬಾಲ್ಯದಿಂದಲೇ ಸೂಕ್ತ ಜೀವನಶೈಲಿಯ ಅಳವಡಿಕೆ ಅಗತ್ಯ. ಕಾಯಿಲೆಯ ಲಕ್ಷಣಗಳನ್ನು ಶೀಘ್ರವಾಗಿ ಗುರುತಿಸಿ ಸಮಗ್ರ ಮತ್ತು ಬಹುವಿಧ ಚಿಕಿತ್ಸಾ ವಿಧಾನ ಅನುಸರಿಸಿದಲ್ಲಿ ಹೃದಯದ ಕಾಯಿಲೆಗಳನ್ನು ನಿಯಂತ್ರಿಸಬಹುದು ಎಂದು ಅವರು ಅಭಿಪ್ರಾಯಪಟ್ಟರು.

ದಿನಗಳಲ್ಲಿ ರೈತರು ಅನ್ಯ ವೃತ್ತಿಗಳಿಗೆ ವಲಸೆ ಹೋಗುತ್ತಾರೆ. ಇದರಿಂದ ದೇಶ ಕೃಷಿ ಬಿಕ್ಕಟ್ಟು ಮತ್ತು ಆಹಾರ ಕೊರತೆಯನ್ನು ಎದುರಿಸ ಬೇಕಾಗುತ್ತದೆ ಎಂದು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಎಚ್ಚರಿಕೆ ನೀಡಿದರು.

107 ನೇ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೃಷಿಕರ ಸಮಸ್ಯೆಗಳನ್ನು ಬಗೆಹರಿಸಲು ವೈಜ್ಞಾನಿಕ ಸಮುದಾಯ ದೀರ್ಘ ಅವಧಿಯ ಪರಿಹಾರ ಒದಗಿಸಬೇಕು ಎಂದರು.

ಭಾರತದಂತಹ ಬೃಹತ್ ರಾಷ್ಟ್ರ ಆಹಾರದ ಆಮದನ್ನು ನೆಚ್ಚಿಕೊಳ್ಳಲು ಸಾಧ್ಯವಿಲ್ಲ. ನಾವು ನಮ್ಮದೇ ಆದ ಆಹಾರ ಭದ್ರತೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ವಿಜ್ಞಾನಿಗಳು ಗಮನ ಕೇಂದ್ರೀಕರಿಸಬೇಕು ಎಂದು ವೆಂಕಯ್ಯ ನಾಯ್ಡು ತಿಳಿಸಿದರು.

ಜಾಗತಿಕ ಬಿಸಿ ಏರುವಿಕೆ ಮತ್ತು ಹವಾಮಾನ



Download From : www.kpscvaani.com



**ಗ್ರಾಮೀಣ ಪ್ರದೇಶಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಇತ್ತೀಚಿನ ಬೆಳವಣಿಗೆಗಳ ಲಾಭವನ್ನು ಪಡೆದುಕೊಳ್ಳುವ ಬಲವಾದ ಅವಶ್ಯಕತೆ ಇದೆ. ಇದು ಗ್ರಾಮೀಣ ಜನಸಂಖ್ಯೆಯ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಲು/ ಸುಧಾರಿಸುವ ಸಮಯ ಆಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನವು ರಾಷ್ಟ್ರದ ಬೆಳವಣಿಗೆ ಮತ್ತು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿ ಹೊಂದಲಾಗಿದೆ. ಈ ಅಧಿವೇಶನ ದೇಶ ಮತ್ತು ವಿದೇಶಗಳ ವಿಜ್ಞಾನ ಭ್ರಾತೃತ್ವಕ್ಕೆ ಅತ್ಯುತ್ತಮ ವೇದಿಕೆ ಆಗಿತ್ತು.**

ಪ್ರೊ. ಕೆ.ಎಸ್. ರಂಗಪ್ಪ, ಅಧ್ಯಕ್ಷರು,
107ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಅಧಿವೇಶನ,






ಬದಲಾವಣೆಯ ಪರಿಣಾಮಗಳು ಇನ್ನು ಮುಂದೆ ಸಾಮಾನ್ಯ. ಇದರಿಂದ ಹವಾಮಾನ ನಮ್ಮ ನಿರೀಕ್ಷೆಗೆ ತಕ್ಕ ಹಾಗೆ ಇರುವುದಿಲ್ಲ. ಪ್ರಾಕೃತಿಕ ದುರಂತದ ಸಂದರ್ಭದಲ್ಲಿ ರೈತರ ಸಮಸ್ಯೆಗಳನ್ನು ಶಮನಗೊಳಿಸುವುದು ಹೇಗೆ ಎಂಬ ಬಗ್ಗೆ ವಿಜ್ಞಾನಿಗಳು ಆಲೋಚನೆ ನಡೆಸಬೇಕಿದೆ ಎಂದರು.

**ಸಂಶೋಧನೆಗೆ ಹೊಸ ನೀತಿ**

ವಿಜ್ಞಾನ ಪ್ರಬಂಧ(ಸೈನ್ಸ್ ಪೇಪರ್ಸ್) ಪ್ರಕಟಣೆಯಲ್ಲಿ ಭಾರತ ಈಗ ವಿಶ್ವದಲ್ಲಿ ಮೂರನೇ ಸ್ಥಾನಕ್ಕೇರಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಚಿವ ಡಾ. ಹರ್ಷವರ್ಧನ್ ತಿಳಿಸಿದರು.

ವಿಜ್ಞಾನ ಕಾಂಗ್ರೆಸ್‌ನಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಜೆಎನ್‌ಸಿಎಎಸ್‌ಆರ್ ವಿಶ್ವದಲ್ಲಿ 7 ನೇ ಅತ್ಯುತ್ತಮ ಸಂಸ್ಥೆಯಾಗಿ ಹೊರ ಹೊಮ್ಮಿದೆ. ಮೂಲಭೂತ ವಿಜ್ಞಾನ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗಾಗಿ ಈ ಸ್ಥಾನ ಸಿಕ್ಕಿದೆ ಎಂದರು.

ಸರ್ಕಾರದ ಅನುದಾನದಲ್ಲಿ ಸಂಶೋಧನೆ ಕೈಗೊಳ್ಳುವ ವಿಜ್ಞಾನಿಗಳು ಅದರ ಫಲಿತಾಂಶ ಸಾರ್ವಜನಿಕಗೊಳಿಸುವ ಅಂಶ ಒಳಗೊಂಡ ಹೊಸ ನೀತಿಯನ್ನು ರೂಪಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಮಾದರಿಯಲ್ಲೇ ವೈಜ್ಞಾನಿಕ ಸಾಮಾಜಿಕ ಹೊಣೆಗಾರಿಕೆ ನೀತಿಯ ಭಾಗವಾಗಿರುತ್ತದೆ ಎಂದರು.

ಈ ಹಿಂದೆ 1917, 1924, 1932, 1946, 1951, 1971, 1987 ಮತ್ತು 2003ರಲ್ಲಿ ಭಾರತೀಯ ವಿಜ್ಞಾನ ಸಮ್ಮೇಳನದ ಮಹಾ ಅಧಿವೇಶನಕ್ಕೆ ಬೆಂಗಳೂರು ಸಾಕ್ಷಿಯಾಗಿತ್ತು. 1982 ಮತ್ತು 2016ರಲ್ಲಿ "ಸಾಂಸ್ಕೃತಿಕ ನಗರ" ಮೈಸೂರು ನಗರ ಆತಿಥ್ಯ ವಹಿಸಿತ್ತು. 2020ರಲ್ಲಿ ನಡೆದ ಸಮ್ಮೇಳನವೂ ಸೇರಿದಂತೆ ಒಟ್ಟು 11 ಬಾರಿ ವಿಜ್ಞಾನದ ಮಹಾ ಸಮ್ಮೇಳನಕ್ಕೆ ಕರುನಾಡು ವೇದಿಕೆ ಆಯಿತು. 107ನೇ ಭಾರತೀಯ ವಿಜ್ಞಾನ ಸಮ್ಮೇಳನಕ್ಕೆ ಕನ್ನಡಿಗರೇ ಆದ ಪ್ರೊ. ಕೆ.ಎಸ್.ರಂಗಪ್ಪ ಅವರು ಅಧ್ಯಕ್ಷರಾಗಿ ಮುನ್ನಡೆಸಿದರು.

**ವಿಜಯಲಕ್ಷ್ಮೀ ಸಕ್ಸೇನಾ ಹೊಸ ಅಧ್ಯಕ್ಷೆ**

ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಸ್ಥೆಯ ಹೊಸ ಅಧ್ಯಕ್ಷೆಯಾಗಿ ಪ್ರಾಣಿಶಾಸ್ತ್ರಜ್ಞೆ ಡಾ.ವಿಜಯಲಕ್ಷ್ಮೀ ಸಕ್ಸೇನಾ ಆಯ್ಕೆಯಾಗಿದ್ದಾರೆ. ಮುಂದಿನ ವಿಜ್ಞಾನ ಕಾಂಗ್ರೆಸ್ ಇವರ ನೇತೃತ್ವದಲ್ಲೇ ನಡೆಯಲಿದೆ. ಹಾಲಿ ಅಧ್ಯಕ್ಷ ಡಾ.ರಂಗಪ್ಪ ಅವರು ಸಕ್ಸೇನಾ ಅವರಿಗೆ ವಿಜ್ಞಾನ ಜ್ಯೋತಿಯನ್ನು ಹಸ್ತಾಂತರಿಸಿದರು. ■





## ತುಮಕೂರಿನಲ್ಲಿ ಕಿಸಾನ್ ಸಮ್ಮಾನ್ ಕಾರ್ಯಕ್ರಮ

# ಪ್ರಧಾನಿಯವರಿಂದ ರೈತರಿಗೆ ಕೃಷಿ ಕರ್ಮಣ ಪ್ರಶಸ್ತಿ ವಿತರಣೆ

ಡಿ. ಮಂಜುನಾಥ್

ಜನವರಿ 2, 2020 ರಂದು ನೆರೆದಿದ್ದ ರೈತರಿಗೆ ತವಕ, ಪ್ರಶಸ್ತಿ ಪಡೆಯುತ್ತಿದ್ದ ರೈತರ ಮೊಗದಲ್ಲಿ ಸಂತಸದ ನಗೆ, ಪ್ರಧಾನಿಗಳನ್ನು ಹತ್ತಿರದಿಂದ ನೋಡಿ ಅವರ ಮಾತನ್ನು ಆಲಿಸಬೇಕು ಎಂದು ಆಸೆಗಣ್ಣಿನಿಂದ ಕಾಯುತ್ತಿದ್ದ ಸಮೂಹ, ಈ ಎಲ್ಲಾ ಚಿತ್ರಣಗಳು ಕಂಡುಬಂದಿದ್ದು, ಕೇಂದ್ರ ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ಸಚಿವಾಲಯದವತಿಯಿಂದ ತುಮಕೂರು ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ 2016–17 ಹಾಗೂ 2017–18 ನೇ ಸಾಲಿನ ಕೃಷಿ ಕರ್ಮಣ ಪ್ರಶಸ್ತಿ ಪ್ರದಾನ ಹಾಗೂ ಮೀನುಗಾರರಿಗೆ ಸೌಲಭ್ಯ ವಿತರಣೆಯ ಸಮಾರಂಭದಲ್ಲಿ.

ಈ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಟನ್ ಒತ್ತುವ ಮೂಲಕ 3 ನೇ ಕಂತಾಗಿ 6 ಕೋಟಿ ಫಲಾನುಭವಿ ಕೃಷಿ ಕುಟುಂಬಗಳ ರೈತರ ಖಾತೆಗೆ ನೇರವಾಗಿ ತಲಾ 2000 ರೂ ನಂತೆ 12 ಸಾವಿರ ಕೋಟಿ ರೂ ಹಣವನ್ನು ವರ್ಗಾವಣೆ ಮಾಡಿದರು. ಕರ್ನಾಟಕದ ಆಯ್ದ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು(ಕೆಸಿಸಿ)ವಿತರಿಸಿದರು. 8 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಫಲಾನುಭವಿಗಳಿಗೆ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಪ್ರಮಾಣಪತ್ರಗಳನ್ನು ನೀಡಿದರು. ಅಲ್ಲದೇ ವಿಶೇಷವಾಗಿ ತಮಿಳುನಾಡಿನ ಆಯ್ದ ಮೀನುಗಾರರಿಗೆ ಆಳ ಸಮುದ್ರದ ಮೀನುಗಾರಿಕಾ ಹಡಗುಗಳು ಮತ್ತು ಮೀನುಗಾರಿಕೆ ಹಡಗು ಟ್ರಾನ್ಸ್‌ಪಾಂಡರ್ ಕೀಲಿಗಳನ್ನು ಪ್ರಧಾನಿಗಳು ಹಸ್ತಾಂತರಿಸಿದರು.

ಕನ್ನಡದಲ್ಲಿಯೇ ಹೊಸ ವರುಷ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕೋರಿದ್ದು ಜನಸ್ತೋಮಕ್ಕೆ ಹರ್ಷವನ್ನುಂಟುಮಾಡಿತು. ಅಲ್ಲದೆ ಮೋದಿ ಅವರು ಭಾಷಣ ಮುಗಿಸಿದ ಎರಡು ಗಂಟೆಯೊಳಗೆ ಅರ್ಹ ರೈತರ ಖಾತೆಗಳಿಗೆ ಹಣ ಜಮೆ ಆಗಿರುವ ಬಗ್ಗೆ ಮೊಬೈಲ್‌ಗೆ ಸಂದೇಶ ಬಂದಿದ್ದು ವಿಶೇಷವಾಗಿತ್ತು.

ಹೊಸ ವರ್ಷದಲ್ಲಿ ಹೊಸ ದಶಕದ ಆರಂಭದಲ್ಲಿ ಅನ್ನದಾತ ರೈತ ಸಹೋದರ ಸಹೋದರಿಯರನ್ನು ನೋಡುತ್ತಿರುವುದು ನನ್ನ ಪುಣ್ಯ. ಅವರ ಶ್ರಮಕ್ಕಾಗಿ ದೇಶದ ರೈತರಿಗೆ 130 ಕೋಟಿ ಜನರ ಪರವಾಗಿ ಧನ್ಯವಾದ ಅರ್ಪಿಸಿದರು.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 6 ಕೋಟಿ ರೈತರ ವೈಯಕ್ತಿಕ ಖಾತೆಗಳಿಗೆ ನೇರವಾಗಿ ಹಣ ವಿತರಿಸಿದ ಐತಿಹಾಸಿಕ ಕ್ಷಣಕ್ಕೆ ಕರ್ನಾಟಕದ ನೆಲ ಸಾಕ್ಷಿಯಾಗಿದ್ದಕ್ಕೆ ತುಂಬಾ ಸಂತೋಷ ವ್ಯಕ್ತಪಡಿಸಿದರು. ಹಾಗೆಯೇ ಈ ಯೋಜನೆಯಡಿ 4ನೇ ಹಂತದ ಹಣ ಬಿಡುಗಡೆಗಾಗಿ 12,000 ಕೋಟಿ ರೂ.ಗಳನ್ನು ಮೀಸಲಿಟ್ಟಿರುವುದಾಗಿ ಅವರು ತಿಳಿಸಿದರು.

ದೇಶದಲ್ಲಿ ಈ ಮೊದಲು ಸರ್ಕಾರದಿಂದ ಫಲಾನುಭವಿಗಳಿಗೆ 1 ರೂ ನೆರವು ನೀಡಿದರೆ ಅವರಿಗೆ 15 ಪೈಸೆ ಮಾತ್ರ ಸಿಗುತ್ತಿತ್ತು. ಉಳಿದ 85 ಪೈಸೆ ಮಧ್ಯವರ್ತಿಗಳ ಪಾಲಾಗುತ್ತಿತ್ತು. ಆದರೆ ಇಂದು ದೆಹಲಿಯಲ್ಲಿ ಬಿಡುಗಡೆ ಮಾಡುವ ಹಣ ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆಯಾಗುತ್ತದೆ. ಹಾಗೆಯೇ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ನೋಂದಣಿಯಾಗದ



Download From : www.kpscvaani.com



## 32 ರೈತರಿಗೆ ಕೃಷಿ ಕರ್ಮಣ ಪ್ರಶಸ್ತಿ

ದೇಶದ 32 ಪ್ರಗತಿಪರ ರೈತರಿಗೆ ಪ್ರಧಾನಿ ಮೋದಿ ಅವರು ಕೃಷಿ ಕರ್ಮಣ ಪ್ರಶಸ್ತಿ ನೀಡಿ ಗೌರವಿಸಿದರು. ಇದರಲ್ಲಿ ನಮ್ಮ ರಾಜ್ಯದಿಂದ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಜಿ. ರಂಗಪ್ಪ, ತುರುವೇಕೆರೆ ತಾಲ್ಲೂಕಿನ ಮಹಲಿಂಗಣ್ಣ ಹಾಗೂ ಗದಗ ಜಿಲ್ಲೆಯ ಶರಣು ಪ್ರಕಾಶ್ ಅವರು ಪ್ರಶಸ್ತಿ ಪಡೆದರು.

ಎಲ್ಲಾ ರೈತರನ್ನು ಈ ವರ್ಷದಲ್ಲಿ ಸೇರ್ಪಡೆ ಮಾಡಲು ಕ್ರಮಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದ್ದಾರೆ.

ಹಲವಾರು ದಶಕಗಳಿಂದ ಸ್ಥಗಿತಗೊಂಡಿದ್ದ ನೀರಾವರಿ ಯೋಜನೆಗಳನ್ನು ಈಗ ಜಾರಿಗೆ ತರಲಾಗುತ್ತಿದ್ದು, ಬೆಳೆ ವಿಮೆ, ಮಣ್ಣಿನ ಆರೋಗ್ಯ ಕಾರ್ಡ್ ಮತ್ತು ಶೇ.100 ಬೇವು ಲೇಪಿತ ಯೂರಿಯಾ ಮುಂತಾದ ಯೋಜನೆಗಳೊಂದಿಗೆ ಕೇಂದ್ರವು ರೈತರ ಹಿತಾಸಕ್ತಿಗೆ ಯಾವಾಗಲೂ ಆದ್ಯತೆ ನೀಡಿದೆ. ಬಹಳ ವರ್ಷಗಳಿಂದ ಬೇಡಿಕೆ ಇದ್ದ ಕನಿಷ್ಠ ಬೆಂಬಲ ಬೆಲೆಯನ್ನು ಒಂದೂವರೆ ಪಟ್ಟು ಹೆಚ್ಚಳ ಮಾಡಲು ಚಿಂತನೆ ಮಾಡಲಾಗಿದೆ. ಕಿಸಾನ್ ಸಮ್ಮಾನ್ ಯೋಜನೆಯಡಿ ಹಣ್ಣು–ತರಕಾರಿಗಳ ಶೇಖರಣೆಯ ಕ್ಷಮತೆಯನ್ನು ಹೆಚ್ಚಿಸಲಾಗುವುದು ಎಂದು ಪ್ರಧಾನಿಯವರು ತಿಳಿಸಿದರು.

ದೇಶದ ಆರ್ಥಿಕತೆಗೆ 5 ಟ್ರಿಲಿಯನ್ ಕೊಡುಗೆ ನೀಡುತ್ತಿರುವ ಕೃಷಿಯನ್ನು ರಫ್ತು ಕೇಂದ್ರಿತವಾಗಿ ಮಾಡಲಾಗುವುದು. ದಕ್ಷಿಣ ಭಾರತದಲ್ಲಿ ಪ್ರಕೃತಿದತ್ತವಾಗಿ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಅವಕಾಶವಿದೆ. ಇಲ್ಲಿನ ಮಣ್ಣು, ಹವಾಮಾನ ಇದರ ಜೊತೆಗೆ ಸಮುದ್ರ ಸಮೀಪವಿರುವುದೆ ಇದಕ್ಕೆ ಕಾರಣ. ಆದ್ದರಿಂದ ದಕ್ಷಿಣ ಭಾರತದ ಈ ಶಕ್ತಿ ವ್ಯವಸ್ಥೆಯನ್ನು ನ್ಯೂ ಇಂಡಿಯಾ ರಫ್ತು ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಿರುವುದಾಗಿ ಮೋದಿ ಅವರು ತಿಳಿಸಿದ್ದಾರೆ.

ಸರ್ಕಾರದ ಪ್ರಯತ್ನದಿಂದಾಗಿ, ಭಾರತದಲ್ಲಿ ಮಸಾಲೆ ಪದಾರ್ಥಗಳ ಉತ್ಪಾದನೆ ಮತ್ತು ರಫ್ತು ಎರಡೂ ಗಣನೀಯವಾಗಿ ಹೆಚ್ಚಾಗಿವೆ. ಭಾರತದ ಸಾಂಬಾರು ಪದಾರ್ಥಗಳ ಉತ್ಪಾದನೆಯು 2.5 ದಶಲಕ್ಷ ಟನ್‌ಗಳಿಗಿಂತ ಹೆಚ್ಚಾಗಿದೆ. ಆದ್ದರಿಂದ ರಫ್ತಿನಲ್ಲಿ ಸುಮಾರು 15 ಸಾವಿರ ಕೋಟಿಯಿಂದ 19 ಸಾವಿರ ಕೋಟಿಯವರೆಗೆ ಹೆಚ್ಚಳವಾಗಿದೆ.

ತೋಟಗಾರಿಕೆಯನ್ನು ಹೊರತುಪಡಿಸಿ, ದ್ವಿದಳ ಧಾನ್ಯಗಳು, ತೈಲ ಮತ್ತು ಒರಟು ಧಾನ್ಯಗಳ ಉತ್ಪಾದನೆಯಲ್ಲಿ ದಕ್ಷಿಣ ಭಾರತಕ್ಕೂ ಹೆಚ್ಚಿನ ಪಾಲು ಇದೆ. ಭಾರತದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ಉತ್ತೇಜಿಸಲು ಬೀಜ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಅದರಲ್ಲಿ 30ಕ್ಕೂ ಹೆಚ್ಚು ಕೇಂದ್ರಗಳು ಕರ್ನಾಟಕ, ಆಂಧ್ರ, ಕೇರಳ, ತಮಿಳುನಾಡು ಮತ್ತು ತೆಲಂಗಾಣದಲ್ಲಿ ಇರುವುದು ಇದಕ್ಕೆ ಸಾಕ್ಷಿ.

ಬೆಳಗಾವಿ, ಮೈಸೂರಿನ ದಾಳಿಂಬೆ, ಚಿಕ್ಕಬಳ್ಳಾಪುರ, ಬೆಂಗಳೂರಿನ ಗುಲಾಬಿ ಈರುಳ್ಳಿ, ಚಿಕ್ಕಮಗಳೂರು, ಕೊಡಗು ಮತ್ತು ಹಾಸನದ ಕಾಫಿ ಬೆಳೆಗಳ ಪ್ರಸಿದ್ಧಿಯನ್ನು ಉಲ್ಲೇಖಿಸಿದ ಪ್ರಧಾನಿ ಅವರು ದಕ್ಷಿಣಭಾರತದಲ್ಲಿ ಸಾಂಬಾರ ಪದಾರ್ಥಗಳು, ಮತ್ತು ಮೀನುಗಾರಿಕೆ ಬೆಳವಣಿಗೆಗೆ ವಿಪುಲ ಅವಕಾಶವಿದೆ ಎಂದು ಅಭಿಪ್ರಾಯಪಟ್ಟರು.

**ಮೀನುಗಾರಿಕೆ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ:**

ಮೀನುಗಾರಿಕೆ ಕ್ಷೇತ್ರದ ಬಗ್ಗೆ ಸರ್ಕಾರದ ಪ್ರಯತ್ನಗಳನ್ನು ಉಲ್ಲೇಖಿಸಿದ ಪ್ರಧಾನಿಯವರು ಈ ವಲಯವನ್ನು ಬಲಪಡಿಸಲು ಸರ್ಕಾರ ಮೂರು ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಮೊದಲನೆಯದು ಮೀನುಗಾರರಿಗೆ ಆರ್ಥಿಕ ನೆರವು ನೀಡುವ ಮೂಲಕ ಗ್ರಾಮಗಳಲ್ಲಿ ಮೀನುಗಾರಿಕೆಯನ್ನು ಪ್ರೋತ್ಸಾಹಿಸುವುದು. ಎರಡನೆಯದಾಗಿ ನೀಲಿಕ್ರಾಂತಿ ಯೋಜನೆಯಡಿ ಮೀನುಗಾರಿಕೆ ದೋಣಿಗಳನ್ನು ಆಧುನೀಕರಿಸುವುದು. ಮೂರನೆಯದಾಗಿ ಮೀನು ವ್ಯಾಪಾರ ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಆಧುನಿಕ ಮೂಲಸೌಕರ್ಯಗಳನ್ನು ನಿರ್ಮಿಸುವುದು ಎಂದು ತಿಳಿಸಿದರು.

ಇದೇ ಮೊದಲ ಬಾರಿಗೆ ಮೀನುಗಾರರನ್ನು ಕಿಸಾನ್ ಕ್ರೆಡಿಟ್ ಕಾರ್ಡ್ ಸೌಲಭ್ಯದೊಂದಿಗೆ ಜೋಡಿಸಲಾಗಿದೆ. ಮೀನುಗಾರರ ಅನುಕೂಲಕ್ಕಾಗಿ ದೊಡ್ಡ ನದಿಗಳಲ್ಲಿ ಮತ್ತು ಸಮುದ್ರದಲ್ಲಿ ಹೊಸ ಮೀನುಗಾರಿಕೆ ಬಂದರುಗಳನ್ನು ನಿರ್ಮಿಸಲಾಗುತ್ತಿದೆ. ಆಳ ಸಮುದ್ರದ ಮೀನುಗಾರಿಕೆಗಾಗಿ ಮೀನುಗಾರರ ದೋಣಿಗಳನ್ನು ಆಧುನೀಕರಿಸಲಾಗುತಿದ್ದು, ಇಸ್ರೊ ಸಹಾಯದಿಂದ ಮೀನುಗಾರರ ರಕ್ಷಣೆಗಾಗಿ ದೋಣಿಗಳಲ್ಲಿ ಸಂಚರಣೆ(ನ್ಯಾವಿಗೇಷನ್) ಸಾಧನಗಳನ್ನು ಅಳವಡಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದರು.

## ಮೊದಲ ಸಲ ಮೀನುಗಾರರಿಗೆ ಕ್ರೆಡಿಟ್ ಕಾರ್ಡ್

ಮೀನುಗಾರಿಕೆಗೆ ಬೇಕಾಗುವ ಯಂತ್ರಗಳನ್ನು ಖರೀದಿಸಲು ಸಹಕಾರಿಯಾಗುವಂತೆ ಮೀನುಗಾರರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ನೀಡುವ ಯೋಜನೆಗೆ ಪ್ರಧಾನಿಯವರು ಈ ಸಂದರ್ಭದಲ್ಲಿ ಚಾಲನೆ ನೀಡಿದರು. ಹಾಗಾಗಿ ಈ ಹಿಂದೆ ರೈತರಿಗೆ ಮಾತ್ರ ಸಿಗುತ್ತಿದ್ದ ಕಿಸಾನ್ ಕ್ರೆಡಿಟ್ ಕಾರ್ಡ್ ಮೊದಲ ಬಾರಿಗೆ ಮೀನುಗಾರರಿಗೂ ಸಿಗುವಂತ್ತಾಯಿತು.





ದೇಶದ ಪೌಷ್ಟಿಕಾಂಶದ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಕೃಷಿ ಕರ್ಮಣ ಪ್ರಶಸ್ತಿಯಲ್ಲಿ ಪೌಷ್ಟಿಕ ಧಾನ್ಯಗಳು, ತೋಟಗಾರಿಕೆ ಮತ್ತು ಸಾವಯವ ಕೃಷಿಗಾಗಿ ಹೊಸ ವರ್ಗವನ್ನು ರಚಿಸಲು ಪ್ರಧಾನಿಯವರು ವಿನಂತಿಸಿದರು. ಇದು ಈ ಕ್ಷೇತ್ರಗಳಲ್ಲಿ ಉತ್ತಮ ಕೆಲಸ ಮಾಡುವವರಿಗೆ ಮತ್ತು ರಾಜ್ಯಗಳಿಗೆ ಉತ್ತೇಜನ ನೀಡಿದಂತ್ತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಮಾತನಾಡಿ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಕಿಸಾನ್ ಸಮ್ಮಾನ್ ಕಾರ್ಯಕ್ರಮ ಹಾಗೂ ದೇಶದ ಪ್ರಗತಿಪರ ರೈತರಿಗೆ ಪ್ರಶಸ್ತಿ ನೀಡಲು ಕರ್ನಾಟಕವನ್ನು ಆಯ್ಕೆ ಮಾಡಿಕೊಂಡಿರುವುದು ರಾಜ್ಯದ ಜನತೆಗೆ ಸಿಕ್ಕಂತಹ ಗೌರವ ಎಂದರು. ರಾಜ್ಯದಲ್ಲಿ ಸಂಭವಿಸಿದ ಅತಿವೃಷ್ಟಿಯಿಂದ ನಷ್ಟವಾಗಿರುವ ಬಗ್ಗೆ ಪ್ರಧಾನ ಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಕರ್ನಾಟಕಕ್ಕೆ 50 ಸಾವಿರ ಕೋಟಿ ರೂ.ಗಳನ್ನು ಪ್ರಕೃತಿ ಪರಿಹಾರ ನಿಧಿಯಿಂದ ನೀಡುವಂತೆ ಪ್ರಧಾನ ಮಂತ್ರಿಗಳಲ್ಲಿ ಕೋರಿದರು. ಅಲ್ಲದೆ ರಾಜ್ಯದ ನೀರಾವರಿ ಯೋಜನೆಗಳಿಗಾಗಿ ವಿಶೇಷ ಅನುದಾನ ನೀಡಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ನರೇಂದ್ರ ಸಿಂಗ್ ತೋಮರ್, ಪ್ರಹ್ಲಾದ್ ಜೋಶಿ, ಸದಾನಂದಗೌಡ, ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ರಾಜ್ಯ ಸಚಿವರಾದ ವಿ.ಸೋಮಣ್ಣ, ಜೆ.ಸಿ ಮಾಧುಸ್ವಾಮಿ, ಸಂಸದ ಜಿ.ಎಸ್.ಬಸವರಾಜ್, ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲು ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

**ಶ್ರೀ ಶಿವಕುಮಾರ ಸ್ವಾಮೀಜಿ ಸ್ಮಾರಕ ವಸ್ತು ಸಂಗ್ರಹಾಲಯಕ್ಕೆ ಶಂಕುಸ್ಥಾಪನೆ**

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇದೇ ಸಂದರ್ಭದಲ್ಲಿ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿ, ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಸ್ಮಾರಕ ವಸ್ತು ಸಂಗ್ರಹಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಸಿದ್ಧಗಂಗಾ ಮಠದಲ್ಲಿ ಲಿಂ. ಡಾ: ಶ್ರೀ ಶಿವಕುಮಾರ ಸ್ವಾಮೀಜಿಯವರ ಗದ್ದುಗೆಯ ದರ್ಶನ ಮಾಡಿ ಪೂಜೆ ಸಲ್ಲಿಸಿದ ನಂತರ ಮಠದ ಮಕ್ಕಳನ್ನುದ್ದೇಶಿಸಿ ಮಾತನಾಡಿದ ಅವರು, ತಾವು ಈ ಪವಿತ್ರ ಭೂಮಿಯಿಂದ 2020ನ್ನು ಆರಂಭಿಸುತ್ತಿರುವುದು ನಮ್ಮ ಸುದೈವ. ಶ್ರೀ ಸಿದ್ಧಗಂಗಾ ಮಠದ ಪರಮಪೂಜ್ಯ ಶ್ರೀಗಳ ಪವಿತ್ರ ಚೈತನ್ಯ ನಮ್ಮ ದೇಶದ ಜನರ ಬದುಕನ್ನು ಶ್ರೀಮಂತಗೊಳಿಸುತ್ತಿದೆ. ಬಹಳ ವರ್ಷಗಳ ನಂತರ ಈ ಪುಣ್ಯ ಸ್ಥಳಕ್ಕೆ ಬರಲು ಅವಕಾಶ ದೊರೆತಿದೆ. ಆದರೆ ಪೂಜ್ಯ ಶಿವಕುಮಾರ ಸ್ವಾಮೀಜಿಯವರ ಅನುಪಸ್ಥಿತಿ ತಮಗೆ ಶೂನ್ಯದ ಅನುಭವವನ್ನು ನೀಡುತ್ತಿದೆ ಎಂದರು.

ಶ್ರೀ ಶಿವಕುಮಾರ ಸ್ವಾಮೀಜಿಯವರ ಸ್ಮರಣಾರ್ಥ ನಿರ್ಮಾಣವಾಗುತ್ತಿರುವ ವಸ್ತು ಸಂಗ್ರಹಾಲಯದ ಶಂಕುಸ್ಥಾಪನೆಯನ್ನು ಮಾಡುವ ಅವಕಾಶ ನನಗೆ ದೊರಕಿದ್ದು, ನನ್ನ ಸೌಭಾಗ್ಯ. ಈ ವಸ್ತು ಸಂಗ್ರಹಾಲಯ ಕೇವಲ ಜನರಿಗೆ ಸ್ಫೂರ್ತಿಯನ್ನಷ್ಟೆ ನೀಡುವುದಿಲ್ಲ ಜೊತೆಗೆ ಸಮಾಜಕ್ಕೆ ದಿಕ್ಕು ತೋರಿಸುತ್ತದೆ. ಭಾರತವು 21ನೇ ಶತಮಾನದ 3ನೇ ದಶಕಕ್ಕೆ ಹೊಸ ಚೈತನ್ಯ ಮತ್ತು ಶಕ್ತಿಯೊಂದಿಗೆ ಕಾಲಿಟ್ಟಿದೆ. ನಾವೆಲ್ಲಾ 21ನೇ ಶತಮಾನದ 3ನೇ ದಶಕಕ್ಕೆ ಪ್ರವೇಶ ಮಾಡಿದ್ದೇವೆ. 21ನೇ ಶತಮಾನದ ಮೊದಲ ದಶಕವನ್ನು ಹೋಲಿಸಿದಾಗ ನಾವಿಂದು ಸುರಕ್ಷತೆಯಿಂದ ಇದ್ದೇವೆ. ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ. ಈ 3ನೇ ದಶಕದಲ್ಲಿ ಭಾರತದ ಭದ್ರ ಬುನಾದಿಗೆ ಅಡಿಪಾಯ ಹಾಕುವ ಆಕಾಂಕ್ಷೆಯನ್ನು ಹೊಂದಲಾಗಿದೆ. ಹೊಸ ಭಾರತದ ಯುವಕರ ಕನಸು ಸಾಕಾರಗೊಳಿಸುವ ಅಕ್ಕ-ತಂಗಿಯರು, ಬಡವರು, ದೀನ–ದಲಿತರು, ಸೌಲಭ್ಯ ವಂಚಿತರು, ಹಿಂದುಳಿದ ವರ್ಗದವರು, ಆದಿವಾಸಿಗಳ ಅಭಿವೃದ್ಧಿಪಡಿಸುವ, ಜಗತ್ತಿನ ಭೂಪಟದಲ್ಲಿ ಭಾರತದ ಸ್ವಾಭಾವಿಕ ಸ್ಥಾನವನ್ನು ನಿರ್ಮಿಸುವ ಉದ್ದೇಶವನ್ನು ಈ ಆಕಾಂಕ್ಷೆ ಹೊಂದಿದೆ ಎಂದು ತಿಳಿಸಿದರು.

**ಮಕ್ಕಳೆದುರು 3 ಸಂಕಲ್ಪ:**

ಪ್ರಧಾನಿ ನರೇಂದ್ರ ಮೋದಿ ಅವರು ಭವಿಷ್ಯದ ಭಾರತಕ್ಕಾಗಿ ಮೂರು ಸಂಕಲ್ಪ ಕೈಗೊಳ್ಳುವಂತೆ ಸಂತ ಸಮಾಜಕ್ಕೆ ಮತ್ತು ಮಕ್ಕಳಿಗೆ ಮನವಿ ಮಾಡಿದರು. ಮೊದಲನೆಯದಾಗಿ ಪತ್ರಿಯೊಬ್ಬ ವ್ಯಕ್ತಿಯ ಕರ್ತವ್ಯಗಳು ಮತ್ತು ಕಟ್ಟುಪಾಡುಗಳಿಗೆ ಪ್ರಾಮುಖ್ಯತೆ ನೀಡುವ ಭಾರತದ ಪ್ರಾಚೀನ ಸಂಸ್ಕೃತಿಯನ್ನು ಪುನಶ್ಚೇತನಗೊಳಿಸುವುದು. ಎರಡನೆಯದಾಗಿ ಪ್ರಕೃತಿ ಮತ್ತು ಪರಿಸರವನ್ನು ಸಂರಕ್ಷಿಸಲು ಸಂಕಲ್ಪಿಸುವುದು. ಮೂರನೆಯದಾಗಿ ನೀರಿನ ಸಂರಕ್ಷಣೆ, ನೀರಿನ ಕೊಯ್ಲುಗಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸಹಕರಿಸುವುದರಿಂದ ಸಮೃದ್ಧ ಹಾಗೂ ಭವ್ಯ ಭಾರತದ ನಿರ್ಮಾಣ ಮಾಡಬೇಕು ಎಂಬುದು ಅವರ ಮೂರು ಸಂಕಲ್ಪವಾಗಿತ್ತು.

ಮಠದ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಿಲ್ವಪತ್ರೆ ಗಿಡ ನೆಟ್ಟು ನೀರೆರೆದರು. ಇದೇ ಸಂದರ್ಭದಲ್ಲಿ ಮಠದ ವತಿಯಿಂದ ಪ್ರಧಾನಿ ಮೋದಿ ಅವರಿಗೆ ಡಾ: ಶಿವಕುಮಾರ ಸ್ವಾಮೀಜಿ ಅವರ ಬೆಳ್ಳಿ ಪುತ್ಥಳಿಯನ್ನು ಕಾಣಿಕೆಯಾಗಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ. ಬಿ.ಎಸ್.ಯಡಿಯೂರಪ್ಪ, ಸಿದ್ದಗಂಗಾಮಠದ ಅಧ್ಯಕ್ಷ ಸಿದ್ಧಲಿಂಗಸ್ವಾಮೀಜಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಡಿ.ವಿ. ಸದಾನಂದಗೌಡ, ಸುರೇಶ್ ಸಿ ಅಂಗಡಿ, ರಾಜ್ಯ ಸರ್ಕಾರದ ವಸತಿ ಸಚಿವರಾದ ವಿ.ಸೋಮಣ್ಣ, ಸಣ್ಣ ನೀರಾವರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಜೆ.ಸಿ ಮಾಧುಸ್ವಾಮಿ, ಮತ್ತಿತರು ಉಪಸ್ಥಿತರಿದ್ದರು.



Download From : www.kpscvaani.com



# ಪೌರತ್ವ ತಿದ್ದುಪಡಿ ಕಾಯಿದೆ 2019

ಬಿದರೆ ಪ್ರಕಾಶ್

> **ಸಿಎಎ ಎಂಬುದು ಪೌರತ್ವ ಕೊಡುವ ಕಾಯ್ದೆಯೇ ಹೊರತು ಯಾರೊಬ್ಬರ ಪೌರತ್ವವನ್ನು ಕಸಿಯುವುದಲ್ಲ. ಧಾರ್ಮಿಕ ಹಿಂಸೆ ಕಾರಣಕ್ಕೆ ದೇಶ ತೊರೆದು ಬರುವವರಿಗೆ ಭಾರತೀಯ ಪೌರತ್ವ ನೀಡಲು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಒಲವನ್ನು ನಾವು ಈಡೇರಿಸಿದ್ದೇವೆ.**
>
> –ಶ್ರೀ ನರೇಂದ್ರ ಮೋದಿ, ಪ್ರಧಾನಮಂತ್ರಿ

**1947 ರ** ಸ್ವಾತಂತ್ರ್ಯ ದೇಶಕ್ಕೆ ಹರ್ಷ ತಂದುಕೊಟ್ಟಷ್ಟೇ ದುಃಖವನ್ನೂ ತಂದುಕೊಟ್ಟಿತು. ಬ್ರಿಟೀಷರು ಭಾರತವನ್ನು ಬಿಟ್ಟು ಹೋಗುವಾಗ ಭಾರತವನ್ನು ಒಡೆದು ಎರಡು ಭಾಗ ಮಾಡಿ ದೇಶವನ್ನು ತ್ಯಜಿಸಿದರು. ಈ ರೀತಿ ದೇಶ ಇಬ್ಭಾಗವಾದಾಗ ಎರಡೂ ದೇಶಗಳ ನಾಯಕರ ನಡುವೆ ಅನೇಕ ಒಪ್ಪಂದಗಳಾಗಿವೆ. ಈ ಮಧ್ಯೆ ಪಾಕಿಸ್ತಾನದಿಂದ ಬಾಂಗ್ಲಾದೇಶ ಬೇರ್ಪಟ್ಟು ಬೇರೆ ದೇಶವಾಗಿದೆ. ಅಂದು ದೇಶ ವಿಭಜನೆಯ ಕಾರಣದಿಂದ ಅಲ್ಲಿ ನೆಲೆ ನಿಂತಿದ್ದ ಧಾರ್ಮಿಕ ಅಲ್ಪಸಂಖ್ಯಾತರು, ಅಲ್ಲಿನ ಬಹುಸಂಖ್ಯಾತರಿಂದ ದೌರ್ಜನ್ಯ, ದಬ್ಬಾಳಿಕೆಗಳನ್ನು ಅನುಭವಿಸಬೇಕಾದ ಪರಿಸ್ಥಿತಿ ಉಂಟಾಯಿತು.

ದೇಶ ವಿಭಜನೆಯ ಸಂದರ್ಭದಲ್ಲಿ ಅನೇಕ ಅನಾಹುತಗಳಾದವು. ಅದರಲ್ಲೂ ಪಾಕಿಸ್ತಾನ, ಈಗಿನ ಬಾಂಗ್ಲಾದೇಶಗಳಲ್ಲಿನ ಅಲ್ಪಸಂಖ್ಯಾತರ ಸುರಕ್ಷತೆ ಮತ್ತು ನೆಮ್ಮದಿಯ ಜೀವನದ ಬಗ್ಗೆ ದೇಶ ವಿಭಜನೆಯ ಸಂದರ್ಭದಲ್ಲಿಯೇ ಮಹಾತ್ಮಗಾಂಧಿಯೂ ಸೇರಿದಂತೆ ಎಲ್ಲಾ ರಾಜಕೀಯ ನಾಯಕರುಗಳಿಗೆ ಸಂದೇಹವಿತ್ತು. ಆದ್ದರಿಂದಲೇ ಮಹಾತ್ಮಗಾಂಧಿಯವರು 26 ಡಿಸೆಂಬರ್, 1947ರಲ್ಲಿಯೇ "ಪಾಕಿಸ್ತಾನದಲ್ಲಿ ವಾಸವಾಗಿರುವ ಹಿಂದೂ ಮತ್ತು ಸಿಖ್ ಹಾಗೂ ಅಲ್ಲಿನ ಧಾರ್ಮಿಕ ಅಲ್ಪಸಂಖ್ಯಾತ ಬಂಧುಗಳು ಎಂತಹುದೇ ಸಂದರ್ಭದಲ್ಲಿ ಭಾರತಕ್ಕೆ ಬರಲಿಚ್ಚಿಸಿದರೆ ಅವರಿಗೆ ಸ್ವಾಗತವಿದೆ. ಅಲ್ಲಿ ವಾಸಿಸಲು ಅವರಿಂದ ಸಾಧ್ಯವಾಗದಿದ್ದರೆ ಅಂತಹವರ ಯೋಗಕ್ಷೇಮ ಹಾಗೂ ಸಾಮಾನ್ಯ ಜೀವನದ ಜವಾಬ್ದಾರಿಯನ್ನು ನಿರ್ವಹಿಸಲು ಭಾರತ ಸರ್ಕಾರ ಸದಾ ಸಿದ್ಧವಿರುತ್ತದೆ ಮತ್ತು ಇದು ನಮ್ಮ ದೇಶದ ಕರ್ತವ್ಯವೂ ಆಗಿದೆ" ಎಂದು ನುಡಿದಿದ್ದರು.

ಇದಲ್ಲದೆ ಭಾರತ ಮತ್ತು ಪಾಕಿಸ್ತಾನದಲ್ಲಿನ ಅಲ್ಪಸಂಖ್ಯಾತರ ರಕ್ಷಣೆಯ ಬಗ್ಗೆ ದೇಶ ಇಬ್ಭಾಗವಾದ ನಂತರ 1950 ಏಪ್ರಿಲ್ 8ರಂದು ದ್ವಿಪಕ್ಷೀಯರಲ್ಲಿ ನಡೆದ ನೆಹರು–ಲಿಯಾಖತ್ ಒಪ್ಪಂದದ ಪ್ರಕಾರ ಉಭಯ ದೇಶಗಳು ತಮ್ಮಲ್ಲಿ ವಾಸವಾಗಿರುವ ಅಲ್ಪಸಂಖ್ಯಾತರ ರಕ್ಷಣೆ ಹಾಗೂ ಅವರ ಧಾರ್ಮಿಕ ಆಚರಣೆಗಳಿಗೆ ಗೌರವ ನೀಡಲು ಪೂರ್ಣ ಬದ್ಧತೆಯನ್ನು ವ್ಯಕ್ತಪಡಿಸುವುದಾಗಿ ಎರಡೂ ದೇಶಗಳು ಸಹಿಯನ್ನೂ ಹಾಕಿದ್ದವು. ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳು ತನ್ನ ಪ್ರದೇಶದಾದ್ಯಂತ ಅಲ್ಪಸಂಖ್ಯಾತರಿಗೆ, ಪೌರತ್ವದ ಸಂಪೂರ್ಣ ಸಮಾನತೆ, ಧರ್ಮದ ಹೊರತಾಗಿಯೂ ಅವರ ಜೀವನ, ಸಂಸ್ಕೃತಿ, ಆಸ್ತಿ ಮತ್ತು ವೈಯಕ್ತಿಕ ಗೌರವಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಸುರಕ್ಷತೆಯ ಪ್ರಜ್ಞೆ, ಸಮಾನವಾದ ಸ್ವಾತಂತ್ರ್ಯವನ್ನು ಖಾತ್ರಿಪಡಿಸಿಕೊಳ್ಳಬೇಕೆಂದೂ, ಪ್ರತಿಯೊಂದು ದೇಶ ಮತ್ತು ಉದ್ಯೋಗ, ಮಾತು ಮತ್ತು ಧಾರ್ಮಿಕ ಸ್ವಾತಂತ್ರ್ಯ, ಕಾನೂನು ಮತ್ತು ನೈತಿಕತೆಗೆ ಒಳಪಟ್ಟಿರ ಬೇಕೆಂದೂ, ಅಲ್ಪಸಂಖ್ಯಾತರು ತಮ್ಮ ದೇಶದ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು, ರಾಜಕೀಯ ಅಥವಾ ಇತರ ಹುದ್ದೆಗಳನ್ನು ಅಲಂಕರಿಸಲು ಮತ್ತು ತಮ್ಮ ದೇಶದ ನಾಗರಿಕ ಮತ್ತು ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಲು ಬಹುಸಂಖ್ಯಾತ ಸಮುದಾಯದಂತೆ ಸಮಾನ ಅವಕಾಶವನ್ನು ಹೊಂದಿರುತ್ತಾರೆಂದೂ ಈ ಒಪ್ಪಂದದಲ್ಲಿ ಉಲ್ಲೇಖೀಸಲಾಗಿತ್ತು. ಎರಡೂ ಸರ್ಕಾರಗಳು ಈ ಹಕ್ಕುಗಳನ್ನು ಮೂಲಭೂತವೆಂದು ಘೋಷಿಸುವುದರ ಜೊತೆಗೆ, ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಬದ್ಧವಾಗಿರಬೇಕೆಂದೂ ಒಪ್ಪಂದದಲ್ಲಿ ನಮೂದಿಸಲಾಗಿತ್ತು. ಆದರೆ ಈ ಒಪ್ಪಂದವನ್ನು ಪಾಕಿಸ್ತಾನ ಸಂಪೂರ್ಣವಾಗಿ ಕೈಬಿಟ್ಟಿತು. ಇದರ ಪರಿಣಾಮವಾಗಿ ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ ಅಲ್ಪಸಂಖ್ಯಾತರಾಗಿದ್ದ ಹಿಂದೂ, ಸಿಖ್. ಭೌದ್ಧ, ಕ್ರೈಸ್ತ, ಜೈನ್, ಪಾರ್ಸಿ ಜನಾಂಗದವರು ಧಾರ್ಮಿಕ ಅಲ್ಪಸಂಖ್ಯಾತರು ಎಂಬ ಕಾರಣಕ್ಕೆ ಶೋಷಣೆಗೊಳಗಾಗುತ್ತಿದ್ದ ಈ ಜನಾಂಗದವರು ಭಾರತಕ್ಕೆ ಬಂದು ನೆಲೆಸಿದ್ದು ನಿರಾಶ್ರಿತರಾಗಿ ಜೀವನ ನಡೆಸುತ್ತಿದ್ದಾರೆ.

ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ ಅಲ್ಪಸಂಖ್ಯಾತರಾಗಿದ್ದ ಹಿಂದೂ, ಸಿಖ್. ಭೌದ್ಧ, ಕ್ರೈಸ್ತ, ಜೈನ್, ಪಾರ್ಸಿ ಜನಾಂಗದವರು ಧಾರ್ಮಿಕ ಅಲ್ಪಸಂಖ್ಯಾತರು ಎಂಬ ಕಾರಣಕ್ಕೆ ಶೋಷಣೆಗೊಳಗಾಗುತ್ತಿದ್ದರು ಹಾಗೂ ಇಂದಿಗೂ ಈ ಶೋಷಣೆ ನಿರಂತರವಾಗಿ ನಡೆಯುತ್ತಲೇ ಇದೆ. ಈ ಕಾರಣದಿಂದಾಗಿ ಈ ಜನಾಂಗದವರು ಬದುಕುಳಿಯುವುದಕ್ಕಾಗಿ ಭಾರತಕ್ಕೆ ಬಂದು ನೆಲೆಸಿದ್ದು ನಿರಾಶ್ರಿತರಾಗಿ ಜೀವನ ನಡೆಸುತ್ತಿದ್ದಾರೆ.

ಪೌರತ್ವ ಕಾಯ್ದೆಯಲ್ಲಿನ ಪ್ರಸಕ್ತ ತಿದ್ದುಪಡಿಯು ಮುಖ್ಯವಾಗಿ ನೈಸರ್ಗಿಕೀಕರಣದ ಪ್ರಕ್ರಿಯೆಯಿಂದ ಪೌರತ್ವವನ್ನು ನೀಡುವುದನ್ನು ವಿಶೇಷವಾಗಿ ಪ್ರಸ್ತಾಪಿಸುತ್ತದೆ. ಹಿಂದಿನ ಕಾಯ್ದೆಯ ಪ್ರಕಾರ ಭಾರತೀಯ ಪೌರತ್ವ ಪಡೆಯಲು ಅರ್ಜಿ ಸಲ್ಲಿಸುವುದಕ್ಕೆ ಭಾರತದಲ್ಲಿ 11 ವರ್ಷ ನೆಲೆಸಿರಬೇಕಾಗಿದ್ದ ಅಗತ್ಯತೆಯಿತ್ತು.

ಕಳೆದ ಹಲವು ವರ್ಷಗಳಿಂದ ಭಾರತದಲ್ಲಿ ನೆಲೆಸಿರುವ ಈ ಮೂರು ದೇಶಗಳಲ್ಲಿ ಅಲ್ಪಸಂಖ್ಯಾತರಾಗಿದ್ದ, ಆ ದೇಶಗಳಲ್ಲಿನ ದೌರ್ಜನ್ಯಗಳಿಂದ ಬೇಸತ್ತು ಭಾರತಕ್ಕೆ ಬಂದು ನೆಲೆಸಿರುವ ಆರು ಧರ್ಮೀಯರಿಗೆ ಪೌರತ್ವ ಕೊಡುವಂತಹ ವಿಧೇಯಕಕ್ಕೆ ತಿದ್ದಪಡಿ ತರಬೇಕಾದ ಅನಿವಾರ್ಯತೆ ಭಾರತದ ಮೇಲೆ ಇತ್ತು.

ಈ ಹಿನ್ನೆಲೆಯಲ್ಲಿ ಜಾರಿಗೆ ತಂದ ಈ ವಿಧೇಯಕದ ಬಗ್ಗೆ ಲೋಕಸಭೆ ಮತ್ತು ರಾಜ್ಯ ಸಭೆಗಳಲ್ಲಿ ಸಾಕಷ್ಟು ಚರ್ಚೆ ನಡೆದು ಎರಡೂ ಸದನಗಳಲ್ಲಿ ಈ ಮಸೂದೆ ಅಂಗೀಕಾರವಾಗಿ ರಾಷ್ಟ್ರಪತಿಗಳಿಂದ ಅನುಮೋದನೆ ಪಡೆದು ಕಾಯ್ದೆಯಾಗಿ ಜಾರಿಗೆ ಬಂದಿದೆ.

ಈ ಕಾಯ್ದೆಯ ಅನ್ವಯ ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಎಂಬ ಕಾರಣಕ್ಕೆ ಶೋಷಣೆಗೊಳಗಾಗಿ ಭಾರತದಲ್ಲಿ ನಿರಾಶ್ರಿತರಾಗಿ ನೆಲೆನಿಂತ 2014 ರ ಡಿಸೆಂಬರ್ 31 ಕ್ಕೆ ಮೊದಲು ಭಾರತಕ್ಕೆ ಪ್ರವೇಶಿಸಿದ ಹಿಂದೂ, ಬೌದ್ಧ, ಸಿಖ್, ಜೈನ್, ಪಾರ್ಸಿ ಹಾಗೂ ಕ್ರೈಸ್ತರಿಗೆ ಪೌರತ್ವವನ್ನು ನೀಡಲಾಗುತ್ತದೆ.

> **ಈ ತಿದ್ದುಪಡಿ ಕಾಯ್ದೆಯು ಭಾರತದಲ್ಲಿ ಅವಧಿ ಮೀರಿ ನೆಲೆಸಿರುವ ಇಲ್ಲವೇ ತಮ್ಮ ವಿಸಾ ಅವಧಿ ಮುಗಿದಿರುವ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನದ ಅಲ್ಪಸಂಖ್ಯಾತ ನಿರಾಶ್ರಿತರನ್ನು ಪ್ರಜೆಗಳನ್ನಾಗಿಸಲಿದೆ. 2014ರ ಡಿಸೆಂಬರ್ 31ಕ್ಕೂ ಮುನ್ನ ಭಾರತಕ್ಕೆ ಬಂದಿರುವ ಎಲ್ಲ ಹಿಂದೂ, ಬೌದ್ಧ, ಜೈನ್, ಪಾರ್ಸಿ, ಸಿಖ್, ಕ್ರೈಸ್ತ ಸಮುದಾಯದವರಿಗೆ ಪೌರತ್ವದ ಅವಕಾಶ ದೊರೆಯಲಿದೆ.**

ಭಾರತ ಸಂವಿಧಾನದ 6 ನೇ ಅನುಸೂಚಿಯಲ್ಲಿ ನಮೂದಿಸಿದ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ತ್ರಿಪುರ ಹಾಗೂ ಮಿಜೋರಾಂ ರಾಜ್ಯಗಳಿಗೆ ಈ ಕಾಯ್ದೆಯು ಅನ್ವಯಿಸುವುದಿಲ್ಲ. 'ಇನ್ನರ್ ಲೈನ್ ಪರಿಮಿತಿ' (ಐಎಲ್‌ಪಿ) ವಿಶೇಷ ಅಧಿಕಾರವನ್ನು ನೀಡಲಾಗಿರುವ ಪ್ರದೇಶಗಳಿಗೂ ಇದು ಅನ್ವಯಸುವುದಿಲ್ಲ. ಮಣಿಪುರ ಸಹ ಇನ್ನರ್‌ಲೈನ್ ಪರಿಮಿತಿ ಐಎಲ್‌ಪಿ (ಖಐಾ) ವ್ಯಾಪ್ತಿಗೊಳಪಟ್ಟಿದೆ.

ಮಸೂದೆಯನ್ನು ಮಂಡಿಸುವ ಮುನ್ನ 140 ಕ್ಕೂ ಹೆಚ್ಚು ಎನ್‌ಜಿಒಗಳು, ಇತರೆ ರಾಜಕೀಯ ಪಕ್ಷಗಳು ಮತ್ತು ಅನೇಕ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ 119 ಗಂಟೆಗಳ ಕಾಲ ಚರ್ಚಿಸಿ ಅವರೆಲ್ಲರ ಸಲಹೆಗಳನ್ನು ಸೇರಿಸಲಾಗಿದೆ. ಈ ಕಾಯ್ದೆ 14ನೇ ವಿಧಿಯನ್ವಯ ಪ್ರಜೆಗಳ ಸಮಾನತೆಯ ಹಕ್ಕುಗಳನ್ನು ಮೊಟಕುಗೊಳಿಸುವುದಿಲ್ಲ. 21ನೇ ವಿಧಿಯನ್ವಯ ವೈಯುಕ್ತಿಕ ಹಕ್ಕುಗಳಿಗೆ ಧಕ್ಕೆಯನ್ನೂ ತರುವುದಿಲ್ಲ. 25 ನೇ ವಿಧಿಯನ್ವಯ ಯಾವುದೇ ಪ್ರಜೆಯ ಧಾರ್ಮಿಕ ಸ್ವಾತಂತ್ರ್ಯಕ್ಕೆ ಚ್ಯುತಿಯಾಗುವುದಿಲ್ಲ.

ಈಗ ಸರಕಾರ ಜಾರಿಗೆ ತಂದಿರುವ ಪೌರತ್ವ ತಿದ್ದುಪಡಿ ಕಾಯ್ದೆಗೂ, ಮುಂದೆ ತರಬೇಕೆಂದು ಚರ್ಚೆಯಾಗುತ್ತಿರುವ ಎನ್‌ಆರ್‌ಸಿಗೂ ಯಾವುದೇ ಸಂಬಂಧ ಇಲ್ಲ.

ಈ ತಿದ್ದುಪಡಿ ಕಾಯ್ದೆಯು ಭಾರತದಲ್ಲಿ ಅವಧಿ ಮೀರಿ ನೆಲೆಸಿರುವ ಇಲ್ಲವೇ ತಮ್ಮ ವಿಸಾ ಅವಧಿ ಮುಗಿದಿರುವ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನದ ಅಲ್ಪಸಂಖ್ಯಾತ ನಿರಾಶ್ರಿತರನ್ನು ಪ್ರಜೆಗಳನ್ನಾಗಿಸಲಿದೆ. 2014ರ ಡಿಸೆಂಬರ್ 31ಕ್ಕೂ ಮುನ್ನ ಭಾರತಕ್ಕೆ ಬಂದಿರುವ ಎಲ್ಲ ಹಿಂದೂ, ಬೌದ್ಧ, ಜೈನ್, ಪಾರ್ಸಿ, ಸಿಖ್, ಕ್ರೈಸ್ತ ಸಮುದಾಯದವರಿಗೆ ಪೌರತ್ವದ ಅವಕಾಶ ದೊರೆಯಲಿದೆ.

ಸಿಎಎ ಎಂಬುದು ಪೌರತ್ವ ಕೊಡುವ ಕಾಯ್ದೆಯೇ ಹೊರತು ಯಾರೊಬ್ಬರ ಪೌರತ್ವವನ್ನು ಕಸಿಯುವುದಲ್ಲ. ಧಾರ್ಮಿಕ ಹಿಂಸೆ ಕಾರಣಕ್ಕೆ ದೇಶ ತೊರೆದು ಬರುವವರಿಗೆ ಭಾರತೀಯ ಪೌರತ್ವ ನೀಡಲು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಒಲವನ್ನು ನಾವು ಈಡೇರಿಸಿದ್ದೇವೆ ಎಂದು ಸ್ವತಃ ಪ್ರಧಾನ ಮಂತ್ರಿಯವರೇ ಹೇಳಿದ್ದಾರೆ. ■





Download From : www.kpscvaani.com



## ಶಿಕ್ಷಣ ಸಚಿವರ ಮುಂದಾಲೋಚನೆಯಲ್ಲಿ

# ಶಿಕ್ಷಣ ವ್ಯವಸ್ಥೆ ಸುಧಾರಣೆ

ಉಮೇಶ್ ಕೂಲಿಗೆರೆ

**ಹೊ**ಸ ಆಲೋಚನೆ, ಭವ್ಯ ಭವಿಷ್ಯದ ಕನಸಿನ ಮುಂದಾಲೋಚನೆ ಇದ್ದರೆ ಸುಧಾರಿತ ವ್ಯವಸ್ಥೆ ಕಟ್ಟಲು ಯಾವುದೇ ಅಡೆತಡೆಗಳು ಎದುರಾಗುವುದಿಲ್ಲ ಎಂಬುದಕ್ಕೆ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯೇ ಸ್ಪಷ್ಟ ಉದಾಹರಣೆ.

ಫಲಿತಾಂಶ ಆಧರಿತ ಶಿಕ್ಷಣ ವ್ಯವಸ್ಥೆಗೆ ಜೋತು ಬಿದ್ದಿದ್ದ ಸಮಾಜದಲ್ಲಿ ಹೃದಯವಿಲ್ಲದ ವೈದ್ಯರನ್ನು, ಕನಸ್ಸುಗಳಿಲ್ಲದ ಇಂಜಿನಿಯರ್‌ಗಳನ್ನು, ಗಳಿಕೆ–ಉಳಿಕೆಗೆ ವ್ಯತ್ಯಾಸ ಗೊತ್ತಿಲ್ಲದ ಲೆಕ್ಕಾಧಿಕಾರಿಗಳನ್ನು, ವ್ಯಾಕರಣ ತಿಳಿಯದ ಸಾಹಿತಿಗಳು ತಯಾರಾಗುತ್ತಾರೆ. ಮೌಲ್ಯಯುತ ಶಿಕ್ಷಣದಲ್ಲಿ ಮಾತ್ರ ಸಮಸ್ಯೆಗಳಿಗೆ ನೈಜ್ಯ ಪರಿಹಾರ ಸಿಗಲು ಸಾಧ್ಯ ಎಂಬುದನ್ನು ಅರಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರು ಶಿಕ್ಷಣ ಇಲಾಖೆಯಲ್ಲಿ ಗುಣಾತ್ಮ ಬದಲಾವಣೆ ತರಲು ಹಗಲಿರುಳು ಶ್ರಮಿಸುತ್ತಿದ್ದಾರೆ. ಕಳೆದ ಐದು ತಿಂಗಳಲ್ಲಿ ರಾಜ್ಯ ಶಿಕ್ಷಣ ಇಲಾಖೆಯಲ್ಲಿ ಹಲವಾರು ಹೊಸ ಆಲೋಚನೆಗಳು ಮೋಸೆಯೊಡೆದಿವೆ. ಭವ್ಯ ಭವಿಷ್ಯದ ಕನಸಿನ ಬೀಜ ಬಿತ್ತನೆಯಾಗಿದೆ. ಸವಾಲಿನಲ್ಲೂ ಸಮಾಧಾನ ಪಡುವಂತ ಸುಧಾರಣೆಗಳಿಗೆ ಚಾಲನೆ ದೊರಕಿದೆ.

ಶಿಕ್ಷಣ ಇಲಾಖೆ ಒಂದಲ್ಲ, ಎರಡಲ್ಲ, ಹತ್ತಾರು ಹೊಸ ಕಾರ್ಯಕ್ರಮಗಳಿಗೆ ಅಡಿಯಿಟ್ಟಿದೆ. ತಾವು ಶಾಲಾ ಶಿಕ್ಷಕಿಯ ಮಗ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮಾನ್ಯ ಸಚಿವ ಸುರೇಶ್ ಕುಮಾರ್ ಅವರು, ಶಿಕ್ಷಕ ಸ್ನೇಹಿ ಆಡಳಿತದ ಜೊತೆಗೆ ವಿದ್ಯಾರ್ಥಿ ಮಿತ್ರ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದಾರೆ.

ಆರಂಭದಿಂದಲೂ ವಿನೂತನ ಪ್ರಯೋಗಗಳ ಬಗ್ಗೆ ಯೋಚಿಸುತ್ತಿರುವ ಸುರೇಶ್ ಕುಮಾರ್ ಅವರು, ವಾಟರ್ ಬೆಲ್, ಬ್ಯಾಗ್ ರಹಿತ ದಿನ, ಶಾಲಾ ವಾಸ್ತವ್ಯ, ಸಂವೇದನ ಎಂಬ ಫೋನ್

> **ಬೇಸಿಗೆ ಬಂತೆಂದರೆ ಮಕ್ಕಳನ್ನು ಸಂಭಾಳಿಸುವುದು ಪೋಷಕರಿಗೆ ಕಷ್ಟದ ಕೆಲಸ. ಯಾವುದೋ ಬೇಸಿಗೆ ಶಿಬಿರಕ್ಕೆ ಸೇರಿಸಿ ಕೈತೊಳೆದುಕೊಳ್ಳಲು ಪ್ರಯತ್ನಿಸುತ್ತಾರೆ. ಈ ಬಾರಿ ಸರ್ಕಾರಿ ಶಾಲೆಯ ಮಕ್ಕಳಿಗೆ ಬೇಸಿಗೆಯಲ್ಲಿ ವಿಶೇಷವಾದ ಪಠ್ಯೇತರ ಚಟುವಟಿಕೆಗಳು ಮತ್ತು ಬಿಸಿಯೂಟ ನೀಡಲು ಸಚಿವರು ಚಿಂತನೆ ನಡೆಸಿದ್ದಾರೆ.**

ಇನ್ ಕಾರ್ಯಕ್ರಮ, ಮೌಲ್ಯಾಂಕನ ಪರೀಕ್ಷಾ ಪದ್ಧತಿ ಸೇರಿದಂತೆ ಹಲವಾರು ಸುಧಾರಿತ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ. ಅದರಲ್ಲೂ ವಾಟರ್ ಬೆಲ್ ಯೋಜನೆ ವಿದ್ಯಾರ್ಥಿಗಳ ಆರೋಗ್ಯ ಸುಧಾರಿಸಿರುವುದಲ್ಲದೆ, ಪೋಷಕರು ನಿಟ್ಟುಸಿರು ಬಿಡುವಂತೆ ಮಾಡಿದೆ.

ಪಬ್ಲಿಕ್ ಶಾಲೆಯ ಸಮೀಪದಲ್ಲಿರುವ ಸರ್ಕಾರಿ ಶಾಲೆಯ ಮಕ್ಕಳಿಗೂ ವಾಹನದ ವ್ಯವಸ್ಥೆ ಮಾಡಬೇಕು, ಶಿಕ್ಷಣ ಇಲಾಖೆಯ ಕಡತ ವಿಲೇವಾರಿ ವ್ಯವಸ್ಥೆಯನ್ನು ಆನ್‌ಲೈನ್‌ಗೊಳಿಸಬೇಕು ಎಂಬ ಚಿಂತನೆಗಳನ್ನು ಸಚಿವರು ನಡೆಸುತ್ತಿದ್ದಾರೆ. ಪರೀಕ್ಷಾ ಅಕ್ರಮಗಳನ್ನು ತಡೆಯಲು ಪೊಲೀಸ್ ಇಲಾಖೆಯ ಸಹಕಾರದಲ್ಲಿ ಈಗಾಗಲೇ ವಿಶೇಷ ತಂಡಗಳನ್ನು ರಚಿಸಿ ಅಕ್ರಮಕ್ಕೆ ಕುಮ್ಮಕ್ಕು ನೀಡುವ ಆಸಾಮಿಗಳ ಹೆಡೆಮುರಿ ಕಟ್ಟುವ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಬೇಸಿಗೆ ಬಂತೆಂದರೆ ಮಕ್ಕಳನ್ನು ಸಂಭಾಳಿಸುವುದು ಪೋಷಕರಿಗೆ ಕಷ್ಟದ ಕೆಲಸ. ಯಾವುದೋ ಬೇಸಿಗೆ ಶಿಬಿರಕ್ಕೆ ಸೇರಿಸಿ ಕೈತೊಳೆದುಕೊಳ್ಳಲು ಪ್ರಯತ್ನಿಸುತ್ತಾರೆ. ಈ ಬಾರಿ ಸರ್ಕಾರಿ ಶಾಲೆಯ ಮಕ್ಕಳಿಗೆ ಬೇಸಿಗೆಯಲ್ಲಿ ವಿಶೇಷವಾದ ಪಠ್ಯೇತರ ಚಟುವಟಿಕೆಗಳು ಮತ್ತು ಬಿಸಿಯೂಟ ನೀಡಲು ಸಚಿವರು ಚಿಂತನೆ ನಡೆಸಿದ್ದಾರೆ. ಹಂತ ಹಂತವಾಗಿ ಸಮಗ್ರ ಸುಧಾರಣೆ ಪ್ರಯತ್ನಕ್ಕೆ ಸಚಿವರು ಕೈ ಹಾಕಿರುವುದಂತೂ ಅಕ್ಷರಶಃ ಸತ್ಯ.

**ವಾಟರ್ ಬೆಲ್:**

ಮಕ್ಕಳು ಚೇತನ್ಯದ ಚಿಲುಮೆಗಳಾಗಿದ್ದರೆ ಮನೆಯಲ್ಲಿ ಪೋಷಕರು, ಶಾಲೆಯಲ್ಲಿ ಶಿಕ್ಷಕರು ಚೇತೋಹಾರಿಗಳಾಗಿರುತ್ತಾರೆ. ಈಗಿನ ಕಾಲಮಾನದ ಮಕ್ಕಳು ಸರಿಯಾಗಿ ಊಟ ತಿನ್ನುವುದಿಲ್ಲ, ಹಾಗೆ ಅಗತ್ಯದಷ್ಟು ನೀರು ಕುಡಿಯುವುದಿಲ್ಲ. ಇದರಿಂದ ಅವರಲ್ಲಿ ನಿರ್ಜಲೀಕರಣ, ಉರಿಮೂತ್ರ, ಅಜೀರ್ಣ, ನಿಶ್ಯಕ್ತಿ ಸೇರಿದಂತೆ ಹಲವಾರು ಸಮಸ್ಯೆಗಳು ಕಾಡುತ್ತವೆ. ಕೇರಳ ರಾಜ್ಯದಲ್ಲಿ ಶಾಲಾ ಮಕ್ಕಳನ್ನು ಪರೀಕ್ಷಿಸಿದ ಅಲ್ಲಿನ ವೈದ್ಯರು ಅಗತ್ಯದಷ್ಟು ನೀರು ಕುಡಿಯುವಂತೆ ಮಾಡಿದರೆ ಮಕ್ಕಳ ಆರೋಗ್ಯದಲ್ಲಿ ಬಹಳಷ್ಟು ಸುಧಾರಣೆಯಾಗುತ್ತದೆ ಎಂದು ಸಲಹೆ ನೀಡಿದರು. ಇದನ್ನು ಗಂಭೀರವಾಗಿ ತೆಗೆದುಕೊಂಡ ಕೇರಳ ಸರ್ಕಾರ 'ವಾಟರ್ ಬೆಲ್' ಎಂಬ ವಿನೂತನ ಕಾರ್ಯಕ್ರಮವನ್ನು ಜಾರಿಗೆ ತಂದಿತ್ತು.

ಸಾಮಾಜಿಕ ಜಾಲ ತಾಣದಲ್ಲಿ ಹೆಚ್ಚು ಸಕ್ರಿಯರಾಗಿರುವ ಸಚಿವ ಸುರೇಶ್ ಕುಮಾರ್ ಅವರು ವೈರಲ್ ಆದ ಈ ಯೋಜನೆಯ ಬಗ್ಗೆ ಮಾಹಿತಿ ಪಡೆದುಕೊಂಡು, ಕರ್ನಾಟಕದ ಎಲ್ಲಾ ಶಾಲೆಗಳಲ್ಲೂ 'ವಾಟರ್ ಬೆಲ್' ಕಾರ್ಯಕ್ರಮ ಜಾರಿಯಾಗಬೇಕು ಎಂಬ ಆದೇಶ ಹೊರಡಿಸಿದರು. ಒಳ್ಳೆಯದು ಎಲ್ಲಿಂದ ಸಿಕ್ಕರೂ ಸ್ವೀಕರಿಸುವ ಮನೋಭಾವ ಇದ್ದವರಿಂದ ಮಾತ್ರ ಈ ರೀತಿಯ ನಿರ್ಣಯ ತೆಗೆದುಕೊಳ್ಳಲು ಸಾಧ್ಯ.

ದಿನಕ್ಕೆ ಎರಡು ಬಾರಿ 'ವಾಟರ್ ಬೆಲ್' ಬಾರಿಸಬೇಕು, ಆ ಸಮಯದಲ್ಲಿ ಮಕ್ಕಳು ಕಡ್ಡಾಯವಾಗಿ ನೀರು ಕುಡಿಯುವಂತೆ ಶಿಕ್ಷಕರು ನಿಗಾ ವಹಿಸಬೇಕು. ಮಕ್ಕಳು ತಾವೇ ತಂದಿದ್ದ ನೀರನ್ನಾದರೂ ಕುಡಿಯಬಹುದು ಅಥವಾ ಶಾಲೆಯಲ್ಲಿ ಅಗತ್ಯದಷ್ಟು ಶುದ್ಧ ಕುಡಿಯುವ ನೀರನ್ನು ಪೂರೈಸಿ ಅದನ್ನಾದರೂ ಕುಡಿಯುವಂತೆ ಮಾಡಬೇಕು ಎಂಬ ಸುತ್ತೋಲೆ ಶಿಕ್ಷಣ ಇಲಾಖೆಯಿಂದ ಹೊರ ಬಿದ್ದಿದೆ. ಈ ಕಾರ್ಯಕ್ರಮದಿಂದಾಗಿ ಮಕ್ಕಳು ಶಾಲೆಯಲ್ಲಿ ಕನಿಷ್ಠ ಒಂದರಿಂದ ಎರಡು ಲೀಟರ್‌ನಷ್ಟು ನೀರು ಕುಡಿಯುತ್ತಿದ್ದಾರೆ. ಅವರ ಬಹುತೇಕ ಆರೋಗ್ಯದ ಸಮಸ್ಯೆಗಳು ನಿವಾರಣೆಯಾಗುತ್ತಿವೆ.

**ಬ್ಯಾಗ್ ರಹಿತ ದಿನ:**

ಪರೀಕ್ಷೆ, ರ‍್ಯಾಂಕಿಂಗ್, ಫಸ್ಟ್ ಗ್ರೆಡ್ ಎಂಬೆಲ್ಲಾ ಒತ್ತಡಗಳ ನಡುವೆ ಪಠ್ಯೇತರ ಚಟುವಟಿಕೆ ಎಂಬುದು ಬಹುಮಾನ ಗಿಟ್ಟಿಸಿಕೊಳ್ಳಲು ಅನಿವಾರ್ಯವಾದ ಒಂದು ಕ್ರೀಡೆ ಎಂಬಂತಹ ಮನೋಭಾವ ಮೂಡಿತ್ತು. ಕ್ರಿಯಾಶೀಲತೆಗೆ ಕೈಗೊಳ್ಳಬೇಕಾದ ಚಟುವಟಿಕೆ ಶಿಕ್ಷೆಯಾಗಿ ಪರಿಣಮಿಸಿತ್ತು. ಮಕ್ಕಳಿಗೆ ಹೊರೆಯಾಗದಂತೆ ದಿನಪೂರ್ತಿ ಪಠ್ಯೇತರ ಚಟುವಟಿಕೆಯಲ್ಲಿ ಮಕ್ಕಳನ್ನು ತೊಡಗಿಸಲು ಸೂಕ್ತ ಪಠ್ಯಕ್ರಮ ರೂಪಿಸುವ ಪ್ರಯತ್ನಗಳು ನಡೆದಿವೆ. ಶಾಲೆ ಎಂದರೆ ಮಕ್ಕಳಲ್ಲಿನ ಪ್ರತಿಭೆಯನ್ನು ಪ್ರೋತ್ಸಾಹಿಸುವ ದೇಗುಲವನ್ನಾಗಿಸಲು ಮತ್ತಷ್ಟು ಪ್ರಯತ್ನಗಳು ನಡೆಯುತ್ತಿವೆ. ಹಾಗಾಗಿ ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ಮಕ್ಕಳಿಗೆ ಒಂದು ದಿನ ಬ್ಯಾಗ್ ರಹಿತ ದಿನ ಮಾಡುವ ಮೂಲಕ ಪಠ್ಯೇತರ ವಿಷಯದಲ್ಲಿ ಮಕ್ಕಳಿಗೆ ಆಸಕ್ತಿ ಬೆಳೆಸುವುದು ಇದರ ಉದ್ದೇಶವಾಗಿದೆ.

**ಶಾಲೆಯಲ್ಲಿ ವಾಸ್ತವ್ಯ:**

ಸಚಿವರು ಶಾಲೆಯಲ್ಲೇ ವಾಸ್ತವ್ಯ ಹೂಡುವ ಮೂಲಕ ಜನರೊಂದಿಗೆ ಸಮಾಲೋಚನೆ ನಡೆಸಿ ಶೈಕ್ಷಣಿಕ ಸಮಸ್ಯೆಗಳನ್ನು ಅರಿಯುವ ಪ್ರಯತ್ನ ಮಾಡುತ್ತಿದ್ದಾರೆ. ಆರಂಭದಲ್ಲಿ ಆಂಧ್ರ ಪ್ರದೇಶದ ಗಡಿಯಾದ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಎನ್.ಅಚ್ಚಮ್ಮನಹಳ್ಳಿಯಲ್ಲಿ, ನಂತರ ತಮಿಳುನಾಡು ಗಡಿಭಾಗ ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಗೋಪಿನಾಥಂನಲ್ಲಿ ವಾಸ್ತವ್ಯ ಹೂಡಿದ್ದರು. ಈ ಭಾಗದಲ್ಲಿ ಮೂಲಸೌಲಭ್ಯಗಳ ಜೊತೆಗೆ ಸ್ಥಳೀಯರೊಂದಿಗೆ ಚರ್ಚೆ ನಡೆಸಿದರು.

**ಸಂವೇದನೆ ಸ್ಪಂದನೆ:**

ವಿಧಾನಸೌಧದ ಕಚೇರಿಯಲ್ಲೇ ಕುಳಿತು ಆಡಳಿತ ನಡೆಸುವ ಪರಿಪಾಠಕ್ಕೆ ಅಂಟಿಕೊಳ್ಳದ ಸಚಿವ ಸುರೇಶ್ ಕುಮಾರ್ ಅವರು ಜನಸಾಮಾನ್ಯರ ಕಷ್ಟ ಸುಖಗಳನ್ನು ಅರಿತುಕೊಳ್ಳುವ ಪ್ರಯತ್ನಕ್ಕೆ ಮುಂದಾದರು. ಅದಕ್ಕಾಗಿ ರಾಜ್ಯದ ಮೂಲೆ ಮೂಲೆಗಳನ್ನು ಸುತ್ತಲಾರಂಭಿಸಿದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಫೋನ್ ಇನ್ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ನೇರವಾಗಿ ಲಭ್ಯವಾಗಲಾರಂಭಿಸಿದ್ದಾರೆ. ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಚಿವರು ನೇರವಾಗಿ ಲಭ್ಯವಾಗುವುದರಿಂದ ಸಮಸ್ಯೆಗಳನ್ನು ಹೇಳಿಕೊಳ್ಳಲು ಸೂಕ್ತ ವೇದಿಕೆ ದೊರೆತಂತಾಗಿದೆ. ಸಚಿವರ ಈ ಪ್ರಯತ್ನಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸುಮಾರು 2 ಗಂಟೆ ಕಾಲ ಸಚಿವರು ಫೋನ್‌ನಲ್ಲಿ ಸಮಸ್ಯೆಗಳಿಗೆ





Download From : www.kpscvaani.com



ಕಿವಿಯಾದರು. ಶಿಕ್ಷಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು ಅದರ ಆಧಾರದ ಮೇಲೆ ಹಲವಾರು ನಿರ್ಣಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಿದೆ.

ಇತ್ತೀಚೆಗೆ ರಾಜ್ಯ ಸರ್ಕಾರ ಸರ್ಕಾರಿ ನೌಕರರಿಗೆ ತಿಂಗಳ ನಾಲ್ಕನೆ ಶನಿವಾರವನ್ನು ರಜಾ ದಿನವನ್ನಾಗಿ ಘೋಷಿಸಿದೆ. ಎರಡು ಮತ್ತು ನಾಲ್ಕನೆ ಶನಿವಾರಗಳು ಸರ್ಕಾರಿ ರಜೆಯಾಗಿದ್ದರಿಂದ ಈ ಮೊದಲು ನೀಡಲಾಗುತ್ತಿದ್ದ ಸಾಂದರ್ಭಿಕ ರಜೆಗಳನ್ನು ಸರ್ಕಾರ 10ಕ್ಕೆ ಕಡಿತ ಮಾಡಿದೆ. ಆದರೆ ಶಿಕ್ಷಕರಿಗೆ ತಿಂಗಳ ಎರಡನೆ ಮತ್ತು ನಾಲ್ಕನೆ ಶನಿವಾರಗಳಂದು ರಜೆ ಇರುವುದಿಲ್ಲ. ಇತ್ತ ಸಾಂದರ್ಭಿಕ ರಜೆಗಳು ಕಡಿಗೊಂಡಿದ್ದವು. ಇದನ್ನು ಫೋನ್ ಇನ್ ಕಾರ್ಯಕ್ರಮದಲ್ಲಿ ಶಿಕ್ಷಕರು ಸಚಿವರ ಗಮನಕ್ಕೆ ತಂದರು. ಕೂಡಲೇ ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಪತ್ರ ಬರೆದ ಸುರೇಶ್ ಕುಮಾರ್ ಅವರು ಶಿಕ್ಷಣ ಇಲಾಖೆಯಲ್ಲಿ ಸಾಂದರ್ಭಿಕ ರಜೆಗಳನ್ನು ಹಿಂದಿನಂತೆ ಮುಂದುವರೆಸಲು ಸಲಹೆ ನೀಡಿದ್ದಾರೆ.

**ಶಿಕ್ಷಣ ನೀತಿ**

ದೇಶದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ತರಲು ಕೇಂದ್ರ ಸರ್ಕಾರ ನೂತನ ಶಿಕ್ಷಣ ನೀತಿಯನ್ನು ರೂಪಿಸಲು ಮಂದಾಗಿದೆ. ರಾಷ್ಟ್ರೀಯ ನೀತಿಗೆ ಅನುಗುಣವಾಗಿ ರಾಜ್ಯದಲ್ಲಿ ಶಿಕ್ಷಣ ನೀತಿಯನ್ನು ಪರಿಷ್ಕರಿಸಲು ತಜ್ಞರ ಸಮಿತಿಯೊಂದನ್ನು ರಚಿಸಲಾಗಿದೆ. ರಾಜ್ಯದಲ್ಲಿ 45 ಸರ್ಕಾರಿ ಪ್ರಾಥಮಿಕ ಶಾಲೆಗಳು, 5 ಸಾವಿರ ಪ್ರೌಢಶಾಲೆಗಳು ಮತ್ತು ಖಾಸಗಿ ಶಾಲೆಗಳು ಸೇರಿ ಒಟ್ಟು 78 ಶಾಲೆಗಳಿವೆ. ಅವುಗಳಲ್ಲಿ 1.03 ಕೋಟಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, 4.65 ಲಕ್ಷ ಶಿಕ್ಷಕರು ಬೋಧನೆ ಮಾಡುತ್ತಿದ್ದಾರೆ. ನೂತನ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವಿನ ಅನುಪಾತವನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. 10 ಸಾವಿರ ಉಪನ್ಯಾಸಕರ ನೇಮಕಾತಿಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು, ಇನ್ನಷ್ಟು ನೇಮಕಾತಿಗೂ ಪ್ರಕ್ರಿಯೆಗಳು ನಡೆಯುತ್ತಿವೆ. ರಾಜ್ಯದ ಸರ್ಕಾರಿ ಶಾಲೆಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಜ್ಞಾನ ಆಯೋಗದ ಎರಡು ಪ್ರತ್ಯೇಕ ವರದಿಗಳು ಸರ್ಕಾರದ ಮುಂದಿವೆ.

**ಭಾಷಾ ಬದ್ಧತೆ:**

ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿದ್ದರೂ ಬಹಳಷ್ಟು ಶಾಲೆಗಳಲ್ಲಿ ಈಗಲೂ ಕನ್ನಡ ಭಾಷೆಯನ್ನು ಕಲಿಸಲು ನಿರಾಕರಿಸಲಾಗುತ್ತಿದೆ. 2005ರಲ್ಲಿ ಭಾಷಾ ಮಾಧ್ಯಮವನ್ನೇ ಕನ್ನಡವನ್ನಾಗಿಸುವ ಪ್ರಯತ್ನ ನಡೆದಿತ್ತು. ಅದು ನ್ಯಾಯಾಲಯದಲ್ಲಿ ಊರ್ಜಿತವಾಗಲಿಲ್ಲ. ಅಂತಿಮವಾಗಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಕಲಿಸಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಆದರೆ ಬಳಷ್ಟು ಶಾಲೆಗಳು ಕನ್ನಡ ಕಲಿಸಲು ನಿರಾಕರಿಸುತ್ತಿವೆ. ಕನ್ನಡ ಭಾಷೆಯನ್ನು ಕಲಿಸುವ ನಿಯಮ ಜಾರಿಯಾಗಲೇ ಬೇಕು ಎಂಬುದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಒತ್ತಾಸೆಯಾಗಿದೆ. ಇತ್ತೀಚೆಗೆ ಪ್ರಾಧಿಕಾರದ ಅಧ್ಯಕ್ಷ ನಾಗಾಭರಣ ಅವರೊಂದಿಗೆ ಸಭೆ ನಡೆಸಿದ ಸಚಿವ ಸುರೇಶ್ ಕುಮಾರ್ ಅವರು ಖಾಸಗಿ ಶಿಕ್ಷಣ ಸಂಸ್ಥೆಗಳು ರಾಜ್ಯ ಸರ್ಕಾರದ ಭಾಷಾ ನಿಲುವಿಗೆ ಬೆಂಬಲ ಸೂಚಿಸಬೇಕು ಎಂದು ಖಡಕ್ ಎಚ್ಚರಿಕೆ ಕೊಟ್ಟಿದ್ದಾರೆ.

ಆದರೂ ಬೆಂಗಳೂರಿನಲ್ಲಿ 44 ಸೇರಿದಂತೆ ರಾಜ್ಯದಲ್ಲಿ 90ಕ್ಕೂ ಹೆಚ್ಚು ಶಾಲೆಗಳು ಕನ್ನಡ ಭಾಷೆ ಕಲಿಸಲು ನಿರಾಕರಿಸಿವೆ. ಅವುಗಳಿಗೆ ನೋಟಿಸ್ ನೀಡಲಾಗಿದೆ. ಕನ್ನಡ ಭಾಷೆ ಕಲಿಸದಿದ್ದರೆ ಶಾಲಾ ಮಾನ್ಯತೆ ನಿವೀಕರಣಕ್ಕೆ ಅಗತ್ಯ ಇರುವ ನಿರಪೇಕ್ಷಣಾ ಪತ್ರ ನೀಡದಿರಲು ಮಹತ್ವದ ತೀರ್ಮಾನವನ್ನು ಸಚಿವರು ತೆಗೆದುಕೊಂಡಿದ್ದಾರೆ. ಒಂದೆರಡು ಶಾಲೆಗಳಿಗೆ ದಂಡನೆ ರೂಪದಲ್ಲಿ ಇದು ಜಾರಿಯಾಗಿದೆ. ಇನ್ನು ಕೇಂದ್ರೀಯ ವಿದ್ಯಾಲಯಗಳಲ್ಲಿ ಕನ್ನಡ ಕಲಿಸಲು ನಿರಾಕರಿಸಲಾಗುತ್ತಿದೆ. ಕನ್ನಡ ಭಾಷೆಯ ಕನಿಷ್ಠ 20 ವಿದ್ಯಾರ್ಥಿಗಳಿದ್ದರೆ ಮಾತ್ರ ಕನ್ನಡ ಭಾಷೆ ಕಲಿಸಲು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಕೇಂದ್ರೀಯ ಸಂಘಟನ್ ತಿಳಿಸಿದೆ. ಇದಕ್ಕೆ ಆಕ್ಷೇಪ ವ್ಯಕ್ತ ಪಡಿಸಿರುವ ಸಚಿವರು ಕೇಂದ್ರೀಯ ವಿದ್ಯಾಲಯಗಳ ಮುಖ್ಯಸ್ಥರಾಗಿರುವ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ಕನ್ನಡ ಕಲಿಸುವ ವಿಷಯದಲ್ಲಿ ಮುತುವರ್ಜಿ ವಹಿಸುವಂತೆ ಸಲಹೆ ನೀಡಿದ್ದಾರೆ.

**ಈ ವರ್ಷವೇ 2ನೇ ಸಮವಸ್ತ್ರ ಪೂರೈಕೆ:**

ಹೈಕೋರ್ಟ್ ಸೂಚನೆ ಆಧರಿಸಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಿಗೆ ಎರಡು ಜೊತೆ ಸಮವಸ್ತ್ರ ನೀಡಲು ರಾಜ್ಯ ಸರ್ಕಾರ 94 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಈಗಾಗಲೇ ಸುಮಾರು 37 ಲಕ್ಷ ವಿದ್ಯಾರ್ಥಿಗಳಿಗೆ ಒಂದು ಜೊತೆ ಸಮವಸ್ತ್ರ ನೀಡಲಾಗಿದೆ. 2ನೇ ಸಮವಸ್ತ್ರ ನೀಡಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲಗಳಾಗಿವೆ. ಸಮವಸ್ತ್ರ ಖರೀದಿಯಲ್ಲಿ ಪಾರದರ್ಶಕತೆ ತರಲು ಸಚಿವರು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ. ಸ್ಥಳೀಯವಾಗಿ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಮುಖ್ಯೋಪಾಧ್ಯಾಯರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಬಿಇಒಗಳು, ಬಿಆರ್‌ಪಿಗಳು, ಸಿಆರ್‌ಪಿಗಳು ಸಮವಸ್ತ್ರ ಖರೀದಿ ಪ್ರಕ್ರಿಯೆಯಿಂದ ಸಂಪೂರ್ಣ ದೂರ ಇರಬೇಕು ಎಂದು ಸೂಚಿಸಲಾಗಿದೆ.

ಸರ್ಕಾರ ಎಸ್‌ಡಿಎಂಸಿಗಳ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡಲಿದೆ. ಆ ಹಣ ಬಳಸಿ ಮಕ್ಕಳಿಗೆ ಸರಿಹೊಂದುವ ಅಳತೆಯ ಸಮವಸ್ತ್ರ ಒದಗಿಸಬೇಕು. ಸಮವಸ್ತ್ರದ ಬಟ್ಟೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಖರೀದಿಯಲ್ಲಿ ಲೋಪದೋಷಗಳಾದಾರೆ ಮುಖ್ಯೋಪಾಧ್ಯಾಯರನ್ನು ಹೊಣೆ ಮಾಡಲಾಗುವುದು ಎಂಬ ಷರತ್ತು ವಿಧಿಸಲಾಗಿದೆ. ಆದರೂ ಕೆಲವೆಡೆ ಸಣ್ಣಪುಟ್ಟ ದೋಷಗಳು ಕಂಡು ಬಂದಿರುವುದರಿಂದ ಸಚಿವರು ಮುಂದಿನ ವರ್ಷದಿಂದ ಶೂ ಹಾಗೂ ಸಮವಸ್ತ್ರ ಪೂರೈಕೆಯನ್ನು ಲಿಡಕರ್‌ನಂತಹ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಗುತ್ತಿಗೆ ನೀಡುವ ಕುರಿತು ಪರಿಶೀಲನೆ ನಡೆಸುತ್ತಿದ್ದಾರೆ.

**ಅನಪೇಕ್ಷಿತವಾಗಿ ಎದುರಾದ ಅನಿರೀಕ್ಷಿತ ಸವಾಲು:**

ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದ ಹಾಗೇ ಪ್ರವಾಹ ಪರಿಸ್ಥಿತಿ ಜನಜೀವನವನ್ನು ಕಂಗೆಡಿಸಿತ್ತು. ಆರಂಭದಲ್ಲಿ ಕೊಡಗು, ಮಲೆನಾಡು ಮತ್ತು ಕರಾವಳಿ ಭಾಗವನ್ನು ಆವರಿಸಿದ್ದ ಪ್ರವಾಹ ಕ್ರಮೇಣ ಉತ್ತರ ಕರ್ನಾಟಕ ಭಾಗವನ್ನು ಆವರಿಸಿತ್ತು. ಸರ್ಕಾರ ಮಾಡಿದ ಅಂದಾಜಿನಂತೆ ಸರಿ ಸುಮಾರು 38 ಸಾವಿರ ಕೋಟಿ ರೂಪಾಯಿಗೂ ಹೆಚ್ಚಿನ ನಷ್ಟವಾಗಿದೆ. ಅಂದಾಜಿನ ಪ್ರಕಾರ ನೆರೆ ಪೀಡಿತ 22 ಜಿಲ್ಲೆಗಳಲ್ಲಿ ಸುಮಾರು 6040 ಶಾಲೆಗಳು ಹಾನಿಗೊಳಗಾಗಿದ್ದರೆ, 2349 ಶಾಲೆಗಳು ಸಂಪೂರ್ಣ ಕುಸಿದು ಹೋಗಿದ್ದು, 5337 ಶಾಲೆಗಳ ಕಟ್ಟಡಕ್ಕೆ ಗಂಭೀರ ಸ್ವರೂಪದ ಹಾನಿಯಾಗಿದೆ.

ಕೆಲವು ಶಾಲಾ ಕಾಲೇಜುಗಳ ಕಟ್ಟಡಗಳನ್ನು ನೆರೆ ಪೀಡಿತರ ತಾತ್ಕಾಲಿಕ ವ್ಯವಸ್ಥೆಗೆ ಜಿಲ್ಲಾಡಳಿತ ಬಳಸಿಕೊಂಡಿತ್ತು. ಹೀಗಾಗಿ ಶೈಕ್ಷಣಿಕ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಂಡಿದ್ದವು. ಪಠ್ಯಪುಸ್ತಕ ಸೇರಿದಂತೆ ಶೈಕ್ಷಣಿಕ ಸಾಮಗ್ರಿಗಳು ಕೊಚ್ಚಿ ಹೋಗಿದ್ದವು. ನೆಲೆ ಇಲ್ಲದ ಪರಿಸ್ಥಿತಿಯಲ್ಲಿ ಪಾಠ ಮಾಡುವ ಹಾಗಿರಲಿಲ್ಲ, ಮಾಡಿದರೂ ಕೇಳಲು ವಿದ್ಯಾರ್ಥಿಗಳು ಬರುವ ಸ್ಥಿತಿ ಇರಲಿಲ್ಲ. ನೆರೆಯಿಂದಾದ ಹಾನಿಯನ್ನು ಸರಿ ಪಡಿಸಿ ಆ ಪ್ರದೇಶಗಳನ್ನು ಸಹಜ ಸ್ಥಿತಿಗೆ ತರುವುದು ಸರ್ಕಾರಕ್ಕೆ





**ಏಳನೇ ತರಗತಿ ಪಬ್ಲಿಕ್ ಪರೀಕ್ಷೆ**

ಶಿಕ್ಷಣ ಯಜ್ಞಕ್ಕೆ ಕೈ ಹಾಕಿರುವ ಸಚಿವ ಸುರೇಶ್ ಕುಮಾರ್ ಅವರು ಏಳನೇ ತರಗತಿಗೆ ಪಬ್ಲಿಕ್ ಪರೀಕ್ಷೆ ನಡೆಸಲು ಮುಂದಾಗಿದ್ದರು. ಇದಕ್ಕೆ ಪರ–ವಿರೋಧ ಅಭಿಪ್ರಾಯಗಳು ವ್ಯಾಪಕವಾಗಿ ಕೇಳಿ ಬಂದಿದ್ದವು. ಏಕಮುಖ ನಿರ್ಧಾರ ತೆಗೆದುಕೊಳ್ಳದೆ ತಜ್ಞರ ಸಮಿತಿ ರಚಿಸಿ ಅಭಿಪ್ರಾಯ ಪಡೆದ ಸಚಿವರು ಕೊನೆಗೆ ಪಬ್ಲಿಕ್ ಪರೀಕ್ಷೆ ನಡೆಸಬೇಕು ಎಂಬ ಚಿಂತನೆಯನ್ನು ಕೈ ಬಿಟ್ಟಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಭಯ ಬೀಳುತ್ತಿದ್ದು ಅದನ್ನು ತಪ್ಪಿಸಲು ಅರ್ಥಾತ್ ಪಬ್ಲಿಕ್ ಪರೀಕ್ಷೆಯ ಬಗ್ಗೆ ಇರುವ ಭಯವನ್ನು ಹೋಗಲಾಡಿಸಲು ಏಳನೇ ತರಗತಿಗೆ ಪಬ್ಲಿಕ್ ಪರೀಕ್ಷೆ ನಡೆಸಬೇಕು ಎಂಬುದು ಸಚಿವರ ಚಿಂತನೆಯಾಗಿತ್ತು. ಆರಂಭದಲ್ಲಿ ಉತ್ತಮ ಅಂಕ ಗಳಿಸದ ವಿದ್ಯಾರ್ಥಿಗಳನ್ನು ಅನುತೀರ್ಣಗೊಳಿಸಿ ಗುಣಾತ್ಮಕ ಶಿಕ್ಷಣ ಪಡೆದುಕೊಂಡ ನಂತರ ಮುಂದಿನ ತರಗತಿಗೆ ಮುಂಬಡ್ತಿ ನೀಡಬೇಕು ಎಂಬ ಚಿಂತನೆ ಸಚಿವರಾಗಿತ್ತು.

ಆದರೆ ವಿದ್ಯಾರ್ಥಿಗಳನ್ನು ಅನುತೀರ್ಣಗೊಳಿಸಲು ಸಾಕಷ್ಟು ವಿರೋಧಗಳು ವ್ಯಕ್ತವಾದ್ದರಿಂದ ಪಬ್ಲಿಕ್ ಪರೀಕ್ಷೆ ನಡೆಸಲಾಗುತ್ತದೆ. ಆದರೆ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು ಅನುತೀರ್ಣಗೊಳಿಸುವುದಿಲ್ಲ. ಬದಲಾಗಿ ವಿದ್ಯಾರ್ಥಿಗಳು ಯಾವ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂಬ ಮೌಲ್ಯಮಾಪನ ನಡೆಸಲಾಗುವುದು. ಹಿಂದುಳಿದ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಿ ವಿದ್ಯಾರ್ಥಿಗಳ ಸರ್ವೋತೋಮುಖ ಬೆಳವಣಿಗೆಗೆ ಕ್ರಮ ಕೈಗೊಳ್ಳುವ ಚಿಂತನೆ ನಡೆಸಿದರು. ಪಬ್ಲಿಕ್ ಪರೀಕ್ಷೆ ಎಂಬುದಕ್ಕೆ ಪೋಷಕರು ಹೆದರಲಾರಂಭಿಸಿದ್ದರಿಂದ ಕೊನೆಗೆ ಸಾಮಾನ್ಯ ಮೌಲ್ಯಾಂಕನ ಪರೀಕ್ಷಾ ಪದ್ಧತಿ ಅನುಸರಿಸಲು ನಿರ್ಧರಿಸಲಾಗಿದೆ. ಏಳನೆ ತರಗತಿಯ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದಲ್ಲೇ ಪ್ರಶ್ನೆ ಪತ್ರಿಕೆ ಸಿದ್ಧ ಪಡಿಸಲಾಗುತ್ತದೆ. ಮೌಲ್ಯಮಾಪನವನ್ನು ಜಿಲ್ಲಾಮಟ್ಟದಲ್ಲಿ ನಡೆಸಲಾಗುತ್ತದೆ. ಆದರೆ ಯಾವ ಸಂದರ್ಭದಲ್ಲೂ ವಿದ್ಯಾರ್ಥಿಗಳನ್ನು ಅನುತೀರ್ಣಗೊಳಿಸುವುದಿಲ್ಲ. ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಮೌಲ್ಯಾಂಕನ ನಡೆಸಲಾಗುತ್ತದೆ. ಅಗತ್ಯ ಕಂಡು ಬಂದರೆ ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡಲಾಗುತ್ತದೆ ಎಂದು ಸಚಿವರು ಪ್ರಕಟಿಸಿದ್ದಾರೆ.





Download From : www.kpscvaani.com




**ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆ**

ದೇಶದ ಮೊದಲ ಶಿಕ್ಷಕಿ ಎಂಬ ಖ್ಯಾತಿ ಹೊಂದಿರುವ ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನವನ್ನು ಇದೇ ಮೊದಲ ಬಾರಿಗೆ ರಾಜ್ಯ ಸರ್ಕಾರವು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಆಚರಿಸಿತು. ಮಹಿಳೆಯೊಬ್ಬರು ಶಿಕ್ಷಕಿಯಾಗುವುದು ಧರ್ಮಕ್ಕೂ ಸಮಾಜಕ್ಕೂ ದ್ರೋಹ ಬಗೆದಂತೆ ಎಂಬ ಭಾವನೆ ಹೊಂದಿದ್ದ ಅಂದಿನ ಕಾಲದಲ್ಲಿ ದಿಟ್ಟತನದಿಂದ ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಕ ತರಬೇತಿ ಪಡೆದರು. ಸಮಾಜ ಅವರಿಗೆ ಎಷ್ಟೇ ಕಿರುಕುಳ ನೀಡಿದರೂ ಕೂಡ ಶಿಕ್ಷಕ ವೃತ್ತಿಯನ್ನು ತ್ಯಜಿಸಲಿಲ್ಲ. ಪತಿ ಜ್ಯೋತಿಬಾ ಫುಲೆ ಅವರ ಸಹಕಾರದಲ್ಲಿ 1848 ರಿಂದ 1852 ರ ಅವಧಿಯಲ್ಲಿ 14 ಶಾಲೆಗಳನ್ನು ತೆರೆದು ಮಕ್ಕಳಿಗೆ ವಿದ್ಯೆಯನ್ನು ಧಾರೆ ಎರೆದರು. ಇವರ ಕಾರ್ಯವನ್ನು ಮೆಚ್ಚಿದ ಬ್ರಿಟಿಷ್ ಸರ್ಕಾರವು ಇವರಿಗೆ ದೇಶದ ಮೊದಲ ಶಿಕ್ಷಕಿ ಎಂಬ ಮನ್ನಣೆಯನ್ನು ನೀಡಿ ಗೌರವಿಸಿತು. ಶಿಕ್ಷಣ ಕ್ಷೇತ್ರವಲ್ಲದೆ ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದ ಸಾವಿತ್ರಿಬಾಯಿ ಫುಲೆ ಅವರ ಜೀವನ ಮಕ್ಕಳಿಗೆ ಸ್ಫೂರ್ತಿ ತುಂಬಲಿ ಎಂಬ ಉದ್ದೇಶದಿಂದ ಜನವರಿ 3 ರಂದು ಅವರ ಜನ್ಮ ದಿನಾಚರಣೆಯನ್ನು ಎಲ್ಲಾ ಸರ್ಕಾರಿ ಶಾಲೆಯಲ್ಲಿ ಆಚರಣೆ ಮಾಡುವ ಮೂಲಕ ಮಕ್ಕಳಿಗೆ ಸಾವಿತ್ರಿಬಾಯಿ ಫುಲೆ ಅವರ ವ್ಯಕ್ತಿತ್ವ ಪರಿಚಯವನ್ನು ಮಾಡಿಕೊಡಲಾಯಿತು.

ಸವಾಲಿನ ಕೆಲಸವಾಗಿತ್ತು. ಒಂದೆಡೆ ಜನಜೀವನವನ್ನು ಸಹಜ ಸ್ಥಿತಿಗೆ ತರುವ ಪ್ರಯತ್ನಗಳು ನಡೆಯುತ್ತಿದ್ದರೆ ಮತ್ತೊಂದೆಡೆ ಶೈಕ್ಷಣಿಕ ಚಟುವಟಿಕೆಗಳನ್ನು ಯಥಾಸ್ಥಿತಿಗೆ ತರುವ ಸವಾಲನ್ನು ಸಚಿವ ಸುರೇಶ್ ಕುಮಾರ್ ಸ್ವೀಕರಿಸಿದರು. ನಿರಂತರವಾಗಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡರು. ಶಾಲೆಗಳ ಪುನರ್ ನಿರ್ಮಾಣಕ್ಕೆ ಸುಮಾರು 3602ಕೋಟಿ ರೂ.ಗಳ ನೆರವಿನ ಅಗತ್ಯ ಇತ್ತು. ರಾಜ್ಯ ಸರ್ಕಾರ ಮೊದಲ ಕಂತಿನಲ್ಲಿ 534 ಕೋಟಿ ರೂ.ಗಳನ್ನು ಒದಗಿಸಿತ್ತು. ಹೆಚ್ಚಿನ ಸಂಪನ್ಮೂಲವನ್ನು ಕ್ರೋಢೀಕರಿಸಲು ಸಚಿವರು ದಾನಿಗಳ ಮೊರೆ ಹೋದರು. ಮೊಬೈಲ್ ಅಪ್ಲಿಕೇಷನ್ ಮೂಲಕ ಖಾಸಗಿ ಸಂಸ್ಥೆಗಳು ಶಾಲೆಗಳ ಪುನರ್ ನಿರ್ಮಾಣದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟರು. ಕಟ್ಟಡ ನಿರ್ಮಾಣ, ಶೌಚಾಲಯ, ಗೋಡೆ ನಿರ್ಮಾಣ, ಬಣ್ಣ ಬಳಿಯುವುದು ಸೇರಿದಂತೆ ನಾನಾ ರೀತಿಯ ಕೆಲಸಗಳ ಪೈಕಿ ತಮ್ಮ ಇಚ್ಛೆಯನುಸಾರ ಶಾಲೆಗಳ ಪುನರ್ ನಿರ್ಮಾಣದಲ್ಲಿ ದಾನಿಗಳು ತೊಡಗಿಸಿಕೊಳ್ಳುವಂತೆ ಕೋರಿದರು. ಸಚಿವರ ಈ ಪ್ರಯತ್ನಕ್ಕೆ ಸಮಾಜದಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿ, ಖಾಸಗಿ ಸಂಸ್ಥೆಗಳು ನಾ ಮುಂದು ತಾ ಮುಂದು ಎಂದು ಪುನರ್ವಸತಿಗೆ ನೆರವಾದವು.

**ಗುಣಾತ್ಮಕ ಶಿಕ್ಷಣದ ಕಡೆ ನಮ್ಮ ನಡೆ:**

ಪ್ರಸ್ತುತ ಶಿಕ್ಷಣ ವ್ಯವಸ್ಥೆ ಫಲಿತಾಂಶ ಆಧಾರಿತವಾಗಿದೆ. ಎಸ್ಎಸ್ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದರೆ ಸಾಕು ಎಂಬ ಭಾವನೆಯಿಂದ 10ನೆ ತರಗತಿಯ ವಿದ್ಯಾರ್ಥಿಗಳ ಕಲಿಕಾ ಮಟ್ಟ ಸುಧಾರಣೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಏಕಾಏಕಿ 10ನೆ ತರಗತಿಯಲ್ಲಿ ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರುವುದಕ್ಕಿಂತ ಮೂರನೆ ತರಗತಿಯಿಂದ ಎಂಟನೆ ತರಗತಿಯವರೆಗೆ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಒರೆಗೆ ಹಚ್ಚಲು ನಿರ್ಧರಿಸಲಾಗಿದೆ. ಗುಣಾತ್ಮಕ ಶಿಕ್ಷಣದ ಕಡೆ ನಮ್ಮ ನಡೆ ಅಭಿಯಾನದಡಿ ರಾಜ್ಯಾದ್ಯಂತ ಇರುವ 34 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಸುಮಾರು ಒಂದು ಸಾವಿರ ವಿಷಯ ತಜ್ಞರನ್ನು ಎಲ್ಲಾ ಶಾಲೆಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ.

ಶಾಲೆಗಳಿಗೆ ಭೇಟಿ ನೀಡುವ ವಿಷಯ ತಜ್ಞರು ವಿದ್ಯಾರ್ಥಿಗಳ ಕಲಿಕೆ ಸಾಮರ್ಥ್ಯದಲ್ಲಿರುವ ಕೊರತೆಯನ್ನು ಗುರುತಿಸಬೇಕು. ಗಣಿತ, ವಿಜ್ಞಾನ, ಇಂಗ್ಲಿಷ್ ಸೇರಿದಂತೆ ಯಾವ ವಿಷಯದಲ್ಲಿ ವಿದ್ಯಾರ್ಥಿಗಳು ಕಲಿಕಾ ತೊಂದರೆ ಅನುಭವಿಸುತ್ತಿದ್ದಾರೆ ಎಂಬುದನ್ನು ಗುರುತಿಸಬೇಕು ಮತ್ತು ಸಮಸ್ಯೆಗೆ ಪರಿಹಾರ ಸೂಚಿಸಬೇಕು. ಇದರಿಂದ ಪ್ರಾಥಮಿಕ ಹಂತದಿಂದಲೂ ವಿದ್ಯಾರ್ಥಿಗಳು ತಜ್ಞ ಉಪನ್ಯಾಸಕರ ನೆರವಿನಲ್ಲಿ ತಮ್ಮ ಕಲಿಕಾ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಲಿದ್ದಾರೆ. ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ಕೂಡ ವಿಷಯ ತಜ್ಞರ ಸೇವೆಯನ್ನು ಬಳಸಿಕೊಳ್ಳಲು ಸಚಿವರು ಅವಕಾಶ ಮಾಡಿಕೊಟ್ಟಿದ್ದಾರೆ.

**ಸುರಕ್ಷತೆಯ ಅಭಯ:**

ಗುಣಮಟ್ಟದ ಜೊತೆ ಮಕ್ಕಳ ಸುರಕ್ಷತೆಗೆ ರಾಜ್ಯ ಸರ್ಕಾರ ಆದ್ಯ ಗಮನ ನೀಡುತ್ತಿದೆ. ಪೋಷಕರು ತಮ್ಮ ಮಕ್ಕಳ ಬಗ್ಗೆ ವಹಿಸುವ ಕಾಳಜಿಯನ್ನು ಅರ್ಥ ಮಾಡಿಕೊಂಡಿರುವ ಶಿಕ್ಷಣ ಇಲಾಖೆ ಸುರಕ್ಷತೆಗೆ ಸುಮಾರು 25 ಮಾರ್ಗಸೂಚಿಗಳನ್ನು ರೂಪಿಸಿದೆ. ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಪ್ರತಿ ಕೊಠಡಿಯಲ್ಲೂ ಸಿಸಿಟಿವಿ ಅಳವಡಿಸಿರಬೇಕು, ಶಾಲಾ ವಾಹನಗಳಲ್ಲಿ ಕಡ್ಡಾಯವಾಗಿ ಮಹಿಳಾ ಸಿಬ್ಬಂದಿ ಇರಬೇಕು, ಈಜುಕೊಳದಲ್ಲಿ ಮಕ್ಕಳ ಫೋಟೋ ತೆಗೆಯುವುದನ್ನು ನಿಷೇಧಿಸಬೇಕು, ಮಕ್ಕಳ ಸಹಾಯವಾಣಿ 1908 ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು, ಅಗ್ನಿ ಅವಗಡಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು, ಗಂಡು ಮತ್ತು ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಿರಬೇಕು, ಮಕ್ಕಳ ಮೇಲೆ ದೌರ್ಜನ್ಯ ನಡೆದರೆ ಪೊಲೀಸರು ಸ್ವಯಂ ಪ್ರೇರಣೆಯಿಂದ ದೂರು ದಾಖಲಿಸಿ ಕ್ರಮ ಕೈಗೊಳ್ಳಬೇಕು. ಶಾಲೆಯ ಮುಂದೆ ವಾಹನಗಳ ಸಂಚಾರದ ವೇಗ 20 ಕಿ.ಮೀ.ಗಿಂತ ಹೆಚ್ಚಿರದಂತೆ





ನೋಡಿಕೊಳ್ಳಬೇಕು, ಶಾಲೆಗಳ ಭದ್ರತೆ ಕುರಿತು ಎರಡು ವರ್ಷಗಳಿಗೊಮ್ಮೆ ಪ್ರಮಾಣ ಪತ್ರ ಪಡೆದುಕೊಳ್ಳಬೇಕು, ರ್‍ಯಾಗಿಂಗ್ ತಡೆಗೆ ಪೊಲೀಸರನ್ನು ಒಳಗೊಂಡ ಸಮಿತಿ ರಚಿಸಬೇಕು ಎಂಬುದನ್ನು ಸೇರಿದಂತೆ ಮಕ್ಕಳ ಸುರಕ್ಷತೆಗೆ 25 ಸ್ಪಷ್ಟ ಮಾರ್ಗಸೂಚಿಗಳನ್ನು ಶಿಕ್ಷಣ ಇಲಾಖೆ ಜಾರಿ ಮಾಡಿದೆ.

**ಪಿಯುಸಿ ಪರೀಕ್ಷೆಯಲ್ಲಿ 44 ಪುಟಗಳ ಬುಕ್‌ಲೆಟ್:**

ಪಿಯುಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ 44 ಪುಟಗಳ ಒಂದೇ ಉತ್ತರ ಪತ್ರಿಕೆಯನ್ನು ನೀಡಲು ತಯಾರಿ ನಡೆದಿದೆ. ಈವರೆಗೂ 22 ಪುಟಗಳ ಉತ್ತರ ಪತ್ರಿಕೆಯ ಬುಕ್‌ಲೆಟ್ ಅನ್ನು ನೀಡಲಾಗುತ್ತಿತ್ತು. ವಿದ್ಯಾರ್ಥಿಗಳು ಹೆಚ್ಚುವರಿ ಪುಟಗಳಿಗೆ ಮನವಿ ಸಲ್ಲಿಸುವುದು ಸಾಮಾನ್ಯವಾಗಿತ್ತು. ಹೆಚ್ಚುವರಿ ಪುಟಗಳನ್ನು ಮುಖ್ಯಪತ್ರಿಕೆಯ ಜೊತೆ ಜೋಡಿಸಿ ಕಟ್ಟಲಾಗುತಿತ್ತು. ಸಾಗಾಣಿಕೆಯ ವೇಳೆ ಅವು ಕಳೆದು ಹೋಗುವ ಅಥವಾ ಹಾನಿಗೊಳಗಾಗುವ ಅಪಾಯ ಇತ್ತು. ಹೆಚ್ಚುವರಿ ಪುಟಗಳಿಗೆ ಮನವಿ ಸಲ್ಲಿಸುವುದು, ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಅದನ್ನು ಕೊಡುವುದು, ಹೆಚ್ಚುವರಿ ಪುಟದ ಮಾಹಿತಿಯನ್ನು ವಿದ್ಯಾರ್ಥಿ ದಾಖಲಿಸುವುದು ಇದಕ್ಕೆಲ್ಲಾ ಸಾಕಷ್ಟು ಸಮಯ ವ್ಯರ್ಥವಾಗುತಿತ್ತು. ಎಲ್ಲಾ ತೊಂದರೆಗಳನ್ನು ನಿವಾರಿಸಲು ಆರಂಭದಲ್ಲೇ 44 ಪುಟಗಳ ಉತ್ತರ ಪತ್ರಿಕೆಯ ಬುಕ್‌ಲೆಟ್ ನೀಡುವ ಚಿಂತನೆಯನ್ನು ಶಿಕ್ಷಣ ಇಲಾಖೆ ನಡೆಸುತ್ತಿದೆ.

**ವರ್ಗಾವಣೆ ನೀತಿಯಲ್ಲಿ ಸಮಗ್ರ ಸುಧಾರಣೆ**

ಶಿಕ್ಷಣ ವ್ಯವಸ್ಥೆಯ ಆಧಾರ ಸ್ತಂಭಗಳಾದ ಶಿಕ್ಷಕರು ರಾಜ್ಯ ಸರ್ಕಾರದ ವರ್ಗಾವಣೆ ನೀತಿಯ ವಿರುದ್ಧ ದಶಕಗಳಿಂದಲೂ ಅಸಮಾದಾನ ವ್ಯಕ್ತ ಪಡಿಸುತ್ತಲೇ ಇದ್ದಾರೆ. ವರ್ಗಾವಣೆಗಾಗಿ ಬರುವ ಒತ್ತಡಗಳನ್ನು ನಿಯಂತ್ರಿಸುವ ಸಲುವಾಗಿ ರಾಜ್ಯ ಸರ್ಕಾರ ಈ ಹಿಂದೆ ಕಡ್ಡಾಯ ವರ್ಗಾವಣೆ ನೀತಿಯನ್ನು ರೂಪಿಸಿತ್ತು. ಕೌನ್ಸಿಲಿಂಗ್ ಪದ್ಧತಿಯನ್ನು ಜಾರಿಗೆ ತಂದಿತ್ತು. ಆದರೂ ಆಕ್ಷೇಪಗಳು ನಿಂತಿರಲಿಲ್ಲ. ಅಂತರ್ ಜಿಲ್ಲಾ ವರ್ಗಾವಣೆಯಿಂದ ದೂರದೂರಿಗೆ ಹೋಗಬೇಕಾದ ಸಂಕಷ್ಟದಿಂದ ಶಿಕ್ಷಕರು ಖಿನ್ನತೆಗೆ ಒಳಗಾಗಿದ್ದರು. ಶಿಕ್ಷಕರ ವರ್ಗಾವಣೆಯಲ್ಲಿನ ಸಮಸ್ಯೆಗಳನ್ನು ಬಗೆ ಹರಿಸಲು ಸಚಿವ ಸುರೇಶ್ ಕುಮಾರ್ ಅವರು ಹೊಸ ಚಿಂತನೆ ನಡೆಸಿದ್ದಾರೆ. ವರ್ಗಾವಣೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತಂದು ಕಡ್ಡಾಯ ವರ್ಗಾವಣೆ ಬದಲಿಗೆ, ಮಾನವೀಯ ನೆಲೆಯಲ್ಲಿ ವಲಯ ವರ್ಗಾವಣೆ ನೀತಿಯನ್ನು ಜಾರಿಗೆ ತರಲು ಮುಂದಾಗಿದ್ದಾರೆ. ನಿವೃತ್ತಿಗೆ ಕೆಲವೇ ವರ್ಷಗಳ ಸಮೀಪ ಇರುವ ಶಿಕ್ಷಕರಿಗೆ ವರ್ಗಾವಣೆಯಿಂದ ವಿನಾಯಿತಿ ನೀಡಲಾಗುತ್ತದೆ. 55 ವರ್ಷದ ಪುರುಷ ಶಿಕ್ಷಕರು, 50 ವರ್ಷ ದಾಟಿದ ಮಹಿಳಾ ಶಿಕ್ಷಕಿಯರಿಗೆ ಹಾಗೂ ವಿಶೇಷ ಚೇತನ ಮಕ್ಕಳನ್ನು ಹೊಂದಿರುವ ಪೋಷಕ

**ಮೂರನೆ ತರಗತಿಯಿಂದ ಎಂಟನೆ ತರಗತಿಯವರೆಗೆ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಒರೆಗೆ ಹಚ್ಚಲು ನಿರ್ಧರಿಸಲಾಗಿದೆ. ಗುಣಾತ್ಮಕ ಶಿಕ್ಷಣದ ಕಡೆ ನಮ್ಮ ನಡೆ ಅಭಿಯಾನದಡಿ ರಾಜ್ಯಾದ್ಯಂತ ಇರುವ 34 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಸುಮಾರು ಒಂದು ಸಾವಿರ ವಿಷಯ ತಜ್ಞರನ್ನು ಎಲ್ಲಾ ಶಾಲೆಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ.**



ಶಿಕ್ಷಕರಿಗೆ ವರ್ಗಾವಣೆಯಿಂದ ವಿನಾಯಿತಿ ನೀಡಲಾಗುತ್ತಿದೆ. ಇದು ಜಾರಿಗೆ ಬಂದರೆ ಹಲವಾರು ವರ್ಷಗಳಿಂದ ಶಿಕ್ಷಕರು ಅನುಭವಿಸುತ್ತಿರುವ ಆತಂಕ, ಸಂಕಷ್ಟಗಳಿಗೆ ಪರಿಹಾರ ಸಿಗುವ ಸಾಧ್ಯತೆ ಇದೆ.


ಶಿಕ್ಷಕರಿಗೆ ಬೋಧನೆಯ ಕೆಲಸಗಳಿಗಿಂತಲೂ ಬೋಧನೇತರ ಕರ್ತವ್ಯದ ಒತ್ತಡಗಳೇ ಹೆಚ್ಚಾಗಿವೆ. ಇದರಿಂದ ಗುಣಾತ್ಮಕ ಶಿಕ್ಷಣ ಕುಸಿಯುತ್ತಿದೆ ಎಂಬ ಆಕ್ಷೇಪ ವ್ಯಾಪಕವಾಗಿ ಕೇಳಿ ಬಂದಿದೆ. ಹಾಗಾಗಿ ಚುನಾವಣಾ ಕರ್ತವ್ಯಕ್ಕೆ ಶಿಕ್ಷಕರನ್ನು ಬಳಸಿಕೊಳ್ಳದಂತೆ ಚುನಾವಣಾ ಆಯೋಗಕ್ಕೆ ಪತ್ರ ಬರೆದು ಸಚಿವರು ಮನವಿ ಮಾಡಿದ್ದಾರೆ. ಸಣ್ಣಪುಟ್ಟ ಕೆಲಸಗಳಿಗೆ ಉಪನಿರ್ದೇಶಕರ ಕಚೇರಿಗಳಿಗೆ ಶಿಕ್ಷಕರು ಮತ್ತು ಪಿಯು ಕಾಲೇಜುಗಳ ಉಪನ್ಯಾಸಕರು ಅಲೆಯುವುದನ್ನು ತಪ್ಪಿಸಲು ವಿಶೇಷ ಮೊಬೈಲ್ ಅಪ್ಲಿಕೇಷನ್ ರೂಪಿಸಲಾಗುತ್ತಿದೆ. ಇದರಲ್ಲಿ ಶಿಕ್ಷಕರು ಮತ್ತು ಉಪನ್ಯಾಸಕರು ತಮ್ಮ ಸಮಸ್ಯೆಗಳನ್ನು ದಾಖಲಿಸಿದರೆ ಸಾಕು ಇಲಾಖೆ ಅದಕ್ಕೆ ಪರಿಹಾರ ಒದಗಿಸುವ ಪ್ರಯತ್ನ ಮಾಡುತ್ತದೆ. ಇದರಿಂದ ಅನಗತ್ಯ ಓಡಾಟಗಳು ತಪ್ಪಲಿವೆ.

ಶಿಕ್ಷಕ ಸ್ನೇಹಿ ಯೋಜನೆಗಳ ಜೊತೆಯಲ್ಲೇ ಕರ್ತವ್ಯ ನಿರ್ವಹಣೆಯಲ್ಲಿ ಲೋಪ ಎಸಗುವ ಶಿಕ್ಷಕರನ್ನು ದಂಡಿಸುವ ನಿಷ್ಠುರತೆಯನ್ನು ಸಚಿವರು ಪ್ರದರ್ಶಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಪಾಠ ಮಾಡದೆ ಕಾಲ ಕಳೆಯುವ, ಕರ್ತವ್ಯದ ವೇಳೆಯಲ್ಲಿ ವೈಯಕ್ತಿಕ ಕೆಲಸಗಳನ್ನು ಮಾಡಿಕೊಳ್ಳುವ ಶಿಕ್ಷಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆದು ಸೂಚನೆ ನೀಡಿದ್ದಾರೆ. ■





Download From : www.kpscvaani.com



# ಕೃಷ್ಣನ ಆರಾಧಕ ಬಡಜನರ ಪರಿಪಾಲಕ

ಎಚ್.ಆರ್.ಶ್ರೀಶ

**ದೇ**ಶದ ಸ್ವಾತಂತ್ರ್ಯಪೂರ್ವದ ಕಾಲವನ್ನು ಸ್ವರ್ಣಯುಗವೆಂದೇ ಕರೆಯಬಹುದು. ಗಾಂಧೀಜಿ ಇಡೀ ದೇಶಕ್ಕೆ ಹೊಸ ಮಾರ್ಗವನ್ನು ತೋರಿಸಿಕೊಟ್ಟಿದ್ದರು. ಅದು ಯಾವ ಗ್ರಂಥದಲ್ಲೂ ಇರಲಿಲ್ಲ. ಯಾವ ದೇಶದಲ್ಲೂ ಅದನ್ನು ಪ್ರಯೋಗಿಸಿರಲಿಲ್ಲ. ಇಡೀ ಜಗತ್ತಿಗೆ ಸತ್ಯ ಅಹಿಂಸೆಯ ಮಾರ್ಗ ಹೊಸದಾಗಿತ್ತು. ರಾಷ್ಟ್ರಕವಿ ಕುವೆಂಪು ಹೇಳುವಂತೆ ರಾಮನ ಕಾಲದಲ್ಲಿ ಒಂದು ಸಣ್ಣ ಹುಲ್ಲು ಕೂಡ ದರ್ಭೆಯಾಗಿ ಶಕ್ತಿ ಪಡೆದಿತ್ತು. ಅದೇ ರೀತಿ ಗಾಂಧೀಜಿ ಕಾಲದಲ್ಲಿ ಸಾಧಾರಣ ವ್ಯಕ್ತಿಗಳೂ ಅಸಾಧಾರಣ ಶಕ್ತಿ ಪಡೆದರು. ರಾಮನ ಕಾಲದ ನಂತರ ದರ್ಭೆಗಳು ತಮ್ಮ ಶಕ್ತಿ ಕಳೆದುಕೊಂಡು ಸಾಮಾನ್ಯ ಹುಲ್ಲಾದಂತೆ ಜನ ತಮ್ಮ ಅಸಾಧಾರಣ ಶಕ್ತಿಗಳನ್ನು ಕಳೆದುಕೊಂಡರು.



ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಈ ದೃಷ್ಟಿಯಿಂದ ಆಗಿನ ಕಾಲಕ್ಕೆ ಜ್ಞಾನದ ಕೇಂದ್ರವಾಗಿ ಅಭಿವೃದ್ಧಿ ಪಡೆದಿತ್ತು. ಇಂಗ್ಲೀಷ್ ಸಂಪರ್ಕ ಹಾಗೂ ಮುಂಬೈ ನಾಗರೀಕತೆ ಅವರನ್ನು ಆಗಲೇ ಸೆಳೆದಿತ್ತು. ಅತ್ಯಾಧುನಿಕ ಜ್ಞಾನ ಸಂಪಾದಿಸುವುದು ಅಲ್ಲಿಯ ಜನರಿಗೆ ಕಷ್ಟವಾಗಲಿಲ್ಲ.  ಆ ರೀತಿಯ ವಾತಾವರಣದಲ್ಲಿ ಬೆಳೆದು ಜಗತ್ತಿಗೆ ಬೆಳಕಾದವರು ಶಿವರಾಮ ಕಾರಂತ, ಡಾ. ಯು. ಆರ್. ರಾವ್ ಮತ್ತು ಶ್ರೀವಿಶ್ವೇಶತೀರ್ಥ ಶ್ರೀಪಾದಂ. ಮೂವರು ಮೂರು ಕ್ಷೇತ್ರದಲ್ಲಿ ದಿಗ್ಗಜರಾದರು. ಇಂದಿಗೂ ಜನ ಇವರನ್ನು ಮರೆಯುವಂತಿಲ್ಲ. ಸಮಾಜ ನಿಷ್ಠೆ, ಜನಪರ ಕಾಳಜಿ, ಹಿಡಿದ ಗುರಿಯನ್ನು ಸಾಧಿಸುವುದು ಇವರ ಜೀವನವಾಗಿತ್ತು. ಜಗತ್ತು ಒಂದು ದಿಕ್ಕಿನಲ್ಲಿ ನಡೆದರೆ ಇವರೇ ತಮ್ಮ ತಮ್ಮ ದಿಕ್ಕನ್ನು ಕಂಡುಕೊಂಡು ಸಮಾಜ ಅವರ ದಿಕ್ಕಿನತ್ತ ಬರುವಂತೆ ಮಾಡಿದವರು. ಅದರಿಂದಲೇ ಜನರ ಮನದಲ್ಲಿ ಚಿರಸ್ಥಾಯಿ.

ಆಗಿನ ಕಾಲದಲ್ಲಿ ಲಕ್ಷಾಂತರ ಜನ ಗಾಂಧೀಜಿ ತೋರಿಸಿದ ಮಾರ್ಗದಲ್ಲಿ ನಡೆದರು. ಕೆಲವರಿಗೆ ಅವರ ಹಿಂದೆ ಹೋಗಲು ಆಗಲಿಲ್ಲ. ಆದರೂ ಗಾಂಧಿ ತತ್ವಗಳನ್ನು ಬಿಡಲಿಲ್ಲ. ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಡೆದರು. ಇದರಿಂದ ಸಮಾಜಕ್ಕೆ ವಿವಿಧ ರಂಗದಲ್ಲಿ ಗಾಂಧೀ ತತ್ವಗಳನ್ನು ಪ್ರಸಾರ ಮಾಡುವವರು ಸಿಕ್ಕಿದರು. 1931 ರಿಂದ 2019  ಪೇಜಾವರ ಶ್ರೀಗಳ ಜೀವಿತಾವಧಿ. ಈ ಸಮಯದಲ್ಲಿ ಇವರು ಕಾಲಹರಣ ಮಾಡಿದ್ದೇ ಇಲ್ಲ. ಎಲ್ಲಿ ಸಮಯ ಮುಗಿದುಹೋಗುತ್ತದೋ ಎಂದು ಪಾದರಸದಂತೆ ಓಡಾಡುತ್ತ ಸಮಾಜ ಸೇವೆ ಮಾಡಿದರು. ಉಡುಪಿಯ ಕೃಷ್ಣನ ಸೇವೆಯನ್ನು ಸಮಾಜದಲ್ಲಿ ತುಳಿತಕ್ಕೆ ಒಳಗಾದವರ ನೆರವಿಗೆ ಹೋಗುವ ಮೂಲಕ ಕೈಗೊಂಡರು. ಅವರಿಗೆ ಒಂದು ಕಡೆ ಸಮಾಜ ಸುಧಾರಣೆ ಮತ್ತೊಂದು ಕಡೆ ನಿಷ್ಠಾವಂತ ಸಂಪ್ರದಾಯ ಅನುಸರಣೆ. ಎರಡರಲ್ಲೂ ತಮ್ಮ ಜೀವನದ ಗುರಿಯನ್ನು ಕಂಡುಕೊಂಡವರು. ಶ್ರೀಕೃಷ್ಣನ ಪೂಜೆಯನ್ನು ಕೈಬಿಡಲಿಲ್ಲ. ಅದೇ ವೇಳೆ ಬರಿ ಪೂಜೆಯಲ್ಲಿ ಕಾಲ ಕಳೆಯಲಿಲ್ಲ. ಎಲ್ಲರೂ ದೇವರ ಮಕ್ಕಳು ಎಂದು ದಲಿತರ ಮೇಲಿದ್ದ ಅಸ್ಪೃಶ್ಯತೆ ಕಳಂಕ ನಿವಾರಣೆ ಮತ್ತು ಹಿಂದು–ಮುಸ್ಲಿಂ ಮೈತ್ರಿ ಎರಡಕ್ಕೂ ಶ್ರಮಿಸಿದರು. ಇದರಿಂದ ಅವರು ಹಲವು ರೀತಿಯಲ್ಲಿ ವಿವಾದಕ್ಕೆ ಒಳಗಾದರು. ಆದರೆ ಯಾವುದಕ್ಕೂ ಅಂಜದೆ ತಮ್ಮ ಗುರಿಯನ್ನು ಸಾಧಿಸಿದರು.

ಚಿಕ್ಕ ವಯಸ್ಸಿನಲ್ಲೇ ಅವರು ಗ್ರಾಮದ ಕೆರೆಯಲ್ಲಿ ಬಿದ್ದಾಗ ಅವರ ಸಂಗಡ ಇದ್ದ ದಲಿತರ ಬಾಲಕರು ಬದುಕಿಸಲು ಹಿಂಜರಿದರು. ಅವರ ತಂದೆ ಹೇಳಿದ್ದರಿಂದ ಬಾಲಕರು ಪೇಜಾವರ ಶ್ರೀಗಳನ್ನು ಬದುಕಿಸಿದರು. ಅಂದೇ ಅವರಿಗೆ ಅಸ್ಪೃಶ್ಯತೆಯ ಪಿಡುಗು ಎಷ್ಟು ಗಾಢವಾಗಿದೆ ಎಂಬುದು ತಿಳಿಯಿತು. ನಂತರ ಚಿಕ್ಕವಯಸ್ಸಿನಲ್ಲೇ ಸನ್ಯಾಸ ಸ್ವೀಕರಿಸಿ ಮಠ ಸೇರಿದ ಮೇಲೆ ಅಲ್ಲಿಯ ಕೆಳಜಾತಿಯವರು ಬಾರದೇ ಇರುವುದು, ಅವರು ಬಂದರೆ ಮೇಲ್ವರ್ಗದವರೇ ಹೊರಗೆ ಕಳುಹಿಸುತ್ತಿದ್ದರು. ಇದನ್ನು ಕಂಡ ಸ್ವಾಮೀಜಿ ನಯವಾಗಿಯೇ ಈ ಪದ್ಧತಿಗೆ ಕೊನೆ ಹಾಡಿದರು. ಎಲ್ಲರೂ ದೇವರ ಮಕ್ಕಳೇ ಎಂದು ಹೇಳಿ ಜಾತಿ–ಮತ, ಅಸ್ಪೃಶ್ಯತೆ ಇಲ್ಲದಂತೆ ಮಾಡಲು ಶ್ರಮಿಸಿದರು. ಆದರೂ ಹೊರಗಡೆ ಪದ್ಧತಿ ಕದ್ದುಮುಚ್ಚಿ ನಡೆಯುತಿತ್ತು. ಆದರೆ ಅವಕಾಶ ಸಿಕ್ಕಾಗಲೆಲ್ಲ ಇದರ ವಿರುದ್ಧ ತಮ್ಮ ಟೀಕಾಪ್ರಹಾರ ಮುಂದುವರಿಸಿದರು. ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಹರಿಜನ ಕಾಲೋನಿಗೆ ಭೇಟಿ ನೀಡಿ



ಅವರೊಂದಿಗೆ ಮಾತುಕತೆ ನಡೆಸಿದರು. ಇದನ್ನು ಸಂಪ್ರದಾಯವಾದಿ ಸಂಸ್ಥೆಗಳು ಹಾಗೂ ದಲಿತ ಸಂಘಟನೆಗಳು ಟೀಕಿಸಿದವು. ಎಲ್ಲದಕ್ಕೂ ಸ್ವಾಮೀಜಿ ನಗುನಗುತ್ತಲೇ ಉತ್ತರ ನೀಡಿದರೇ ಹೊರತು ತಮ್ಮ ಜೀವನದ ಗುರಿಯನ್ನು ಕೈಬಿಡಲಿಲ್ಲ. ಇವರ ಹಟವನ್ನು ನೋಡಿ ಟೀಕಿಸುವವರೇ ಸುಮ್ಮನಾದರು.

ಸ್ವಾಮೀಜಿ 5 ಬಾರಿ ಪರ್ಯಾಯ ಕಂಡವರು. ಒಮ್ಮೆ ರೈತನೊಬ್ಬ ಮಠಕ್ಕೆ ಬಂದು ಕಣ್ಣೀರು ಹಾಕಿದ. ನಾನು ಮಠಕ್ಕೆ ಸೇರಿದ ಭೂಮಿಯನ್ನು ಉಳುಮೆ ಮಾಡುತ್ತಿದ್ದೇನೆ, ಈಗ ಭೂಮಿ ಬಿಡಲು ಹೇಳುತ್ತಿದ್ದಾರೆ. ನಾನು ಹೇಗೆ ಜೀವನ ಮಾಡಲಿ ಎಂದು ನೋವನ್ನು ತೋಡಿಕೊಂಡ. ಆಗ ಅವರಿಗೆ ಕಂಡಿದ್ದು ಭೂ ಸುಧಾರಣೆ. ಅದಕ್ಕಾಗಿ ಅವರು ರಾಜಕಾರಣಿಗಳನ್ನು ಕರೆದು ಭೂಸುಧಾರಣೆ ಕಾಯ್ದೆ ಜಾರಿಗೆ ತರಲು ಸೂಚಿಸಿದರು. ಮಠದ ಆಸ್ತಿ ಹೋಗಿ ಬಿಡುತ್ತದೆ ಎಂಬ ಚಿಂತೆ ಅವರಿಗೆ ಇರಲಿಲ್ಲ. ರೈತನ ಕಷ್ಟಕ್ಕೆ ಪರಿಹಾರ ಕಂಡು ಹಿಡಿಯುವುದು ದೇವರ ಪೂಜೆಗಿಂತ ದೊಡ್ಡದಾಗಿ ಕಂಡಿತ್ತು. ಹಾಗೆಂದು ಪೂಜೆಯನ್ನು ಬಿಟ್ಟವರಲ್ಲ. ಕೃಷ್ಣನ ಮೂಲಕ ಸಮಾಜವನ್ನು ಒಂದುಗೂಡಿಸುವ ಕೆಲಸ ಕೈಗೊಂಡರು.


### ನಕ್ಸಲ್ ಹಾವಳಿ

ಸ್ವಾತಂತ್ರ್ಯ ಬಂದ ಮೇಲೆ ಹಲವು ಕೊರತೆಗಳು ಕಂಡು ಬಂದಿದ್ದು ಸಹಜ. ಸರ್ಕಾರ ಎಲ್ಲವನ್ನೂ ಮಾಡಬೇಕೆಂದು ಜನ ಬಯಸುತ್ತಿದ್ದರು. ಎಲ್ಲವೂ ಸಿಗದೇ ಇದ್ದಾಗ ಹೊಸ ಮಾರ್ಗಗಳನ್ನು ಹುಡುಕುವುದು ಸಹಜ. ಆ ರೀತಿ ಮೂಡಿಬಂದಿದ್ದೇ ನಕ್ಸಲ್ ಚಳವಳಿ. ಮಲೆನಾಡು ಮತ್ತು ಕರಾವಳಿಯಲ್ಲಿ ನಕ್ಸಲರು ಕಾಣಿಸಿಕೊಂಡು ಶಿವಮೊಗ್ಗ, ಉಡುಪಿ, ಮಂಗಳೂರು ಜಿಲ್ಲೆಗಳಿಗೆ ಸೇರಿದ ಕಾಡಿನ ನಡುವೆ ಇದ್ದ ಗ್ರಾಮಗಳ ಯುವಕರನ್ನು ನಕ್ಸಲ್ ಚಳವಳಿಗೆ ಸೇರುವಂತೆ ಮಾಡಿದರು. ಅವರ ಕೈಗೆ ಬಂದೂಕು ಕೊಟ್ಟು ಇದರ ಮೂಲಕ ಸಮಾಜ ಸುಧಾರಣೆ ಮಾಡಬಹುದು ಎಂಬ ಭ್ರಮೆ ಹುಟ್ಟಿಸಿದರು. ಇದನ್ನು ಕಂಡ ಸ್ವಾಮೀಜಿ ರಸ್ತೆಯೇ ಇಲ್ಲದ ಗ್ರಾಮಗಳಿಗೆ ನಡೆದುಕೊಂಡು ಹೋಗಿ ಅಲ್ಲಿಯ ಜನರಿಗೆ ತಿಳವಳಿಕೆ ನೀಡಿ ಅಗತ್ಯ ಸವಲತ್ತುಗಳು ಪ್ರಜಾಪ್ರಭುತ್ವದ ಮೂಲಕ ಪಡೆದುಕೊಳ್ಳಬೇಕೆಂದು ತಿಳಿಸಿ ಕೆಲವು ಸವಲತ್ತು ಸಿಗುವಂತೆ



Download From : www.kpscvaani.com





## ಸರ್ವಸಂಗ ಪರಿತ್ಯಾಗಿಗೆ ಸರ್ಕಾರಿ ಗೌರವದೊಂದಿಗೆ ಅಂತಿಮ ನಮನ:

ಪೇಜಾವರ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂ ಅವರು ಎಲ್ಲವನ್ನೂ ತ್ಯಾಗ ಮಾಡಿದವರು. 8 ನೇ ವಯಸ್ಸಿನಿಂದ 89 ವಯಸ್ಸಿನವರೆಗೆ ಅವಿರತವಾಗಿ ಸಮಾಜವೇವೆ ಕೈಗೊಂಡವರು. ಅವರು ಅನಾರೋಗ್ಯದಿಂದ ಉಡುಪಿಯ ಮಣಿಪಾಲ್‌ನ ಕೆ.ಎಂ.ಸಿ ಆಸ್ಪತ್ರೆಯಲ್ಲಿ ದಾಖಲಾದ ಕೂಡಲೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅಲ್ಲಿಗೇ ಧಾವಿಸಿದರು. ವೈದ್ಯರೊಂದಿಗೆ ಚರ್ಚೆ ನಡೆಸಿದರು. ಮುಖ್ಯಮಂತ್ರಿಗಳು ಅಲ್ಲೇ ವಾಸ್ತವ್ಯ ಮಾಡಿದರು. ಶ್ರೀಗಳ ಆರೋಗ್ಯ ಸ್ಥಿತಿ ವಿಷಮಗೊಳ್ಳುತ್ತಿದ್ದಂತೆ ಅವರ ಕೊನೆಯ ಆಸೆಗೆ ಅನುಗುಣವಾಗಿ ಮಠಕ್ಕೆ ಕರೆದು ತರಲು ವ್ಯವಸ್ಥೆ ಮಾಡಿದರು. ಮಠದಲ್ಲೇ ತಜ್ಞ ವೈದ್ಯರ ಸಲಹೆಯಂತೆ ಚಿಕಿತ್ಸೆ ಮುಂದುವರೆಯುವಂತೆ ನೋಡಿಕೊಂಡರು.





ಶ್ರೀಗಳ ಅಂತಿಮ ದರ್ಶನಕ್ಕೆ ಅಜ್ಜರಕಾಡಿನಲ್ಲಿ ಎಲ್ಲಾ ವ್ಯವಸ್ಥೆಯನ್ನು ತಾವೇ ನಿಂತು ಮಾಡಿಸಿದರು. ಲಕ್ಷಾಂತರ ಜನ ಶ್ರೀಗಳ ಅಂತಿಮ ದರ್ಶನ ಪಡೆದರು. ಅಲ್ಲಿಂದ ಸರ್ಕಾರಿ ವೆಚ್ಚದಲ್ಲೇ ಹೆಲಿಕಾಪ್ಟರ್ ಸೇವೆ ಒದಗಿಸಿ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸಾರ್ವಜನಿಕರು ದರ್ಶನ ಪಡೆದ ಮೇಲೆ ವಿದ್ಯಾಪೀಠದಲ್ಲಿ ಶ್ರೀಗಳ ಇಚ್ಛೆಯಂತೆ ಅಂತಿಮ ವಿಧಿವಿಧಾನಗಳು ನಡೆದವು. ತ್ರಿವರ್ಣ ಧ್ವಜವನ್ನು ಹೊದಿಸಿ ಸರ್ಕಾರಿ ಗೌರವ ದೊಂದಿಗೆ ಶ್ರೀಗಳಿಗೆ ಅಂತಿಮ ನಮನ ಸಲ್ಲಿಸಲಾಯಿತು. ಮೊದಲಿನಿಂದ ಕೊನೆಯವರೆಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಎಲ್ಲವೂ ಸುಸೂತ್ರವಾಗಿ ನಡೆಯುವಂತೆ ನೋಡಿಕೊಂಡರು.



ಮಾಡಿದರು. ಶೃಂಗೇರಿ ತಾಲೂಕು ಮುಂಡಗೇರಿ ಗ್ರಾಮಕ್ಕೆ ರಸ್ತೆಯೇ ಇಲ್ಲದಿದ್ದರಿಂದ ಅವರು ನಡೆದು ಹೋದರು. 2015 ರಲ್ಲಿ ಆ ಗ್ರಾಮಕ್ಕೆ 180 ಬೀದಿದೀಪಗಳನ್ನು ಹಾಕಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಟ್ಟರು. ಮನೆಗಳನ್ನು ಕಟ್ಟಿಸಿಕೊಟ್ಟರು. ಇದರಿಂದ ನಕ್ಸಲ್ ಪ್ರಭಾವ ಕಡಿಮೆಯಾಯಿತು.

### ಹಿಂದು–ಮುಸ್ಲಿಂ ಮೈತ್ರಿ

ಅವರು ಗಾಂಧಿಯ ತತ್ವದಂತೆ ಹಿಂದು–ಮುಸ್ಲಿಂ ಮೈತ್ರಿ ಬಯಸಿದ್ದರು. ತಮ್ಮ ಕಾರಿನ ಚಾಲಕ ಮುಸ್ಲಿಂ ಆಗಿದ್ದರೂ ಎಂದೂ ತಾರತಮ್ಯ ಮಾಡಿರಲಿಲ್ಲ. ಕಾರಿನ ಚಾಲಕನೇ ಹೇಳುವಂತೆ ಮಠದಲ್ಲಿ ಅವರಿಗೆ ಎಲ್ಲ ಕಡೆ ಪ್ರವೇಶವಿತ್ತು. ಅವರ ಮೂಲಕವೇ ಮಠದಲ್ಲಿ ಇಫ್ತಿಹಾರ್ ಕೂಟವನ್ನು ಏರ್ಪಡಿಸಿ ವಿವಾದವನ್ನೇ ಎದುರಿಸಿದ್ದರು. ವಿವಾದ ನಾವು ಸೃಷ್ಟಿಸುವುದಲ್ಲ. ಅದು ಬಂದಾಗ ಧೈರ್ಯವಾಗಿ ಎದುರಿಸಬೇಕೆಂದು ಹೇಳುತ್ತಿದ್ದರು. ಇದರ ಮೂಲಕ ಮುಸ್ಲಿಮರ ಮನವೊಲಿಸಿ ಗೋ ಸಂರಕ್ಷಣೆ ಅವರ ಗುರಿಯಾಗಿತ್ತು. ಅಲ್ಲದೆ ಎಲ್ಲ ಕೋಮುಗಳ ನಡುವೆ ಸಾಮರಸ್ಯ ಮೂಡಲು ಕಾರಣವಾಗಿದ್ದರು. ಅವರ ಉದಾತ್ತ ಧ್ಯೇಯ ಬಹಳ ಜನರಿಗೆ ಅರ್ಥವಾಗಿರಲಿಲ್ಲ.

### ಮಲ ಹೊರುವ ಪದ್ಧತಿಗೆ ವಿದಾಯ

ಗಾಂಧೀಜಿ ಮಲ ಹೊರುವ ಪದ್ಧತಿ ಹೋಗಬೇಕೆಂದು ಹೇಳಿದ್ದರು. ಅದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದ ಸ್ವಾಮೀಜಿ 1969 ರಲ್ಲಿ ಉಡುಪಿಯ ಪುರಸಭೆಗೆ ಡಾ.ವಿ.ಎಸ್. ಆಚಾರ್ಯ ಅಧ್ಯಕ್ಷರಾಗಿದ್ದಾಗ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿ ಒಳಚರಂಡಿ ವ್ಯವಸ್ಥೆ ಬರುವಂತೆ ಮಾಡಿದರು. ಉಡುಪಿ ಪುರಸಭೆ ಈ ರೀತಿ ಮೊದಲ ದಾಖಲೆಯನ್ನು ಮಾಡಿತು. ಆಗಿನ ಕಾಲದಲ್ಲಿ ಪುರಸಭೆ ಮಾದರಿಯಾಗಿತ್ತು.

ದೇಶದ ಮೊದಲ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರಿಂದ ಹಿಡಿದು ಈಗಿನ ರಾಷ್ಟ್ರಪತಿ ರಾಮನಾಥ್ ಕೋವಿಂದ್‌ವರೆಗೆ ಅದೇ ರೀತಿ ಇಂದಿರಾ ಅವರಿಂದ ಹಿಡಿದು ಮೋದಿಯವರೆಗೆ ಎಲ್ಲರನ್ನೂ ಕಂಡವರು. ಎಲ್ಲ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರನ್ನು ಆತ್ಮೀಯತೆಯಿಂದ ಕಾಣುತ್ತಿದ್ದರು. ತಮ್ಮ ನಿಲುವನ್ನು ಒಪ್ಪದೆ ಇದ್ದವರನ್ನೂ ಅವರು ದ್ವೇಷಿಸುತ್ತಿರಲಿಲ್ಲ. ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದಾಗ ಅದನ್ನು ವಿರೋಧಿಸಿದರು. ಆದರೆ ನಂತರದ ದಿನಗಳಲ್ಲಿ ಇಂದಿರಾ ಕೈಗೊಂಡ ಹಲವು ಕ್ರಮಗಳನ್ನು ಸ್ವಾಗತಿಸಿದ್ದರು.

### ಕ್ಷಮಾಗುಣ

ಮಠದ ವಿದ್ಯಾರ್ಥಿನಿಲಯದಲ್ಲಿ ಒಬ್ಬ ವಿದ್ಯಾರ್ಥಿ ಚಿನ್ನದ ಸರ ಕದ್ದ ವಿಷಯ ಸ್ವಾಮೀಜಿಯವರಿಗೆ ತಿಳಿಯಿತು. ಯಾರು ಕದ್ದಿದ್ದೀರಿ ಅದನ್ನು ದೇವರ ಮುಂದೆ ಇಟ್ಟು ಬಿಡಿ ಅಂದರು. ಯಾರೂ ಇಡಲಿಲ್ಲ. ಕೊನೆಗೆ ಉಪವಾಸ ಕುಳಿತರು. ಮೊದಲ ದಿನ ಯಾರೂ ಬರಲಿಲ್ಲ. ಎರಡನೇ ದಿನ ಕದ್ದ ಬಾಲಕ ಸರವನ್ನು ಸ್ವಾಮೀಜಿಗೆ ಒಪ್ಪಿಸಿ ಕ್ಷಮೆ ಕೇಳಿದ. ಸ್ವಾಮೀಜಿ ಕ್ಷಮಿಸಿದರು.

ಮಠದಲ್ಲಿ ಸ್ವಾಮೀಜಿಗೆ ಪ್ರತ್ಯೇಕ ಅಡುಗೆ ಮಾಡುವ ಪದ್ಧತಿ ಇತ್ತು. ಅದನ್ನು ಇವರು ಬಂದ ಮೇಲೆ ನಿಲ್ಲಿಸಿದರು. ಎಲ್ಲರಿಗೂ ಮಾಡುವ ಅಡುಗೆಯೇ ಸಾಕು ಎಂದರು. ವಾದಿರಾಜರಿಗೂ



## 5 ಬಾರಿ ಪರ್ಯಾಯ

ಪ್ರತಿ 2 ವರ್ಷಕೊಮ್ಮೆ ಉಡುಪಿಯ ಶ್ರೀಕೃಷ್ಣ ಪೂಜೆ 8 ಮಠಗಳಲ್ಲಿ ಒಬ್ಬ ಯತಿಗಳಿಗೆ ಪಾಳಿಯ ಮೇಲೆ ಬರುತ್ತದೆ. ಇದನ್ನು ಪರ್ಯಾಯ ಎಂದು ಕರೆಯುತ್ತಾರೆ. ಶ್ರೀವಿಶ್ವೇಶತೀರ್ಥ ಶ್ರೀಪಾದಂ ಅವರು 8 ನೇ ವರ್ಷಕ್ಕೆ ಪಟ್ಟಕ್ಕೆ ಬಂದಿದ್ದರಿಂದ ಅವರಿಗೆ ಹೆಚ್ಚು ಬಾರಿ ಪರ್ಯಾಯ ಎಂದರೆ ಉಡುಪಿಯ ಶ್ರೀಕೃಷ್ಣನ ಪೂಜೆ ಮಾಡುವ ಅವಕಾಶ ಲಭಿಸಿತ್ತು. ಅದರಲ್ಲೂ 5 ಬಾರಿ ಪರ್ಯಾಯ ನಡೆಸಿದವರು ವಾದಿರಾಜರು ಮತ್ತು ವಿಶ್ವೇಶತೀರ್ಥರು. ಕೊನೆಯ ಪರ್ಯಾಯದಲ್ಲಿ ವಾದಿರಾಜರು ತಮ್ಮ ಶಿಷ್ಯನಿಗೆ ಪೂಜೆಯನ್ನು ಬಿಟ್ಟುಕೊಟ್ಟಿದ್ದರು.


ಶ್ರೀವಿಶ್ವೇಶತೀರ್ಥರು ತಮ್ಮ ಪಾಳಿಯ ಪರ್ಯಾಯ ಬಂದಾಗಲೂ ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದರು. ಅದರಿಂದ ಭಕ್ತರಿಗೆ ಅನುಕೂಲವಾಗುತ್ತಿತ್ತು. ಮೊದಲ ಪರ್ಯಾಯ 1952 ರಿಂದ 54. ಆಗ ಶ್ರೀಗಳಿಗೆ ಚಿಕ್ಕವಯಸ್ಸು. ಆ ವಯಸ್ಸಿನಲ್ಲೇ ಆಗಮ ಶಾಸ್ತ್ರಗಳನ್ನು ಅಧ್ಯಯನ ಮಾಡಿ ನಂಜನಗೂಡಿನಲ್ಲಿ ಸಮ್ಮೇಳನ ಅಧ್ಯಕ್ಷತೆವಹಿಸಿದ್ದರು. ಮೈಸೂರಿನ ಮಹಾರಾಜರು ಅವರ ಪಾಂಡಿತ್ಯವನ್ನು ಕಂಡು ಅರಮನೆಗೆ ಕರೆಸಿಕೊಂಡು ಸನ್ಮಾನಿಸಿದ್ದರು. ಆಗಲೇ ಧರ್ಮ ಸಂಸದ್ ನಡೆಸಿ ಅಖಿಲ ಭಾರತ ಮಾಧ್ವ ಮಂಡಳ ಸ್ಥಾಪನೆಗೆ ಕಾರಣರಾದರು. ಎರಡನೇ ಪರ್ಯಾಯ 1968–70. ಈ ಸಮಯದಲ್ಲಿ ಎಲ್ಲ ಹಿಂದೂ ಮಠಾಧೀಶರ ಸಮ್ಮೇಳನ ನಡೆಯಿತು. ಅದರ ಫಲ ವಿಶ್ವ ಹಿಂದು ಪರಿಷತ್ ಸಬಲಗೊಂಡಿತು. ಅಲ್ಲದೆ ಹಿಂದು ಧರ್ಮ ತ್ಯಜಿಸಿದವರು ಮತ್ತೆ ಹಿಂದಕ್ಕೆ ಬರಲು ಅವಕಾಶ ನೀಡಲಾಯಿತು.

ಮೂರನೇ ಪರ್ಯಾಯ 1984–1986 ರಲ್ಲಿ ನಡೆಯಿತು. ಆಗ ಎಲ್ಲ ಕಡೆ ಮಧ್ವಾಚಾರ್ಯರ ಪ್ರತಿಮೆ ಪ್ರತಿಷ್ಠಾಪನೆ ನಡೆಯಿತು. ಬದರಿನಾಥದಲ್ಲಿ ಯಾತ್ರಾರ್ಥಿಗಳಿಗೆ ಅನಂತ ಮಠ ಸ್ಥಾಪಿಸಿದರು. 2000–2002 ರಲ್ಲಿ ಜರುಗಿದ ನಾಲ್ಕನೆ ಪರ್ಯಾಯದಲ್ಲಿ ರಾಜಾಂಗಣವನ್ನು ಸುಸಜ್ಜಿತಗೊಳಿಸಿ ವರ್ಷವಿಡೀ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವಂತೆ ವ್ಯವಸ್ಥೆ ಮಾಡಿದರು. 2016–2018 ರಲ್ಲಿ ಜರುಗಿದ 5 ನೇ ಪರ್ಯಾಯದಲ್ಲಿ ಧರ್ಮ ಸಂಸದ್ ಅಧಿವೇಶನದಲ್ಲಿ ಬೌದ್ಧ ಭಿಕ್ಷುಗಳೂ ಪಾಲ್ಗೊಂಡಿದ್ದರು. ಭಕ್ತರಿಗಾಗಿ ಅತಿಥಿ ಗೃಹವನ್ನು ಉಡುಪಿಯಲ್ಲಿ ನಿರ್ಮಿಸಿದರು. ವಾದಿರಾಜರು 5ನೇ ಪರ್ಯಾಯದಲ್ಲಿ ತಮ್ಮ ಶಿಷ್ಯನಿಗೆ ಬಿಟ್ಟುಕೊಟ್ಟಿದ್ದರು. ಆದರೆ ಪೇಜಾವರರು ಇಳಿವಯಸ್ಸಿನಲ್ಲೂ ಕೃಷ್ಣನ ಪೂಜೆಯನ್ನು ನಿಲ್ಲಿಸಲಿಲ್ಲ. 5 ಪರ್ಯಾಯಗಳನ್ನು ಪೂರ್ಣಗೊಳಿಸಿ ದಾಖಲೆ ಸ್ಥಾಪಿಸಿದರು.






Download From : www.kpscvaani.com




ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಮಠಕ್ಕೆ ಭೇಟಿ ನೀಡಿದ ಬಿ.ಎಸ್.ಯಡಿಯೂರಪ್ಪ ಅವರನ್ನು ಶ್ರೀಗಳು ಹರಸುತ್ತಿರುವುದು.




ಜನರಲ್ ಕಾರಿಯಪ್ಪ, ಆಗಿನ ರಾಜ್ಯಪಾಲರಾದ ಧರ್ಮವೀರ್ ಅವರು ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಹಿರಿಯ ಸ್ವಾಮೀಜಿಯವರೊಂದಿಗೆ ಶ್ರೀಗಳು.



ಕಾರ್ಯಕ್ರಮವೊಂದರಲ್ಲಿ ಶ್ರೀಗಳೊಂದಿಗೆ ವಿರೇಂದ್ರ ಹೆಗ್ಗಡೆ, ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಮತ್ತು ವೀರಪ್ಪ ಮೊಯಿಲಿ.




ಇಂದಿರಾಗಾಂಧಿಯವರು ಉಡುಪಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಹಿರಿಯ ಸ್ವಾಮೀಜಿ ಅವರೊಂದಿಗೆ ಶ್ರೀಗಳು.



ಕಾರ್ಯಕ್ರಮವೊಂದರಲ್ಲಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರೊಂದಿಗೆ ಶ್ರೀಗಳು ಮಾತುಕತೆಯಲ್ಲಿ.



ಕಾರ್ಯಕ್ರಮವೊಂದರಲ್ಲಿ ಕೆಂಗಲ್ ಹನುಮಂತಯ್ಯ, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಮತ್ತು ಶ್ರೀ ಶಿವಕುಮಾರ ಸ್ವಾಮೀಜಿ ಅವರೊಂದಿಗೆ ಶ್ರೀಗಳು ವೇದಿಕೆಯಲ್ಲಿ



ಕಾರ್ಯಕ್ರಮವೊಂದರಲ್ಲಿ ಶ್ರೀಗಳು ಕೇಂದ್ರ ಸಚಿವರಾದ ವಿ.ಧನಂಜಯ ಕುಮಾರ್, ಜಾರ್ಜ್ ಫರ್ನಾಂಡಿಸ್, ಅಂದಿನ ಮುಖ್ಯಮಂತ್ರಿ ಜೆ.ಹೆಚ್ ಪಟೇಲ್, ಮತ್ತು ವಿರೇಂದ್ರ ಹೆಗ್ಗಡೆ ಅವರೊಂದಿಗೆ ಪಾಲ್ಗೊಂಡಿರುವುದು.

ವಿಶ್ವೇಶತೀರ್ಥರಿಗೂ ಬಹಳ ಸಮಾನ ಸಂದರ್ಭಗಳು ಒದಗಿ ಬಂದಿದ್ದವು. ವಾದಿರಾಜರು 5 ಬಾರಿ ಪರ್ಯಾಯ ಮಾಡಿದ್ದರು. ವಿಶ್ವೇಶತೀರ್ಥರೂ 5 ಬಾರಿ ಪಯಾರ್ಯ ನಡೆಸಿಕೊಟ್ಟಿದ್ದರು. ವಾದಿರಾಜರು 116 ವರ್ಷ ಬದುಕಿದ್ದರು. ಸ್ವಾಮೀಜಿಯವರಿಗೆ ದೇಶ, ರಾಷ್ಟ್ರಧ್ವಜದ ಮೇಲೆ ಅಪಾರ ಭಕ್ತಿ. ರಾಷ್ಟ್ರಧ್ವಜ ತುಂಡಾದರೂ ಅದು ಧ್ವಜವೇ. ಅದೇ ರೀತಿ ನಮ್ಮ ಸಂಸ್ಕೃತಿ. ಅದಕ್ಕೆ ಧಕ್ಕೆ ಒದಗಬಾರದು ಎನ್ನುತ್ತಿದ್ದರು. ವಿವಿಧ ಧರ್ಮಗಳಲ್ಲಿ ಕೆಲವು ಸಮಾನ ಅಂಶಗಳಿರುತ್ತವೆ ಮತ್ತು ಕೆಲವು ಭಿನ್ನವಾಗಿರುತ್ತವೆ. ಅದನ್ನು ತಾಳ್ಮೆಯಿಂದ ಸಹಿಸಿಕೊಂಡಲ್ಲಿ ಅಭಿವೃದ್ಧಿ ಸಾಧ್ಯ ಎನ್ನುವುದು ಅವರ ನಿಲುವು.

**ಆಗಮತ್ರಯ ಸಮ್ಮೇಳನ**

ನಂಜನಗೂಡಿನಲ್ಲಿ 1951 ರಲ್ಲಿ ಆಗಮತ್ರಯ ಸಮ್ಮೇಳನ ನಡೆಯಿತು. ಆಗ ಶ್ರೀಗಳಿಗೆ 21 ವರ್ಷ ವಯಸ್ಸು. ಆಗಲೇ ಸಮ್ಮೇಳನ ಅಧ್ಯಕ್ಷತೆವಹಿಸಿ ಉತ್ತಮ ಭಾಷಣ ಮಾಡಿದರು. ಅದನ್ನು ಕೇಳಿ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅರಮನೆಗೆ ಕರೆಸಿಕೊಂಡು ಸನ್ಮಾನಿಸಿದರು. ನಂತರ ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಮಾಧ್ವ ತತ್ವ ಸಮ್ಮೇಳನ ನಡೆಯಿತು. ನಂತರ ಅದು ಅಖಿಲ ಭಾರತ ಮಾಧ್ವ ಮಹಾಮಂಡಲ ಸ್ಥಾಪನೆಗೆ ಕಾರಣವಾಯಿತು. 1968 ರಲ್ಲಿ ಉಡುಪಿಯಲ್ಲಿ ರಾಜ್ಯ ಮಟ್ಟದ ವಿಶ್ವ ಹಿಂದು ಪರಿಷತ್ ಸಮ್ಮೇಳನ ನಡೆಯಿತು. 60 ವಿವಿಧ ಧರ್ಮಗಳ ಗುರುಗಳು ಆಗಮಿಸಿದ್ದರು. ಅದರ ಅಧ್ಯಕ್ಷತೆಯನ್ನು ದಲಿತ ಅಧಿಕಾರಿ ಭರಣಯ್ಯ ವಹಿಸಿದ್ದರು. ಬೇರೆ ಧರ್ಮಕ್ಕೆ ಹೋದವರು ಮರಳಿ ಹಿಂದು ಧರ್ಮಕ್ಕೆ ಬರಲು ಅವಕಾಶ ಮಾಡಿಕೊಡುವ ನಿರ್ಣಯ ಕೈಗೊಳ್ಳಲಾಯಿತು.

ಒಮ್ಮೆ ಭಕ್ತರು ವೇದಾಂತಗಳಿಗೆ ಸಂಸ್ಕೃತದಲ್ಲಿ ಟೀಕೆ ಬರೆಯಲು ಒತ್ತಾಯಿಸಿದರು. ಇದಕ್ಕೆ ಶ್ರೀಗಳು ಒಪ್ಪಲಿಲ್ಲ. ನನ್ನ ದಾರಿ ಏನು ಎಂಬುದು ನನಗೆ ಗೊತ್ತಿದೆ. ನೊಂದವರ ನೆರವಿಗೆ ಹೋಗುವುದು ನನ್ನ ಕರ್ತವ್ಯ. ಗ್ರಂಥ ಬರೆಯುವುದಲ್ಲ ಎಂದು ಖಡಾಖಂಡಿತವಾಗಿ ಹೇಳಿದರು.

**ಚಂಡಮಾರುತ**

1978 ರಲ್ಲಿ ಚಂಡಮಾರುತದಿಂದ ಆಂಧ್ರದಲ್ಲಿ ಅಪಾರ ಹಾನಿಯಾಯಿತು. ಹಂಸಲದೀವಿ ಎಂಬ ಗ್ರಾಮಕ್ಕೆ ಹೋಗಿ 150 ಮನೆಗಳನ್ನು ಕಟ್ಟಿಸಿಕೊಟ್ಟರು. ಕೃಷ್ಣನ ಪೂಜೆಯೊಂದಿಗೆ ಸಾಮಾಜಿಕ ಸೇವೆಯನ್ನೂ ಕೈಗೊಂಡರು. ವೇದಗಳ ಅಧ್ಯಯನಕ್ಕೆ



ಕಾರ್ಯಕ್ರಮವೊಂದರಲ್ಲಿ ಶ್ರೀಗಳೊಂದಿಗೆ ವಿರೇಂದ್ರ ಹೆಗ್ಗಡೆ, ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್.




ಅಂದಿನ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಶ್ರೀಗಳು ಕಾರ್ಯಕ್ರಮವೊಂದರಲ್ಲಿ ಸನ್ಮಾನಿಸುತ್ತಿರುವುದು.





Download From : www.kpscvaani.com

ಪೂರ್ಣಪ್ರಜ್ಞ ವಿದ್ಯಾಪೀಠವನ್ನು ಆರಂಭಿಸಿದರು. ಅದರ ರಜತಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಿದರು. 1968ರಲ್ಲಿ ಉಡುಪಿಯಲ್ಲಿ ಉಚಿತ ಚಿಕಿತ್ಸಾಲಯವನ್ನು ಆರಂಭಿಸಿದರು. 1990ರಲ್ಲಿ ರಾಮಜನ್ಮಭೂಮಿ ಹೋರಾಟದಲ್ಲಿ ಪಾಲ್ಗೊಂಡು ಜೈಲುವಾಸ ಕಂಡವರು. ಅವರ ಗುರುಗಳು ಗಾಂಧೀಜಿಯ ಕಟ್ಟಾ ಅನುಯಾಯಿಗಳು. ಅವರು ಮಠದ ಪೀಠವನ್ನು ತ್ಯಾಗ ಮಾಡಿ ಸಬರಮತಿ ಆಶ್ರಮಕ್ಕೆ ತೆರಳಿದರು. ಆಗ ಯುವ ವಯಸ್ಸಿನ ಶ್ರೀಗಳಿಗೆ ತಮ್ಮ ಗುರುಗಳ ಆದರ್ಶ ಜೀವನ ತಿಳಿದಿರಲಿಲ್ಲ. ನಂತರ ಅವುಗಳು ಅರ್ಥವಾದವು. ತಮ್ಮ ಜೀವನದಲ್ಲೂ ಆ ಆದರ್ಶವನ್ನು ಪಾಲಿಸುತ್ತ ಬಂದರು.

### ಎಡಪಂಥೀಯ

ಸ್ವಾಮೀಜಿ ಬಲಪಂಥೀಯರೇ ಅಥವಾ ಎಡಪಂಥೀಯರೇ ಎಂಬ ಜಿಜ್ಞಾಸೆ ಬಹಳ ಬಾರಿ ನಡೆದಿತ್ತು. ಒಮ್ಮೆ ಪತ್ರಕರ್ತರು ಸ್ವಾಮೀಜಿಯವರನ್ನೇ ಕೇಳಿದರು. ನೀವೇ ಹೇಳಿ ಎಂದರು ಸ್ವಾಮೀಜಿ. ನಿಮ್ಮ ದೇವರ ಪೂಜೆ ಹೊರುತಪಡಿಸಿದರೆ ಉಳಿದೆಲ್ಲ ಚಿಂತನೆಗಳೂ ಎಡಪಂಥೀಯ ಎಂದರು ಪತ್ರಕರ್ತರು. ನಾನು ಎಡ–ಬಲ ಎರಡೂ ಅಲ್ಲ ಮಾನವ ಪಂಥೀಯ ಎನ್ನುತ್ತಿದ್ದರು. ಕೊನೆಯವರೆಗೂ ಅದೇ ರೀತಿ ನಡೆದುಕೊಂಡರು.

### ಹುಟ್ಟಿದ್ದು ರಾಮಕುಂಜ

ಪೇಜಾವರ ಅಧೋಕ್ಷಜ ಮಠಾಧೀಶ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಉಡುಪಿಯ ಅಷ್ಟಮಠಗಳಲ್ಲೊಂದಾದ ಪೇಜಾವರ ಮಠದ 32ನೇ ಯತಿ. ನಾಡಿನ ಹಿರಿಯ ವಿದ್ವಾಂಸರಾಗಿ, ಸಾಮಾಜಿಕ ಸೇವಾ ಕಳಕಳಿಯ ಮನೋಭಾವವುಳ್ಳವರಾಗಿಯೂ ಅವರು ಪ್ರಸಿದ್ಧರು. ಉಡುಪಿಯಿಂದ ಸುಮಾರು 120 ಕಿ. ಮೀ. ದೂರದ ಸುಬ್ರಹ್ಮಣ್ಯ ಸಮೀಪದ ರಾಮಕುಂಜ ಅವರ ಜನ್ಮಭೂಮಿ. ಆಚಾರ್ಯ ಮಧ್ವರು ನಡೆದಾಡಿದ ಪುಣ್ಯ ನೆಲ. ಅಜ್ಞಾತವಾದ ಈ ಕುಗ್ರಾಮದಲ್ಲಿ 1931ರ ಏ. 27ರಂದು ಜನನ. ಅವರ ಪೂರ್ವಾಶ್ರಮದ ಹೆಸರು ವೆಂಕಟರಮಣ. ತಂದೆ ನಾರಾಯಣಾಚಾರ್ಯ, ತಾಯಿ ಕಮಲಮ್ಮ. ಪ್ರಜಾಪತಿ ಸಂವತ್ಸರದ ವೈಶಾಖ ಶುದ್ಧ ದಶಮಿ, ಸೋಮವಾರ ವೆಂಕಟರಮಣನ ಶುಭ ಜನನ.

ರಾಮಕುಂಜದ ಸಂಸ್ಕೃತ ಎಲಿಮೆಂಟರಿ ಶಾಲೆಯಲ್ಲೇ ಪ್ರಾಥಮಿಕ ವಿದ್ಯಾಭ್ಯಾಸ. ಏಳನೆಯ ವರ್ಷದಲ್ಲೇ ಗಾಯತ್ರಿ ಉಪದೇಶ. ಉಪನಯನಕ್ಕೂ ಮುಂಚೆ, ಹುಡುಗನಿಗಿನ್ನೂ ಆರು ವರ್ಷ. ಆಟವಾಡುವ ವಯಸ್ಸು. ತಂದೆ ತಾಯಿ ಮಗನನ್ನು

> **1956 ಜು. 28 ಟೀಕಾಚಾರ್ಯರ ಪುಣ್ಯದಿನದಂದು ಬೆಂಗಳೂರಿನಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠ ಸ್ಥಾಪನೆ. 12 ವರ್ಷ ಕಾಲ ನಿರಂತರ ಶಾಸ್ತ್ರಾಧ್ಯಯನ ನಡೆಸುವ ಗುರುಕುಲದ ಮಾದರಿಯ ನಾಡಿನ ಹೆಮ್ಮೆಯ ಆಧ್ಯಾತ್ಮ ವಿದ್ಯಾಕೇಂದ್ರ. ಈ 56 ವರ್ಷಗಳ ಹರವಿನಲ್ಲಿ ಈ ಸಂಸ್ಥೆಯಲ್ಲಿ ಕಲಿತು ಹೊರಬಂದ ಖ್ಯಾತ ವಿದ್ವಾಂಸರು ನೂರಾರು ಮಂದಿ.**

ಉಡುಪಿಗೆ ಕರೆತಂದರು. ಆಗ ಪೇಜಾವರ ಮಠದ ಪರ್ಯಾಯವೇ ನಡೆದಿತ್ತು. ಬಾಲಕ ವೆಂಕಟರಮಣ, ಮಠದ ಸ್ವಾಮೀಜಿ ಕೃಷ್ಣ ಪೂಜೆ ಮಾಡುವುದನ್ನು ಆಸಕ್ತಿಯಿಂದ ಗಮನಿಸಿದ. ಏನೋ ಒಂದು ಅಂತರಂಗದ ಸೆಳೆತ– ತಾನೂ ಹೀಗೆ ಕೃಷ್ಣನನ್ನು ಪೂಜಿಸಬಹುದೆ? ಎಂದು. ತಂದೆ ತಾಯಿ ವೆಂಕಟರಮಣನನ್ನು ಸ್ವಾಮಿಗಳ ಭೇಟಿಗೆ ಕರೆದುಕೊಂಡು ಹೋದರು. ವೆಂಕಟರಮಣ ಭಕ್ತಿಯಿಂದ ಸ್ವಾಮಿಗಳಿಗೆ ನಮಸ್ಕರಿಸಿದ. ಪುಟ್ಟ ಹುಡುಗನ ಮುಗ್ಧ ಮುಖ, ಅಲ್ಲಿ ತುಂಬಿದ ಭಕ್ತಿ ಭಾವ, ನಡೆಯ ಚುರುಕುತನ ಎಲ್ಲವನ್ನೂ ಗಮನಿಸಿದ ಸ್ವಾಮಿಗಳಿಗೆ ಏನನ್ನಿಸಿತೋ! ಆಕಸ್ಮಿಕವಾಗಿ ಅವರ ಬಾಯಿಂದ ಹೀಗೊಂದು ಮಾತು ಬಂತು– ನೀನು ನನ್ನಂತೆ ಸ್ವಾಮಿಯಾಗುತ್ತೀಯಾ? ಎಂದ ಒಡನೆಯೇ ವೆಂಕಟರಮಣ ಹೂಂ ಎಂದೇ ಉತ್ತರಿಸಿದ. ಈ ಆಕಸ್ಮಿಕ ಸಂಭಾಷಣೆಗೆ ಒಳಗಿನಿಂದ ಪ್ರೇರೇಪಿಸಿದ ದೇವತೆಗಳು ತಥಾಸ್ತು ಎಂದರು.

### ಹಂಪೆಯಲ್ಲಿ ಯತಿದೀಕ್ಷೆ

ಪರ್ಯಾಯದ ಅವಧಿ ಮುಗಿಯಿತು. ಅಂದಿನ ಪೇಜಾವರ ಮಠಾಧೀಶರಾಗಿದ್ದ ಶ್ರೀ ವಿಶ್ವಮಾನ್ಯತೀರ್ಥರು ಸಂಚಾರಕ್ಕೆ ಹೊರಟರು. ಪಯಣದ ಹಾದಿಯಲ್ಲಿ ಹಂಪೆಯನ್ನು ತಲುಪಿದರು. ವ್ಯಾಸತೀರ್ಥರ ತಪೋಭೂಮಿಯಾದ ಹಂಪೆಯಲ್ಲಿ ಅವರ ನಿರ್ಧಾರ ಗಟ್ಟಿಗೊಂಡಿತು. ಅವರು ವಿಳಂಬ ಮಾಡದೆ ವೆಂಕಟರಮಣನನ್ನು ಕರೆಸಿಕೊಂಡರು. ಆಗಷ್ಟೇ ಉಪನೀತನಾಗಿದ್ದ ವಟು ವೆಂಕಟರಮಣ, ಹಿರಿಯರ ಜತೆ ಹಂಪೆಗೆ ತೆರಳಿದ.

ಬಹುಧಾನ್ಯ ಸಂವತ್ಸರದ ಮಾರ್ಗಶಿರ ಶುದ್ಧ ಪಂಚಮಿ (ಡಿ. 12, 1938) ವೆಂಕಟರಮಣನಿಗೆ ಹಂಪೆಯ ಯಂತ್ರೋದ್ಧಾರ ಮುಖ್ಯಪ್ರಾಣ ಸನ್ನಿಧಿಯಲ್ಲಿ ಯತಿ ದೀಕ್ಷೆ ನಡೆಯಿತು. ರಾಮಕುಂಜದ ಪುಟ್ಟ ಹಳ್ಳಿಯ ಮುಗ್ಧ ಬಾಲಕ, ಇನ್ನೂ ಏಳರ ಬಾಲಾಪ್ಯದ ಹಸುಳೆ, ಅಧೋಕ್ಷ ಜತೀರ್ಥ ಸಂಸ್ಥಾನದ ಉತ್ತರಾಧಿಕಾರಿಯಾಗಿ, ಪೇಜಾವರ ಮಠದ ಪರಂಪರೆಯ 32ನೆಯ ಯತಿಯಾಗಿ, ಆಚಾರ್ಯ ಮಧ್ವರ ವೇದಾಂತ ಪೀಠವನ್ನೇರಿದ. ವೆಂಕಟರಮಣ, ಶ್ರೀ ವಿಶ್ವೇಶತೀರ್ಥ ಶ್ರೀಪಾದರಾದರು.

1943ರ ಫೆಬ್ರವರಿ ತಿಂಗಳು. ಶ್ರೀ ವಿದ್ಯಾಮಾನ್ಯತೀರ್ಥರು ಭಂಡಾರಕೇರಿ ಮಠದಲ್ಲಿ ಶ್ರೀ ಮಧ್ವರಾದ್ಧಾಂತ ಸಂವರ್ಧಿನೀ ಸಭೆ ಸ್ಥಾಪಿಸಿದರು. ವಿದ್ವಾಂಸರ ಮೇಳವೇ ಭಂಡಾರಕೇರಿಗೆ ಧಾವಿಸಿತು. ಆ ಬಾರಿಯ ಮಧ್ವ ನವಮಿಯ ವಿದ್ವತ್ಸಭೆಯ ಅಧ್ಯಕ್ಷತೆಯನ್ನು 12ರ ಬಾಲಯತಿ ಶ್ರೀ ವಿಶ್ವೇಶತೀರ್ಥರಿಗೆ ಒಪ್ಪಿಸಿದರು. ಈ ವಾಮನಮೂರ್ತಿಯ ವಿದ್ಯೆಯ ತ್ರಿವಿಕ್ರಮಾವತಾರವನ್ನು ಅವರು ಅಂದೇ ಗುರುತಿಸಿದ್ದರು. ನಾಡಿನ ಉದ್ದಗಲದಿಂದ ಹಿರಿಯ ವಿದ್ವಾಂಸರೆಲ್ಲ ಬಂದು ನೆರೆದಿದ್ದ ಆ ವಿದ್ವತ್ ಸಭೆಯಲ್ಲಿ ಪುಟ್ಟ ಯತಿ ವಿಶ್ವೇಶತೀರ್ಥರು ನೀಡಿದ ಚುಟುಕು ಭಾಷಣ ಎಲ್ಲರಿಗೂ ಚುರುಕು ಮುಟ್ಟಿಸಿತು. ಇಡಿ ಸಭೆಗೆ ಸಭೆಯೇ ತಲೆದೂಗಿತು. ಜತೆಗೆ ಅವರು ಶಾರ್ದೂಲ ವಿಕ್ರೀಡಿತದಲ್ಲಿ ರಚಿಸಿದ ಪದ್ಯವಂತೂ ಪಂಡಿತ ಮಂಡಳಿಯನ್ನು ಬೆರಗುಗೊಳಿಸಿತು.

ಹೀಗೆ ಬೆಸೆದ ಬಾಂಧವ್ಯ ಮತ್ತಷ್ಟು ಗಟ್ಟಿಗೊಂಡು ಇಬ್ಬರು ಮಹಾನ್ ಯತಿಗಳನ್ನು ಇನ್ನಷ್ಟು ಹತ್ತಿರಕ್ಕೆ ತಂದು ಬೆಸೆಯಿತು. ಶ್ರೀ ವಿಶ್ವೇಶತೀರ್ಥರು, ಶ್ರೀ ವಿದ್ಯಾಮಾನ್ಯತೀರ್ಥರಲ್ಲಿಯೇ ವ್ಯಾಸಂಗಕ್ಕೆ ನಿಂತರು. ಭಂಡಾರಕೇರಿಯ ಗುರುಕುಲ ವಾಸ ಅವರ



ಏಕಾಂತ ಚಿಂತನೆಗೆ, ಬ್ರಹ್ಮಚರ್ಯ ಪಾಲನೆಗೆ ಮತ್ತು ಆಳವಾದ ಅಧ್ಯಯನಕ್ಕೆ ಉತ್ತಮ ವಾತಾವರಣ ಒದಗಿಸಿತು. ವಿದ್ಯಾಮಾನ್ಯತೀರ್ಥರ ಮಾರ್ಗದರ್ಶನದಲ್ಲಿ ವಿಶ್ವೇಶತೀರ್ಥರ ಅಧ್ಯಯನ ಅಖಂಡವಾಗಿ ಸಾಗಿತು. ಎಂಟು ವರ್ಷಗಳ ಅವಿಚ್ಛಿನ್ನ ಅಧ್ಯಯನದಲ್ಲಿ ವಿದ್ಯಾಮಾನ್ಯತೀರ್ಥರು ತನ್ನೆಲ್ಲ ಅರಿವನ್ನು ವಿಶ್ವೇಶತೀರ್ಥರಿಗೆ ಧಾರೆ ಎರೆದರು. ಶಾಸ್ತ್ರಪಾಂಡಿತ್ಯದಲ್ಲಿ ವಿಶ್ವೇಶತೀರ್ಥರು ಅಗ್ರಗಣ್ಯರೂ ಅಗ್ರಮಾನ್ಯರೂ ಆದರು. ಆಗ ಪೇಜಾವರ ವಿಶ್ವೇಶತೀರ್ಥರಿಗೆ 20ರ ಹರೆಯ. 1951ರಲ್ಲಿ ನಂಜನಗೂಡಿನಲ್ಲಿ ಆಗಮತ್ರಯ ವಿದ್ವಾಂಸರ ಸಮ್ಮೇಳನ ನಡೆದಿತ್ತು. ಎಲ್ಲ ಪಂಡಿತರ ಒಮ್ಮತದಿಂದ ಆ ಸಮ್ಮೇಳನದ ಅಧ್ಯಕ್ಷತೆಯ ಹೊಣೆಯನ್ನು ಹೊಸ ಹರೆಯದ ವಿಶ್ವೇಶತೀರ್ಥರಿಗೆ ಒಪ್ಪಿಸಲಾಯಿತು.

1956 ಜು. 28 ಟೀಕಾಚಾರ್ಯರ ಪುಣ್ಯದಿನದಂದು ಬೆಂಗಳೂರಿನಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠ ಸ್ಥಾಪನೆ. 12 ವರ್ಷ ಕಾಲ ನಿರಂತರ ಶಾಸ್ತ್ರಾಧ್ಯಯನ ನಡೆಸುವ ಗುರುಕುಲದ ಮಾದರಿಯ ನಾಡಿನ ಹೆಮ್ಮೆಯ ಆಧ್ಯಾತ್ಮ ವಿದ್ಯಾಕೇಂದ್ರ. ಈ 56 ವರ್ಷಗಳ ಹರವಿನಲ್ಲಿ ಈ ಸಂಸ್ಥೆಯಲ್ಲಿ ಕಲಿತು ಹೊರಬಂದ ಖ್ಯಾತ ವಿದ್ವಾಂಸರು ನೂರಾರು ಮಂದಿ.

### ಅಪ್ರತಿಮ ವಿದ್ವಾಂಸ

1961, ಶ್ರೀಪಾದರಿಗೆ 30ರ ಹರೆಯ. ದಿಲ್ಲಿಯಲ್ಲಿ ವಿಶ್ವ ಕಲ್ಯಾಣ ಯಾಗದ ಸಂಭ್ರಮ. ಗುರು ವಿದ್ಯಾಮಾನ್ಯತೀರ್ಥರು ಏರ್ಪಡಿಸಿದ ಈ ಯಾಗದಲ್ಲಿ ಸಹಜವಾಗಿಯೇ ಶಿಷ್ಯ ವಿಶ್ವೇಶತೀರ್ಥ ಶ್ರೀಪಾದರು ಭಾಗವಹಿಸಿದ್ದರು. ಯಾಗದಲ್ಲೊಂದು ವಿದ್ವತ್ ಸಭೆ. ಕಾಶಿಯ ಪ್ರಕಾಂಡ ಪಂಡಿತ ಷಡಂಗ ರಾಮಚಂದ್ರ ಶಾಸ್ತ್ರಿಗಳು ಆ ಸಭೆಯ ಮುಂದೆ ಒಂದು ಸಮಸ್ಯೆಯನ್ನಿಟ್ಟರು. ತರ್ಕಶಾಸ್ತ್ರದ ಅತ್ಯಂತ ಜಟಿಲವಾದ ಪ್ರಶ್ನೆ. ಪಂಡಿತರೆಲ್ಲ ಉತ್ತರ ಕಾಣದೆ ತತ್ತರಿಸಿದರು. ಉತ್ತರ ಸಿಗದೆ ಆ ದಿನ ಸಂದಿತು. ರಾಮಚಂದ್ರ ಶಾಸ್ತ್ರಿಗಳು ತನಗೆ ಸಾಟಿಯಿಲ್ಲ ಎಂದು ಬೀಗಿದರು. ಆ ಹಮ್ಮಿನಿಂದಲೇ ಶಾಸ್ತ್ರಿಗಳು ಮಾರನೆಯ ದಿನ ಸಭೆಗೆ ಆಗಮಿಸಿದರು. ಪೇಜಾವರ ಶ್ರೀಪಾದರು ಮುಂಜಾನೆಯ ಸಭೆಯಲ್ಲಿ ಆ ಸಮಸ್ಯೆಗೆ ಸೂಕ್ತ ಉತ್ತರ ನೀಡಿದರು. ಷಡಂಗರಿಗೆ ಅಚ್ಚರಿ. ಅವರು ಶ್ರೀಪಾದರ ಕಾಲಿಗೆರಗಿದರು.

1965ರಲ್ಲಿ ಕೊಚ್ಚಿಯ ಮಹಾರಾಜರ ಭೇಟಿ. ಮಹಾರಾಜರು ದೊಡ್ಡ ಸಂಸ್ಕೃತ ವಿದ್ವಾಂಸರು. ನ್ಯಾಯಶಾಸ್ತ್ರದಲ್ಲಿ ವಿಶೇಷ ಪರಿಣತರು. ಅವರು ಪೇಜಾವರ ಶ್ರೀಪಾದರನ್ನು ವಾಕ್ಯಾರ್ಥಕ್ಕೆ ಆಹ್ವಾನಿಸಿದರು. ಮೊದಲು ನ್ಯಾಯ ಶಾಸ್ತ್ರದಲ್ಲಿ ಚರ್ಚೆ. ಅನಂತರ ದ್ವೈತಾದ್ವೈತ ವಿಮರ್ಶೆ. ಶ್ರೀಪಾದರ ಸಮರ್ಥನೆಗೆ ಮಹಾರಾಜರು ಮನಸೋತರು. ಅರಮನೆಯಲ್ಲಿ ಶ್ರೀಪಾದರನ್ನು ವೈಭವದಿಂದ ಸನ್ಮಾನಿಸಿ ಕಳಿಸಿಕೊಟ್ಟರು.

1966ರಲ್ಲಿ ಕಾಶಿಯಲ್ಲೊಂದು ವಿದ್ವತ್ ಸಭೆ. ಕಾಶಿ ತರ್ಕಪಂಡಿತರ ತವರೂರು. ದೇಶದಲ್ಲೇ ಖ್ಯಾತರಾದ ಮಹಾನ್ ಅದ್ವೈತ ವಿದ್ವಾಂಸ ಅನಂತಕೃಷ್ಣ ಶಾಸ್ತ್ರಿಗಳು, ಅಖಿಲ ಭಾರತ ಖ್ಯಾತಿಯ ಮಹಾ ತರ್ಕ ಪಂಡಿತ ರಾಜರಾಜೇಶ್ವರ ಶಾಸ್ತ್ರಿ ದ್ರಾವಿಡ ಮುಂತಾದ ದಿಗ್ಗಜರೊಡನೆ ಶಾಸ್ತ್ರಾರ್ಥ ಚರ್ಚೆ. ಸೋಲರಿಯದ ಪಂಡಿತರು, ವಯಸ್ಸಿನಲ್ಲಿ ಹಿರಿಯರು. ಅವರ ಮುಂದೆ ಉಡುಪಿಯಿಂದ ಬಂದ 35ರ ತರುಣ ಯತಿ. ಲೆಕ್ಕಾಚಾರ ತಲೆ ಕೆಳಗಾಯಿತು. ತಮ್ಮ ಭದ್ರಕೋಟೆಯಲ್ಲಿದ್ದ ದಿಗ್ಗಜಗಳೆಲ್ಲ ಈ ತರುಣ ಯತಿಸಿಂಹದ ಮುಂದೆ ಮಾತು ಮೂಕವಾಗಿ ತಲೆ ಬಾಗಿಸಿದರು. ಇದು ಒಂದೆರಡು ಉದಾಹರಣೆಯಷ್ಟೇ. ಇತರ ಮತದ ವಿದ್ವಾಂಸರು, ಯತಿಗಳು ಕೂಡಾ ಪೇಜಾವರ ಶ್ರೀಪಾದರ ಪಾಂಡಿತ್ಯಕ್ಕೆ ಮೆಚ್ಚಿ ಅವರ ಕೊರಳಿಗೆ ವಿಜಯಮಾಲೆ ತೊಡಿಸಿ ಸತ್ಕರಿಸಿದರು. ಪುಣೆ, ಪ್ರಯಾಗ ಮುಂತಾದ ಎಲ್ಲ ಕಡೆಯೂ, ಎಲ್ಲಾ ವಿದ್ವತ್ ಸಭೆಗಳಲ್ಲೂ ಶ್ರೀಪಾದರಿಗೇ ಜಯಭೇರಿ.

1968ರ ಆಗಸ್ಟ್ 18ರಂದು ಉಡುಪಿಯಲ್ಲಿ ಶ್ರೀಕೃಷ್ಣ ಉಚಿತ ಚಿಕಿತ್ಸಾಲಯದ ಉದ್ಘಾಟನೆಯಾಯಿತು. ಬಡ ರೋಗಿಗಳಿಗೊಂದು ವರದಾನವಾದ ಇದು ಶ್ರೀಪಾದರ ಸಾಮಾಜಿಕ ಕಳಕಳಿಗೊಂದು ಅನನ್ಯ ನಿದರ್ಶನ. ಈ ಅವಧಿಯಲ್ಲೇ ಉಡುಪಿಯಲ್ಲಿ ಶ್ರೀಪಾದರ ನೇತೃತ್ವದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಮಹಾಸಮ್ಮೇಳನ ನಡೆಯಿತು. ಹಿಂದೂಗಳೆಲ್ಲಾ ಒಂದಾಗಿ ಬಂಧುಭಾವದಿಂದ ಬದುಕಬೇಕು ಎಂಬ ಸಂದೇಶವನ್ನು ಶ್ರೀಪಾದರು ಈ ವೇದಿಕೆಯಲ್ಲಿ ನೀಡಿದರು.

ಎಂತಹ ಸೂಕ್ಷ್ಮ ವಿಚಾರವನ್ನು ಬಗೆಹರಿಸುವುದರಲ್ಲಿ ಪರಿಣಿತರಾಗಿದ್ದ ಒಬ್ಬ ರಾಜಋಷಿಯನ್ನು ದೇಶ ಕಳೆದುಕೊಂಡಿದೆ.






Download From : www.kpscvaani.com

# ಡಾ|| ಎಂ. ಚಿದಾನಂದಮೂರ್ತಿ

## ಬದುಕು... ಬರಹದ... ಮೆಲುಕು...



ಡಾ. ಎಚ್.ಎಸ್. ಸತ್ಯನಾರಾಯಣ



> ಕನ್ನಡ ಮಾಧ್ಯಮ,
> ಕನ್ನಡ ಪರ ಆಡಳಿತ,
> ಕನ್ನಡ ನಾಡಿನಲ್ಲಿ ಕನ್ನಡಿಗರಿಗೆ
> ಉದ್ಯೋಗ, ಕನ್ನಡ ಶಾಲೆಗಳ ಉಳಿಕೆ,
> ಕನ್ನಡದ ಗಡಿ ವಿವಾದ,
> ಕನ್ನಡ ನಾಡಿನ ಜಲ ವಿವಾದ
> ಮುಂತಾದ ವಿಚಾರಗಳ ಬಗ್ಗೆ
> ಅಪಾರವಾದ ಜನಜಾಗೃತಿಯನ್ನು
> ಮೂಡಿಸಲು ಶ್ರಮಿಸಿದವರು
> ಚಿದಾನಂದ ಮೂರ್ತಿ

**ಕ**ನ್ನಡ ವಿದ್ವತ್ವಲಯದಲ್ಲಿ ತವನಿಧಿಯಂತೆ ಕಾಣುವವರು ಮಾನ್ಯ ಡಾ.ಎಂ.ಚಿದಾನಂದಮೂರ್ತಿಗಳು. ಕನ್ನಡದ ಏಳ್ಗೆಗಾಗಿ ನಿಸ್ವಾರ್ಥ ಮನೋಭಾವದಿಂದ ಇವರಂತೆ ದುಡಿದ ವಿದ್ವಾಂಸರು ವಿರಳಾತಿವಿರಳ. ಕನ್ನಡದ ಈ ನಮ್ಮ ನಾಡು ಸ್ವಾಭಿಮಾನದ ಗೂಡಾಗಬೇಕೆಂದು ಸದಾ ಕನಸಿದ್ದು ಮಾತ್ರವಲ್ಲದೆ ಅದಕ್ಕಾಗಿ ತಮ್ಮ ಜೀವಮಾನದುದ್ದಕ್ಕೂ ಶ್ರಮಿಸಿದರು. ಅವರ ಕನ್ನಡದ ಪ್ರೀತಿ ಕೇವಲ ಕೀರ್ತಿ–ಕಾಮನೆಗಳನ್ನು ಆಧರಿಸಿರದೆ, ಅಂತರಂಗದಿಂದ ಸಹಜವಾಗಿ ಒಡಮೂಡಿದ್ದರಿಂದಲೇ ಅವರು ಅನೇಕ ಅಮೂಲ್ಯವಾದ ಸೌಕರ್ಯಗಳನ್ನು ತ್ಯಾಗ ಮಾಡಬೇಕಾಯ್ತು. ಕನ್ನಡದ ಏಳ್ಗೆಗಾಗಿ ದುಡಿದ ಅನೇಕ ವಿದ್ವಾಂಸರು ನಮ್ಮ ಪರಂಪರೆಯಲ್ಲಿ ಆಗಿಹೋಗಿದ್ದಾರೆ ನಿಜ. ಅವರಲ್ಲಿ ಬಹುತೇಕರು



> ಕನ್ನಡ ನಾಡು–ನುಡಿ ಆಸ್ಮಿತೆಗಾಗಿ ಚಿದಾನಂದಮೂರ್ತಿ ಅವರ ಹೋರಾಟ ಅವಿಸ್ಮರಣೀಯ. ಅವರಿಗೆ ವಿಧಾನ ಪರಿಷತ್ ಸದಸ್ಯರಾಗುವಂತೆ ಮನವಿ ಮಾಡಿದ್ದೆ. ಆದರೆ ಒಪ್ಪಿಕೊಳ್ಳಲಿಲ್ಲ. ಅವರೊಬ್ಬ ಶ್ರೇಷ್ಠ ಸಂಶೋಧಕರಾಗಿದ್ದು, ಅವರ ಅಗಲಿಕೆಯಿಂದ ನಾಡಿಗೆ ತುಂಬಲಾರದ ನಷ್ಟವಾಗಿದೆ.
>
> –ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಗಳು



ವಿದ್ವತ್ ಲೋಕದಲ್ಲಿ ಮುಳುಗಿದ್ದರೆ, ಡಾ.ಎಂ. ಚಿದಾನಂದ ಮೂರ್ತಿಯವರು ಕನ್ನಡದ ಕಾರಣಕ್ಕಾಗಿ ಚಳುವಳಿಗಳನ್ನು ಮಾಡಿದರು. ಸಾವಿರಾರು ಕಾರ್ಯಕರ್ತರನ್ನು ಸಂಘಟಿಸಿದರು. ಕನ್ನಡಕ್ಕಾಗಿ ಉಪವಾಸ ಮಾಡಿದರು. ಬೀದಿ ಜಗಳಕ್ಕೂ ಹೇಸಲಿಲ್ಲ. ಆತ್ಮಾಹುತಿಗೂ ಮುಂದಾಗುವ ಮುಖೇನ ತಮ್ಮ ಕನ್ನಡಪರ ಕಾಳಜಿ ಯಾವ ಸ್ವರೂಪದೆಂಬುದನ್ನು ಜೀವಮಾನದುದ್ದಕ್ಕೂ ತೋರುತ್ತಲೇ ಬಂದಿದ್ದರಿಂದ ಇವರೊಬ್ಬ ಹೋರಾಟ ಮತ್ತು ಸಂಘರ್ಷಗಳನ್ನು ವ್ಯಕ್ತಿತ್ವದಲ್ಲಿ ಹೊಂದಿದ್ದ ಸಂಶೋಧಕರಾಗಿದ್ದರು. ಇಂತಹ ಕಾರಣಗಳೊಂದಿಗೆ 'ಚಿ.ಮೂ" ಕನ್ನಡ ಮಾಧ್ಯಮ, ಕನ್ನಡ ಪರ ಆಡಳಿತ, ಕನ್ನಡ ನಾಡಿನಲ್ಲಿ ಕನ್ನಡಿಗರಿಗೆ ಉದ್ಯೋಗ, ಕನ್ನಡ ಶಾಲೆಗಳ ಉಳಿಕೆ, ಕನ್ನಡದ ಗಡಿ ವಿವಾದ, ಕನ್ನಡ ನಾಡಿನ ಜಲ ವಿವಾದ ಮುಂತಾದ ವಿಚಾರಗಳ ಬಗ್ಗೆ ಅಪಾರವಾದ ಜನಜಾಗೃತಿಯನ್ನು ಮೂಡಿಸಲು ಶ್ರಮಿಸಿದರು. ಈ ಎಲ್ಲ ಅರ್ಥದಲ್ಲಿಯೂ ಚಿ.ಮೂ ಎಂದರೆ ಕನ್ನಡಿಗರ ಆತ್ಮಾಭಿಮಾನದ ಪ್ರತೀಕದಂತೆ ಗೋಚರಿಸುತ್ತಾರೆ.

ಡಾ.ಎಂ.ಚಿದಾನಂದಮೂರ್ತಿಯವರು ಜನಿಸಿದ್ದು ಮೇ 10, 1931ರಲ್ಲಿ. ಆಗ ಶಿವಮೊಗ್ಗ ಜಿಲ್ಲೆಗೆ ಸೇರಿದ್ದ ಚನ್ನಗಿರಿ ತಾಲೂಕಿನ ಹಿರೇಕೋಗಲೂರಿನಲ್ಲಿ. ಶ್ರೀಯುತ ಕೋಟ್ಟೂರಯ್ಯ, ಶ್ರೀಮತಿ ಪಾರ್ವತಮ್ಮ ದಂಪತಿಗಳು ಇವರ ತಂದೆ–ತಾಯಿ. ತಂದೆ ಪ್ರಾಥಮಿಕ ಶಾಲೆಯೊಂದರಲ್ಲಿ ಉಪಾಧ್ಯಾಯರಾಗಿದ್ದರು. ತಮ್ಮ ಮಗ ತಮ್ಮಂತೆ ಮೇಷ್ಟ್ರು ವೃತ್ತಿಯನ್ನು ಅವಲಂಬಿಸದೆ ಇಂಜಿನಿಯರೋ, ಡಾಕ್ಟರೋ ಆಗಲೆಂದು ಅಪೇಕ್ಷಿಸಿದ್ದರು.



ಇವರ ತಂದೆ–ತಾಯಿಗಳಿಬ್ಬರೂ ಮಹಾಸ್ವಾಭಿಮಾನಿಗಳೂ, ಕಷ್ಟ ಸಹಿಷ್ಣುಗಳೂ, ನೇರ ನಡೆ–ನುಡಿಯವರೂ ಆಗಿದ್ದರಂತೆ. ಈ ಎಲ್ಲಾ ಗುಣಗಳೂ ರಕ್ತದ ಮೂಲಕ ಚಿದಾನಂದಮೂರ್ತಿಗಳ ಮೈಯಲ್ಲೂ ಹರಿದಾಡುತ್ತಿತ್ತು.

ಚಿಕ್ಕಂದಿನಲ್ಲೇ ಓದಿನಲ್ಲಿ ತರಗತಿಗೇ ಮೊದಲಿಗರಾಗಿರುತ್ತಿದ್ದ ಚಿದಾನಂದಮೂರ್ತಿಯವರು ತಮ್ಮ ಹುಟ್ಟೂರಾದ ಕೋಗಲೂರು, ಸಂತೆಬೆನ್ನೂರುಗಳಲ್ಲಿ ತಮ್ಮ ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸ ನಡೆಸಿ ಹೈಸ್ಕೂಲು ಓದಿಗೆ ದಾವಣಗೆರೆಗೆ ಬಂದರು. ಪ್ರತಿಭಾವಂತ ಅಧ್ಯಾಪಕರುಗಳ ಮಾರ್ಗದರ್ಶನ ದೊರೆತ ಕಾರಣ, ಮೊದಲೇ ಓದಿನಲ್ಲಿ ಜಾಣರೆನಿಸಿದ್ದ ಚಿಮೂ ಇಂಟರ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಹತ್ತನೆಯವರೆನಿಸಿದರು. ಮುಂದೆ ಅವರು ಕನ್ನಡ ಆನರ್ಸ್ ಪದವಿ ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದರು. ಅಲ್ಲಿ ಅವರಿಗೆ ಅಧ್ಯಾಪಕರಾಗಿ ದೊರೆತವರು ಕನ್ನಡದ ಮೇರುಗಳೆನಿಸಿದ ಕುವೆಂಪು, ಡಿ.ಎಲ್. ನರಸಿಂಹಾಚಾರ್, ಕ.ವೆಂ.ರಾಘವಾಚಾರ್, ಎಲ್.ಶ್ರೀಕಂಠಶಾಸ್ತ್ರಿಗಳಂತಹವರು. ಸುತ್ತೂರು ಮಠದ ಫ್ರೀ ಹಾಸ್ಟೆಲಿನಲ್ಲಿದ್ದುಕೊಂಡು ಓದುತ್ತಲೇ ಚಿಮೂ ಅವರು ತಮ್ಮ ಆನರ್ಸ್ ಪದವಿಯನ್ನು ಚಿನ್ನದ ಪದಕ ಮತ್ತು ಮೊದಲ ರ್‍ಯಾಂಕಿನೊಂದಿಗೆ ಪೂರೈಸಿದರು. ಇದು ಅವರು ಎಂಥ ಕಠಿಣ ಪರಿಶ್ರಮದ ವಿದ್ಯಾರ್ಥಿಯೆಂಬುದನ್ನು ರುಜುವಾತು ಪಡಿಸುತ್ತದೆ.

ಆನರ್ಸ್ ಪದವಿ ಪಡೆದ ಒಡನೆಯೇ ಚಿಮೂ ಅವರಿಗೆ ಪದವಿ ಕಾಲೇಜಿನಲ್ಲಿ ಅಧ್ಯಾಪಕ ಹುದ್ದೆ ದೊರೆಯಿತು. ಬೆಂಗಳೂರು, ತುಮಕೂರು, ಕೋಲಾರಗಳಲ್ಲಿ ಎರಡು ವರ್ಷಗಳ ಕಾಲ ಆ ವೃತ್ತಿಯಲ್ಲಿ ಮುಂದುವರೆದು, ಬಳಿಕ ರಜೆ ಹಾಕಿ ಕನ್ನಡ ಎಂ.ಎ.ಗೆ ಸೇರಿದರು. ಚಿಮೂ ಅವರೊಳಗಿನ ಸಂಶೋಧಕ ಕಣ್ಣು ತೆರೆದಿದ್ದು ಇದೇ ಅವಧಿಯಲ್ಲಿ. ಮಹಾ ವಿದ್ವಾಂಸರಾಗಿದ್ದ ಡಿ.ಎಲ್.ಎನ್. ಎಂ.ಎ. ತರಗತಿಯ ವಿದ್ಯಾರ್ಥಿಯಾಗಿದ್ದ ಚಿಮೂ ಅವರಿಗೆ ಪಂಪನಿಗೆ ಹಿನ್ನೆಲೆಯಾಗಿದ್ದ ಸಾಮಾಜಿಕ ಶಾಸನಗಳನ್ನು ಆಧರಿಸಿ ಪುನಾರಚಿಸುವ ಕೆಲಸಕ್ಕೆ ಪ್ರೇರೇಪಿಸಿದ ಕಾರಣದಿಂದ ಹೊರಬಂದ ಕೃತಿಯೇ 'ಪಂಪಕವಿ ಮತ್ತು ಮೌಲ್ಯ ಪ್ರಸಾರ'. ಈ ಕೆಲಸವು ಚಿಮೂ ಅವರನ್ನು ಶಾಸನಗಳ ಅಧ್ಯಯನದ ಕಡೆಗೆ ಹೊರಳಿಸಿಬಿಟ್ಟಿತು. ಶಾಸನಗಳನ್ನೇ ಪಿ.ಎಚ್.ಡಿ ಅಧ್ಯಯನಕ್ಕಾಗಿ ಆಯ್ದುಕೊಂಡು ಪ್ರೊ.ತೀ.ನಂ.ಶ್ರೀಕಂಠಯ್ಯನವರ ಮಾರ್ಗದರ್ಶನದಲ್ಲಿ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಮೈಸೂರು



Download From : www.kpscvaani.com

**ನೃಪತುಂಗ ಪ್ರಶಸ್ತಿಯಿಂದ ಬಂದಿದ್ದ 7 ಲಕ್ಷ ರೂ ನಗದು ಬಹುಮಾನದಲ್ಲಿ 4 ಲಕ್ಷರೂಗಳನ್ನು ತಮ್ಮ ಹುಟ್ಟೂರಾದ ಹಿರೇಕೋಗಲೂರಿನ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಚಿಮೂ ಅವರು ಅದರ ಬಡ್ಡಿಯ ಹಣವನ್ನು ಪ್ರತಿ ವರ್ಷ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೀಡುತ್ತಿದ್ದರು.**

ವಿಶ್ವವಿದ್ಯಾನಿಲಯದಿಂದ 1964 ರಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ಮುಂದೆ ನಾಲ್ಕು ವರ್ಷಗಳ ಕಾಲ ಅದೇ ವಿ.ವಿ.ಯ ಕನ್ನಡ ವಿಭಾಗದಲ್ಲಿ ದುಡಿದು 1968 ರ ಹೊತ್ತಿಗೆ ರೀಡರ್ ಆಗಿ ಬೆಂಗಳೂರು ವಿ.ವಿ. ಸೇರಿ ನಿವೃತ್ತರಾಗುವವರೆಗೂ ದುಡಿದರು.

ಐದು ದಶಕಗಳಿಗೂ ಹೆಚ್ಚು ಕಾಲ ಸಂಶೋಧನಾ ಕ್ಷೇತ್ರದಲ್ಲಿ ದುಡಿದಿರುವ ಚಿಮೂ ಅವರು ಸಾಹಿತ್ಯ ಚರಿತ್ರೆ, ಭಾಷಾ ಚರಿತ್ರೆ, ಛಂದಸ್ಸು, ಶಾಸನ ಸಂಪಾದನೆ, ಹಸ್ತಪ್ರತಿ ಶಾಸ್ತ್ರ, ಸ್ಥಳನಾಮ ಮುಂತಾದ ಮಹತ್ವದ ವಿಚಾರಗಳಿಗೆ ಸಂಬಂಧಿಸಿದಂತೆ ನೂರಾರು ಸಂಶೋಧನಾ ಲೇಖನಗಳನ್ನು ಚಿದಾನಂದಮೂರ್ತಿಗಳು ಪ್ರಕಟಿಸಿದ್ದಾರೆ. ಈ ಎಲ್ಲ ಲೇಖನಗಳೂ ಚಿಮೂ ಅವರೊಬ್ಬ ಬಹುಶ್ರುತ ವಿದ್ವಾಂಸರೆಂಬುದನ್ನು ನಿರೂಪಿಸುತ್ತವೆ. ಇವರ ವ್ಯಾಪಕವಾದ ವ್ಯಾಸಂಗ, ಆಳವಾದ ಮಿಂಚಿನ ಪ್ರತಿಭೆ, ಅಪಾರವಾದ ಪರಿಶ್ರಮ, ಸೂಕ್ಷ್ಮವಾದ ಒಳನೋಟಗಳೆಲ್ಲವೂ ಸಮ್ಮಿಳಿತಗೊಂಡ ಪರಿಣಾಮದ ಕೊಡುಗೆ ಇವಾಗಿವೆ.

ಅರವತ್ತರ ದಶಕದಲ್ಲಿಯೇ "ಉಂಬರಿ, ಇರ್, ದುಂಡುಚಿ, ಅಮ್ಮ, ಅಜ್ಜಿ, ಅಲ್ಲಮ, ಬಾಮಟ್ಟೆ, ಅತ್ತಿಮಬ್ಬೆ" ಮುಂತಾದ ಶಬ್ದಗಳ ಬೆನ್ನುಹತ್ತಿದ ಚಿಮೂ ಅವರು ಆ ಶಬ್ದಗಳನ್ನು ಕನ್ನಡ ಭಾಷೆ, ವ್ಯಾಕರಣ, ಅವಸ್ಥಾಂತರಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ, ಚರ್ಚಿಸುವ ಸಾಹಸವನ್ನು ಮಾಡಿದ್ದರು. ಇವರು ಕನ್ನಡಕ್ಕೆ ಕೊಟ್ಟಿರುವ 'ಭಾಷಾ ವಿಜ್ಞಾನದ ಮೂಲತತ್ವಗಳು' ಮತ್ತು 'ವಾಗರ್ಥ' ಎಂಬೆರಡು ಕೃತಿಗಳು ಇಂದಿಗೂ ಭಾಷಾ ವಿಜ್ಞಾನ ಕ್ಷೇತ್ರದ ಪ್ರಮುಖ ಆಕರ ಗ್ರಂಥಗಳೆಂದು ಪರಿಗಣಿತವಾಗಿವೆ. ಕನ್ನಡದಲ್ಲಿ ಭಾಷಾವಿಜ್ಞಾನದ ಅಧ್ಯಯನಗಳು ಕಣ್ಣು ತೆರೆಯುತ್ತಿದ್ದ ಕಾಲದಲ್ಲಿ ಪ್ರಕಟಗೊಂಡು ಮೈಲಿಗಲ್ಲೆನಿಸಿದವು. ಇದೇ ರೀತಿ ಸಂಶೋಧನಾ ವಿಧಿ ವಿಧಾನಗಳನ್ನು ಬೋಧಿಸುವ 'ಕನ್ನಡ ಸಂಶೋಧನಾ ಶಾಸ್ತ್ರ' ಕೃತಿ ಕೂಡ ಸಂಶೋಧನಾ ಕ್ಷೇತ್ರಕ್ಕೆ ಕಾಲಿರಿಸಿದವರ ಮಾರ್ಗದರ್ಶಿಯಾಯಿತು.

ಕನ್ನಡ ಭಾಷೆಯ ಉಗಮ, ಭಾಷಾ ಸ್ವರೂಪ, ಭಾಷಾ ವರ್ಗೀಕರಣ, ಭಾಷಾ ವ್ಯತ್ಯಾಸ, ಭಾಷೆ–ಉಪಭಾಷೆಗಳ ನಡುವಣ ಸಂಬಂಧ, ಭಾಷಾ ವಿಜ್ಞಾನದ ಇತಿಹಾಸ ಮುಂತಾದ ವಿಚಾರಗಳು ಶುಷ್ಕವೆನಿಸಬಹುದಾದ ಸಂದರ್ಭವೇ ಹೆಚ್ಚು. ಆದರೆ ಚಿದಾನಂದಮೂರ್ತಿಗಳು ಈ ವಿಚಾರಗಳನ್ನು ಸರಳವಾದ, ಹೃದ್ಯವಾದ ಭಾಷೆಯಲ್ಲಿ ನಿರೂಪಿಸಿದ್ದು ವಿಶೇಷ. ಇದರೊಂದಿಗೆ ಕನ್ನಡದಲ್ಲಿ ಪ್ರತಿಧ್ವನಿಸಿದ ವಾರ್ತಾ ಮಾಧ್ಯಮದಲ್ಲಿ ಕನ್ನಡ ಭಾಷೆಯ ಆಧುನೀಕರಣ, ಹೊಳೇನರಸಿಪುರ–ಚನ್ನರಾಯಪಟ್ಟಣ–ಅರಕಲಗೂಡು ಪ್ರದೇಶಗಳಲ್ಲಿ ತಾಲವ್ವೀಕರಣ–ಕಂಠ್ವೀಕರಣ, ವ್ಯಾವಹಾರಿಕ ಶಿಷ್ಟ ಕನ್ನಡದ ವಿಭಕ್ತಿ ವ್ಯವಸ್ಥೆ ಶುದ್ಧ ಭಾಷಾ ವಿಜ್ಞಾನದ ದೃಷ್ಟಿಯಿಂದ ಕೂಡಿವೆ.


ಕನ್ನಡಲ್ಲಿ ಸ್ಥಳನಾಮಗಳನ್ನು ಕುರಿತ ಅಧ್ಯಯನಗಳು ವಿಪುಲವಾಗಿ ನಡೆದಿವೆ. ಈ ಕ್ಷೇತ್ರಕ್ಕೆ ಚಿದಾನಂಮೂರ್ತಿಗಳ ಕೊಡುಗೆ ಅಪೂರ್ವವಾದುದು. ಸಾಮಾನ್ಯವಾಗಿ ಪಿ.ಎಚ್.ಡಿ ಪ್ರಬಂಧಕ್ಕಾಗಿ ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಅಧ್ಯಯನವನ್ನು ಯಾವುದಾದರೊಂದು ತಾಲೂಕಿಗೆ ಸೀಮಿತಗೊಳಿಸಿಕೊಂಡಿರುತ್ತಾರೆ. ಆದರೆ ಚಿಮೂ ಅವರ 'ಕರ್ನಾಟಕದ ಸ್ಥಳನಾಮ' ಕೃತಿಯು ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಹೆಗ್ಗುರತಾಗಿದೆ. ಇದರೊಂದಿಗೆ ನೆನಪಿಸಿಕೊಳ್ಳಲೇ ಬೇಕಾದ ಇವರ ಲೇಖನಗಳೆಂದರೆ ವ್ಯಕ್ತಿನಾಮಗಳು, ದೇಕಬ್ಬೆ ಶಾಸನದ ಸ್ಥಳಗಳು, ಆದಯ್ಯ ಎಂಬ ಹೆಸರಿನ ನಿಷ್ಪತ್ತಿ, ಗೋದಾವರಿ ತೀರದ ಕನ್ನಡ ಮುಂತಾದವು.

ಛಂದಸ್ಸಿನ ಕ್ಷೇತ್ರದ ಆಸಕ್ತಿ ಚಿಮೂ ಅವರಿಗೆ ಅವರ ಪ್ರಿಯ ಗುರುಗಳಾಗಿದ್ದ ಡಿ.ಎಲ್.ಎನ್ ಮತ್ತು ತೀನಂಶ್ರೀಯವರಿಂದ ಎರವಾಗಿ ಬಂದಿತ್ತು. ಚಿಮೂ ಅವರ 'ಛಂದೋತರಂಗ' ಎಂಬ ಕೃತಿಯಲ್ಲಿ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಲೇಖನಗಳನ್ನು ಬರೆದು ಅನೇಕ ಸಂಗತಿಗಳನ್ನು ಸವಿವರವಾಗಿ ಚರ್ಚಿಸಿದ್ದಾರೆ. ಇವುಗಳಲ್ಲಿ ಚಿಮೂ ಅವರು 'ತ್ರಿಪದಿಯ ಇತಿಹಾಸ'ವನ್ನು ಕುರಿತ ಲೇಖನವಂತೂ ಅನೇಕ ಹೊಸ ವಿಚಾರಗಳಿಂದ ಮೈದುಂಬಿಕೊಂಡು ನಾಡಿನ ಅನೇಕ ವಿದ್ವಾಂಸರ ಮೆಚ್ಚುಗೆಯನ್ನು ಸಂಪಾದಿಸಿತು. ಲಯಗ್ರಾಹಿ–ಲಯೋತ್ತರಗಳ ನಡುವಣ ಸಂಬಂಧ ಪ್ರಯೋಗಗಳನ್ನು ಕುರಿತ ಲೇಖನ ಹಾಗೂ ಒನಕೆವಾಡು ಕುರಿತ ಲೇಖನವೂ ಚಿಮೂ ಅವರ ಪ್ರತಿಭೆಯ ತೇಜಸ್ಸಿನಿಂದ ಪ್ರಜ್ವಲಿಸಿದೆ. ಸಾಹಿತ್ಯ ಚರಿತ್ರೆಗೆ ಸಂಪದಿಸಿದಂತೆಯೂ ಪಂಪನಿಂದ ಮುದ್ದಣ್ಣನವರೆಗೂ ಅವರು ಅನೇಕ ಲೇಖನಗಳನ್ನು ರಚಿಸಿದ್ದಾರೆ. ಚಿಮೂ ಅವರ 'ಸಂಶೋಧನಾ ತರಂಗ'ದ ಎರಡು ಸಂಪುಟಗಳು ಇದಕ್ಕೆ ಸಾಕ್ಷಿಯಾಗಿವೆ. ಇವರ ಬಹುಚರ್ಚಿತವಾದ 'ಲಿಂಗಾಯತ ಅಧ್ಯಯನಗಳು' ಮತ್ತು ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ತಂದಿತ್ತ 'ಹೊಸತು ಹೊಸತು' ಕೃತಿಗಳನ್ನೂ ಇಲ್ಲಿಯೇ ಉಲ್ಲೇಖಿಸಬಹುದಾಗಿದೆ.

ವೀರಶೈವ ಸಾಹಿತ್ಯದ ಚರ್ಚೆಗಳು ಚಿದಾನಂದ ಮೂರ್ತಿಗಳಿಗೆ ತುಂಬಾ ಪ್ರಿಯವಾಗಿದ್ದ ಕ್ಷೇತ್ರ. ಈ ಕುರಿತು "ಹೊಸತು ಹೊಸತು" ಕೃತಿಯಲ್ಲೂ ಮತ್ತಿತರೆಡೆಗಳಲ್ಲೂ ಅವರು ಬರೆದ ಲೇಖನಗಳು ಬೆಟ್ಟದಷ್ಟಿವೆ. ವಚನ ಸಾಹಿತ್ಯದ ಉಗಮ–ವಿಕಾಸದಿಂದ ಹಿಡಿದು ಆಧುನಿಕ ಪೂರ್ವಕಾಲದ ಶಿಕ್ಷಣ ವ್ಯವಸ್ಥೆಯವರೆಗಿನ ಚರ್ಚೆಗಳನ್ನು ಇವರ ಬರಹಗಳು ಹೊಂದಿವೆ ಎಂದರೆ, ಈ ಕ್ಷೇತ್ರದಲ್ಲಿ ಇವರು ಮಾಡಿದ ಸಾಧನೆಗಳ ಅರಿವಾಗಬಹುದು. ಸರಿಸುಮಾರು ಎಪ್ಪತ್ತೈದು ಲೇಖನಗಳು ಈ ಕುರಿತೇ ಇವೆ. ಚಿದಾನಂದ ಮೂರ್ತಿಗಳ ಪರಿಶ್ರಮವನ್ನು ಇಲ್ಲಿ ನೆನೆಯಬಹುದಾದರೆ, ಉದಾಹರಣೆಗೆ ಅಲ್ಲಮನ ವಚನಗಳ ಅಂಕಿತವನ್ನು ಇಂದಿಗೂ ನಾವು 'ಗುಹೇಶ್ವರ' ಎಂದೇ ಉಲ್ಲೇಖಿಸುತ್ತಿದ್ದೇವೆ. ಆದರೆ ಚಿದಾನಂದಮೂರ್ತಿಗಳು ಅಲ್ಲಮನ ಅಂಕಿತ 'ಗುಹೇಶ್ವರ' ಅಲ್ಲ 'ಗೊಗ್ಗೇಶ್ವರ" ಎಂದು ಸ್ಥಾಪಿಸಿದರು. ಬಳ್ಳಿಗಾವೆಯಲ್ಲಿ ಇರುವ ಅವಶೇಷಗಳನ್ನು, ಅಲ್ಲಿರುವ ಗೋಗೋಶ್ವರ ದೇವಾಲಯವನ್ನು ಅನಿಮಿಷಯ್ಯನ ಗುಹೆಯನ್ನು ಇವರು ಆಧಾರವಾಗಿ ಬಳಸಿಕೊಳ್ಳುತ್ತಾರೆ.

ಮಹಾದೇವಿ ಅಕ್ಕನ ಪತಿ ವಿಚಾರವಾಗಿ ಬರೆಯುತ್ತಾ ಆಕೆಯ ಗಂಡ ಕೌಶಿಕ ಇತಿಹಾಸದಲ್ಲಿ ಬರುವ ಕಸಪಯ್ಯ ನಾಯಕ ಎಂದು ಹೇಳಿದರು. ಕವಿಗಳ ವಿಚಾರದಲ್ಲಿ ಬೆನ್ನುಬೀಳುವ ಸ್ವಭಾವದ ಚಿಮೂ ಅವರು ಹರಿಹರನ ಕಾಲ, ಅವನ ವಾಸಸ್ಥಾನ, ಹರಿಹರನ ಹೂದೋಟ, ಚಾಮರಸನ ಆಶ್ರಯ, ಬೇಲೂರಿನಲ್ಲಿರುವ ರಾಘವಾಂಕನ ಸಮಾಧಿ, ಪಾಲ್ಕುರಿಕೆ ಸೋಮನಾಥನ ಸಮಾಧಿ, ಮುಂತಾದವುಗಳನ್ನು ಕ್ಷೇತ್ರ ಶೋಧನೆ ಮಾಡಿ ಬರೆದಿದ್ದಾರೆ. ಬಸವಣ್ಣನ ಮನೆಯಲ್ಲಿ ಸೇವಕಿಯಾಗಿದ್ದ ಗೌರವ್ವ, ಅಜಗಣ್ಣನ ಅಂಕಿತ ಮಹಾಘನ ಸೋಮೇಶ್ವರ ಎಂಬುದನ್ನು ಮೊದಲು ಶೋಧಿಸಿದ ಹಿರಿಮೆಯೂ ಇವರದೇ. ಈ ದಿಸೆಯಲ್ಲಿ 'ಶೂನ್ಯ ಸಂಪಾದನೆಯನ್ನು ಕುರಿತು' ಎಂಬ ಕೃತಿಯೂ ಕೂಡ ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ. ಶ್ವಪಚಯ್ಯನ ಕತೆಯ ಆಶಯ, ಹರಿಜನರಿಗಿದ್ದ ಹಿರಯಕುಲ–ಹಿರಿಯಮಾಹೇಶ್ವರ ಎಂಬ ಹೆಸರುಗಳು– ಮುಂತಾದವನ್ನು ಗಮನಿಸಿದರೆ ವಚನ ಸಾಹಿತ್ಯವನ್ನು ಅವರು ನಮ್ಮ ಸಂಸ್ಕೃತಿಯ ಬಹುಮುಖ್ಯವಾಗಿ ಪರಿಭಾವಿಸಿರುವ ಬಗೆ ಅರ್ಥವಾದೀತು. ಇವೆಲ್ಲದರೊಂದಿಗೆ ಚಿದಾನಂದಮೂರ್ತಿಗಳು 'ಜಾನಪದ' ಕ್ಷೇತ್ರದಲ್ಲಿ ಮಾಡಿರುವ ಕಾರ್ಯಗಳು, ಶಾಸನ–ಕರ್ನಾಟಕ ಸಂಸ್ಕೃತಿಯನ್ನು ಕುರಿತು ಮಾಡಿದ ಕೆಲಸಗಳನ್ನು ಕುರಿತು ಬರೆಯಲು ಪ್ರತ್ಯೇಕವಾದ ಅಧ್ಯಾಯಗಳನ್ನೇ ಬರೆಯಬೇಕಾದೀತು.

ಚಿದಾನಂದಮೂರ್ತಿಯವರ ವ್ಯಕ್ತಿತ್ವದ ಮತ್ತೊಂದು ಮಗ್ಗಲೆಂದರೆ ಅದು ಕನ್ನಡ ಪರ ಹೋರಾಟದ ಸಂದರ್ಭಗಳು. ತಮ್ಮ ಬದುಕಿನ ಅನೇಕ ವರ್ಷಗಳ ಕಾಲ ಬರವಣಿಗೆಯನ್ನು ಬದಿಗೊತ್ತಿ ಕನ್ನಡ– ಕರ್ನಾಟಕದ ಪರ ಹೋರಾಟಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೆಂದರೆ ಅವರ ಕನ್ನಡ ಪ್ರೀತಿಯ ಅರಿವಾದೀತು. ತಮ್ಮ ಹೋರಾಟಗಳು ಪರಿಣಾಮ ಬೀರದಾದಾಗ, ಫಲ ಕೊಡದಾದಾಗ ಕನ್ನಡಿಗರ ಮತ್ತು ಸರ್ಕಾರದ ನಿರಭಿಮಾನ ನಿರುತ್ಸಾಹಗಳಿಂದ ನೊಂದು ಆತ್ಮಾಹುತಿಗೆ ನಿರ್ಧರಿಸಿ, 'ನನ್ನ ಆತ್ಮತ್ಯಾಗ ಎಲ್ಲರ ಹೃದಯ ಗಹ್ವರಗಳಲ್ಲಿ ಫಳಕ್ಕನೆ ಮಿಂಚಿ ವಿದ್ಯುತ್ ಸಂಚಾರವುಂಟು ಮಾಡಲಿ. ಹೆಚ್ಚಿನ ತ್ಯಾಗಕ್ಕೆ ಅವರನ್ನು ಸಿದ್ಧಗೊಳಿಸಲಿ' ಎಂದು ಹೇಳುತ್ತಾ ಹಂಪಿಯ ತುಂಗಭದ್ರಾ ನದಿಗೆ ಹಾರಿದ್ದರು. ಕನ್ನಡಕ್ಕಾಗಿ ಹೀಗೆ ಪ್ರಾಣತ್ಯಾಗ ಮಾಡಲೂ ಸಿದ್ಧರಿದ್ದ ಎಷ್ಟು ಜನ ವಿದ್ವಾಂಸರಿದ್ದಾರೆ?. "ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ" ಮತ್ತು "ಕನ್ನಡ–ಕರ್ನಾಟಕ–ಕನ್ನಡಿಗ" ಎಂಬ ಹೊತ್ತಿಗೆಗಳು ಇಂದಿಗೂ ಮಾಹಿತಿ ಪೂರ್ಣವಾಗಿವೆ, ಇವರ ನೇರನಡೆ ನುಡಿಯ ಸ್ವಭಾವದಿಂದ ಕೆರಳಿದವರಿಗೆ ಇವರೊಳಗಿನ ಪ್ರಾಮಾಣಿಕ ಕನ್ನಡ ಪ್ರೀತಿಯ ಅರಿವಾಗಲೇ ಇಲ್ಲ.



**ಇವರು ಕನ್ನಡಕ್ಕೆ ಕೊಟ್ಟಿರುವ 'ಭಾಷಾ ವಿಜ್ಞಾನದ ಮೂಲತತ್ವಗಳು' ಮತ್ತು 'ವಾಗರ್ಥ' ಎಂಬೆರಡು ಕೃತಿಗಳು ಇಂದಿಗೂ ಭಾಷಾ ವಿಜ್ಞಾನ ಕ್ಷೇತ್ರದ ಪ್ರಮುಖ ಆಕರ ಗ್ರಂಥಗಳೆಂದು ಪರಿಗಣಿತವಾಗಿವೆ. ಕನ್ನಡದಲ್ಲಿ ಭಾಷಾವಿಜ್ಞಾನದ ಅಧ್ಯಯನಗಳು ಕಣ್ಣು ತೆರೆಯುತ್ತಿದ್ದ ಕಾಲದಲ್ಲಿ ಪ್ರಕಟಗೊಂಡು ಮೈಲಿಗಲ್ಲೆನಿಸಿದವು.**

ಚಿದಾನಂದ ಮೂರ್ತಿಯವರನ್ನು ಅರಸಿ ಬಂದಿರುವ ಗೌರವಗಳು ಅನೇಕ. 'ಹೊಸತು ಹೊಸತು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ, ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ. ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ, ರಾಜ್ಯೋತ್ಸವ ಪ್ರಶಸ್ತಿ, ದೇವರಾಜ ಬಹಾದ್ದೂರ್ ಪ್ರಶಸ್ತಿ, ಅನಕೃ ಪ್ರಶಸ್ತಿ, ಮುಂತಾದವು ಅವುಗಳಲ್ಲಿ ಕೆಲವು. ಇವರ ಶಿಷ್ಯರು, ಅಭಿಮಾನಿಗಳು ಸೇರಿ ಒಪ್ಪಿಸಿದ 'ಸಂಶೋಧನೆ' ಎಂಬ ಬೃಹತ್ ಗೌರವ ಕೂಡ ಕನ್ನಡಿಗರೆಂದೂ ಮರೆಯದ ಅತ್ಯತ್ತಮ ಆಕರ ಗ್ರಂಥವಾಗಿದೆ. ಕಿರಯರನ್ನು ಪ್ರೋತ್ಸಾಹಿಸಲು ಸ್ವತಃ ತಾವೇ 'ಚಿದಾನಂದ' ಪ್ರಶಸ್ತಿಯನ್ನು ಕೂಡ ಆರಂಭಿಸಿದ್ದರು. ಒಟ್ಟಿನಲ್ಲಿ ಯಾವುದೇ ವಿಚಾರದಲ್ಲಿ ಸತ್ಯದ ವಿರುದ್ಧ ಹೋರಾಟ ನಡೆಸುತ್ತಿದ್ದ ಇವರಿಗೆ ಬಲಪಂಥೀಯರೆಂಬ ಹಣೆಪಟ್ಟಿ ಹಚ್ಚಿದುದು ಮಾತ್ರ ವಿಪರ್ಯಾಸದ ಸಂಗತಿ.

ಕೆಲವು ದಿನಗಳಿಂದ ನ್ಯುಮೋನಿಯಾದಿಂದ ಬಳಲುತ್ತಿದ್ದ ಚಿಮೂ ಅವರು ತಮ್ಮ 88 ನೇ ವಯಸ್ಸಿನಲ್ಲಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಪತ್ನಿ ವಿಶಾಲಕ್ಷಿ, ಮಗ ವಿನಯ್ ಕುಮಾರ್ ಮತ್ತು ಮಗಳು ಶೋಭಾ ಅವರನ್ನು ಮತ್ತು ಅಪಾರ ಕೋಟಿ ಕನ್ನಡಿಗರನ್ನು ಅಗಲಿದ್ದಾರೆ. ಇಂತಹ ಹೋರಾಟಗಾರ ಮತ್ತೆ ಹುಟ್ಟಿಬರುವುದಿಲ್ಲ. ಕನ್ನಡ ನಾಡು ಶ್ರೇಷ್ಠ ಸಂಶೋಧಕರೊಬ್ಬರನ್ನು ಕಳೆದುಕೊಂಡಿದೆ.






Download From : www.kpscvaani.com

# ದ್ವಾದಶ ಜ್ಯೋತಿರ್ಲಿಂಗಳು

ಶೋಭಾ ಹೆಚ್. ಜಿ.



ಸೌರಾಷ್ಟ್ರೇ ಸೋಮನಾಥಂ ಚ, ಶ್ರೀ ಶೈಲೇ ಮಲ್ಲಿಕಾರ್ಜುನಂ।
ಉಜ್ಜಯಿನ್ಯಾಂ ಮಹಾಕಾಳಂ, ಓಂ ಕಾರೇ ಪರಮೇಶ್ವರಂ ॥
ಕೇದಾರಂ ಹಿಮವತ್ ಪೃಷ್ಠೇ, ಡಾಕೀನ್ಯಾಂ ಭೀಮ ಶಂಕರಂ॥
ವಾರಾಣಾಸ್ಯಾಂ ಚ ವಿಶ್ವೇಶ್ವರಂ, ತ್ರ್ಯಂಬಕಂ ಗೌತಮೀ ತಟೇ ॥
ವೈದ್ಯನಾಥಂ ಚಿತಾಭೂಮೇ, ನಾಗೇಶಂ ದಾರುಕಾವನೇ ॥
ಸೇತುಬಂಧಂ ಚ ರಾಮೇಶಂ, ಘುಶ್ಮೇಶಂ ಚ ಶಿವಾಲಯೇ ॥
ದ್ವಾದಶೈತಾನಿ ನಾಮಾನಿ ಪ್ರಾತರುತ್ಥಾಯ ಯಃ ಪಠೇತ್ ।
ಸಪ್ತ ಜನ್ಮ ಕೃತಂ ಪಾಪಂ ಸ್ಮರೇಣ (ಸರ್ವೇಣ) ವಿನಶ್ಯತಿ ॥

ಹೀಗೆ ದ್ವಾದಶ ಜ್ಯೋತಿರ್ಲಿಂಗಗಳ ಮಹಿಮೆಯನ್ನು ಸಾರುವ ಸ್ತುತಿಯೊಂದಿದೆ. ಪ್ರಪಂಚದಲ್ಲಿ ಅತೀ ಪ್ರಾಚೀನವಾದ ಮತ ಶೈವ ಮತ. ಪರಮಶಿವನ ಪಂಚಮುಖಗಳಿಂದ ಪಂಚಭೂತಗಳು, ಪಂಚ ತನ್ಮಾತರಗಳಿಂದ, ಹುಟ್ಟು ಸೃಷ್ಟಿ ಪ್ರಾರಂಭವಾಯಿತು. ಶಿವ ತತ್ವ ಅತೀ ಸೂಕ್ಷ್ಮ ಇರುವುದರಿಂದ, ಆತ್ಮಕ್ಕೆ ಅನುಭವ ಪೂರ್ವಕವಾಗಿ ತಿಳಿಯುತ್ತದೆ ಎಂದು ಶೈವಾಗಮ ಗಳು ಹೇಳುತ್ತಿವೆ. ಪರತತ್ವ ಸ್ವರೂಪವಾದ ಶಿವನ ಭಕ್ತರು ಮಾತ್ರ ಆತ್ಮ ಜ್ಯೋತಿಯನ್ನು ಸಂದರ್ಶಿಸುತ್ತಾರೆ. ಉಳಿದೆಲ್ಲರಿಗೂ ಲಿಂಗಧಾರಣಾ ನಂತರವೇ ಶಿವ ಭೌತಿಕ ರೂಪದಲ್ಲಿ ದರ್ಶನ ಕೊಡುತ್ತಾನೆ. ಭಾರತದ ನಾಲ್ಕು ದಿಕ್ಕಿನಲ್ಲಿರುವ 12 ಜ್ಯೋರ್ತಿಲಿಂಗಳು ಮತ್ತು 5 ಪಂಚಮಹಾಭೂತ ಲಿಂಗಗಳು ಮೋಕ್ಷವನ್ನು ಪ್ರಸಾದಿಸುತ್ತದೆಂದು ಹೇಳಲಾಗುತ್ತದೆ.

ಸಾವಿರಾರು ಲಿಂಗಗಳಲ್ಲಿ 12 ಜ್ಯೋರ್ತಿಲಿಂಗಗಳಿಗೆ ಪ್ರತ್ಯೇಕವಾಗಿ ಸ್ಥಾನ ಕಲ್ಪಿಸಲಾಗಿದೆ. ಭಾರತ ದೇಶಕ್ಕೆ ಪಾವಿತ್ರತೆ ಬರುವುದಕ್ಕೆ ಮತ್ತು ಜನರಲ್ಲಿ ಆಧ್ಯಾತ್ಮಿಕ ಚಿಂತನೆ ಬರಬೇಕಾದರೆ ಈ ಜೋತಿರ್ಲಿಂಗಗಳೇ ಕಾರಣ. ಈ 12 ಜ್ಯೋತಿರ್ಲಿಂಗಗಳು ದೇಶಾದ್ಯಂತ ವಿಸ್ತರಿಸಿದ್ದು, ಒಂದೊಂದಕ್ಕೆ ಒಂದೊಂದು ಪ್ರತ್ಯೇಕತೆ ಇದೆ. ಇವುಗಳಲ್ಲಿ ರಾಮೇಶ್ವರ ಮತ್ತು ಸೋಮನಾಥೇಶ್ವರ ಜ್ಯೋತಿರ್ಲಿಂಗಗಳನ್ನು ಬಿಟ್ಟು ಉಳಿದ 10 ಲಿಂಗಗಳಿಗೆ ಭಕ್ತರು ಸ್ವತಃ ತಾವೇ ಅಭಿಷೇಕ ಪೂಜೆಯನ್ನು ಸಲ್ಲಿಸಬಹುದು.



## ಶ್ರೀಸೋಮನಾಥ ಜ್ಯೋತಿರ್ಲಿಂಗ



ಇದೊಂದು ಪ್ರಾಚೀನ ಶೈವ ಕ್ಷೇತ್ರ. 12 ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದಾಗಿ ವರ್ಣಿಸಲಾಗಿರುವ ಈ ಜ್ಯೋತಿರ್ಲಿಂಗ ಚಂದ್ರನಿಂದ ಪ್ರತಿಷ್ಠಾಪಿಸಲ್ಪಟ್ಟಿತೆಂದು ಹೇಳುತ್ತಾರೆ. ಇದು ಹಿಂದಿನ ಕಾಲದಲ್ಲಿ ಸೌರಾಷ್ಟ್ರವೆಂದು ಹೇಳಲಾಗಿದ್ದ ಇಂದಿನ ಗುಜರಾತ್ ರಾಜ್ಯದ ಶ್ರೀ ಕೃಷ್ಣನ ನಿರ್ವಾಣ ಸ್ಥಳವಾದ ಪ್ರಭಾಸ ಪಟ್ಟಣಕ್ಕೆ 40 ಕಿ.ಮೀ ದೂರದ ಸಮುದ್ರ ದಂಡೆಯಲ್ಲಿದೆ.

ಇದು ಬಹಳ ಪುರಾತನ ಇತಿಹಾಸವುಳ್ಳ ಮತ್ತು ಶ್ರೀಮಂತವಾದ ದೇವಾಲಯ. ವಿಶಾಲವಾದ ಆವರಣದಲ್ಲಿ 56 ಕಂಬಗಳ ಮೇಲೆ ರಚನೆಯಾಗಿರುವ ಈ ದೇವಾಲಯವು ಅದ್ಭುತ ವಾಸ್ತು ಶಿಲ್ಪ ಕೆತ್ತನೆಯನ್ನು ಹೊಂದಿದೆ. ಇದನ್ನು ಹೊಸದಾಗಿ ಜೀರ್ಣೋದ್ಧಾರ ಮಾಡಲಾಗಿದೆ. ಪ್ರಾಚೀನ ಕಾಲದಲ್ಲಿ ಈ ದೇವಾಲಯದ ಕಂಬಗಳ ಮೇಲೆ ಮುತ್ತುರತ್ನಗಳನ್ನು ಕೂರಿಸಿದ್ದರೆಂದೂ ಇಡೀ ಮಂದಿರ ಬೆಳ್ಳಿ ಬಂಗಾರದಿಂದ ಶೋಭಿಸುತ್ತಿತೆಂದೂ, ಬಂಗಾರದ ಕಳಸವಿತ್ತೆಂದೂ ಹೇಳುತ್ತಾರೆ. ಈ ದೇವಾಲಯದ ಮೇಲೆ ಅನೇಕ ಬಾರಿ ಅನ್ಯ ಮತೀಯರು ಧಾಳಿ ನಡೆಸಿ ಐಶ್ವರ್ಯವನ್ನೆಲ್ಲಾ ಕೊಳ್ಳೆ ಹೊಡೆದಿದ್ದಾರೆಂದು ಇತಿಹಾಸ ಹೇಳುತ್ತದೆ.

ಚಾಲುಕ್ಯ ಶೈಲಿಯಲ್ಲಿರುವ ದೇವಾಲಯದ ಶಿಖರ 150 ಅಡಿ ಎತ್ತರವಿದೆ. ಅದಕ್ಕೆ 27 ಅಡಿ ಎತ್ತರದ ಧ್ವಜ ಸ್ತಂಭವನ್ನು ಹಾಕಲಾಗಿದೆ. ಗರ್ಭಗುಡಿಯಲ್ಲಿರುವ 7–8 ಅಡಿ ಎತ್ತರವಿರುವ ಶ್ರೀ ಸೋಮನಾಥ ಜ್ಯೋತಿರ್ಲಿಂಗ ಭವ್ಯವಾಗಿದೆ. ಇಲ್ಲಿ ಪೂಜಾ ಸಾಮಗ್ರಿಗಳನ್ನು ಕೊಟ್ಟರೆ ಅರ್ಚಕರೇ ಪೂಜೆಮಾಡಿ ಕೊಡುತ್ತಾರೆ.

## ಶ್ರೀ ಮಲ್ಲಿಕಾರ್ಜುನ ಜ್ಯೋತಿರ್ಲಿಂಗ



12 ಜ್ಯೋತಿರ್ಲಿಂಗಗಳಲ್ಲಿ 2ನೇದಾಗಿರುವ ಶ್ರೀ ಮಲ್ಲಿಕಾರ್ಜುನ ಜ್ಯೋತಿರ್ಲಿಂಗವು ಆಂಧ್ರ ಪ್ರದೇಶದ ಶ್ರೀಶೈಲದಲ್ಲಿದೆ. ಇದು ಕರ್ನೂಲು ಜಿಲ್ಲೆಯ ಆತ್ಮಕೂರ ತಾಲೂಕಿನ ನಲ್ಲಮಲ ಅಥವಾ ದ್ರೋಣಾಚಲ ಬೆಟ್ಟಗಳ ಸಾಲಿನಲ್ಲಿರುವ ಶ್ರೀಶೈಲ ಎಂಬ ಬೆಟ್ಟದ ಮೇಲಿದೆ. ಇದನ್ನು ದಕ್ಷಿಣದ ಕೈಲಾಸವೆಂದು ಕರೆಯುತ್ತಾರೆ. ಇದು ಶೈವರಿಗೂ ಕನ್ನಡನಾಡಿನ ವೀರಶೈವರಿಗೂ ಮುಖ್ಯ ಯಾತ್ರಾ ಸ್ಥಳವಾಗಿದೆ.

ಮೊದಲನೆಯ ವಿಶಾಲವಾದ ಪ್ರಾಕಾರದ ಆಚೆಯ ಎರಡನೆಯ ಪ್ರಾಕಾರದ ಗರ್ಭಗುಡಿಯಲ್ಲಿ ಶ್ರೀ ಮಲ್ಲಿಕಾರ್ಜುನ ಜ್ಯೋತಿರ್ಲಿಂಗದ ದರ್ಶನವಾಗುತ್ತದೆ. ಲಿಂಗ ತುಂಬಾ ಚಿಕ್ಕದಾಗಿದ್ದು, 8–10 ಅಂಗುಲ ಎತ್ತರವಿದೆ. ಮಲ್ಲಿಕಾರ್ಜುನ ಮಂದಿರದ ಹಿಂಭಾಗದಲ್ಲಿ ಶ್ರೀ ಪಾರ್ವತಿ (ಶ್ರೀಭ್ರಮರಾಂಭ ದೇವಿ)ಮಂದಿರವಿದೆ. ಇಲ್ಲಿ ಪಾರ್ವತಿ ದೇವಿಗೆ ಮಲ್ಲಿಕಾದೇವಿ ಎಂದು ಹೆಸರಿದೆ. ಶಿವನಿಗೆ ಇಲ್ಲಿ ಅರ್ಜುನ ಎಂದೂ ಹೇಳುತ್ತಾರೆ. ಈ ಶಿವ ಮತ್ತು ಮಲ್ಲಿಕಾ (ಪಾರ್ವತಿ) ಹೆಸರುಗಳು ಸೇರಿ ಶಿವನಿಗೆ ಮಲ್ಲಿಕಾರ್ಜುನ ಎಂದು ಜ್ಯೋತಿರ್ಲಿಂಗಕ್ಕೆ ಹೆಸರು ಬಂದಿದೆ. ಮಂದಿರದ ಎದುರು ದೊಡ್ಡದಾದ ನಂದಿ ವಿಗ್ರಹವಿದೆ. ಶಿವರಾತ್ರಿಯ ದಿನ ಇಲ್ಲಿ ಬಹಳ ಜನ ಸೇರುತ್ತಾರೆ. ಆಗ ಶಿವ ಪಾರ್ವತಿಯರ ವಿವಾಹ ಮಹೋತ್ಸವ ನಡೆಯುತ್ತದೆ. ಶ್ರೀ ಮಲ್ಲಿಕಾರ್ಜುನನ ದರ್ಶನದಿಂದ ಸಕಲ ಪಾಪವೂ ಪರಿಹಾರವಾಗಿ ಮುಕ್ತಿ ದೊರೆಯುವುದೆಂಬ ನಂಬಿಕೆ ಇದೆ.

ಕನ್ನಡನಾಡಿನ ಶಿವ ಭಕ್ತೆಯೂ ಶರಣಳೂ, ವಚನಕಾರ್ತಿಯೂ ಆದ ಉಡುತಡಿಯ ಅಕ್ಕ ಮಹಾದೇವಿ ಸರ್ವಸಂಗ ಪರಿತ್ಯಾಗಿಯಾಗಿ ಚೆನ್ನಮಲ್ಲಿಕಾರ್ಜುನನನ್ನೇ ತನ್ನ ಪತಿಯೆಂದು ಅವನನ್ನು ಅರಸುತ್ತಾ ಶ್ರೀಶೈಲಕ್ಕೆ ಬಂದು ಅಲ್ಲಿನ ಕದಳೀವನದಲ್ಲಿ ಶಿವನಲ್ಲಿ ಐಕ್ಯವಾದಳು ಎಂದು ಇತಿಹಾಸ ಹೇಳುತ್ತದೆ. ಸ್ವಲ್ಪ ದೂರದಲ್ಲಿ ಅಕ್ಕಮಹಾದೇವಿಯ ಗುಹೆಯೂ ಇದೆ. ಅಲ್ಲಿಗೆ ಹೋಗಲು ಸರ್ಕಾರದವರು (ಪ್ರವಾಸ ಇಲಾಖೆಯವರು) ಬೋಟಿನ ವ್ಯವಸ್ಥೆಯನ್ನೂ ಮಾಡಿದ್ದಾರೆ.

## ಶ್ರೀ ಮಹಾಕಾಳೇಶ್ವರ ಜ್ಯೋತಿರ್ಲಿಂಗ



ಶ್ರೀ ಮಹಾಕಾಳೇಶ್ವರ ಜ್ಯೋತಿರ್ಲಿಂಗವು ಮಧ್ಯಪ್ರದೇಶದ ಉಜ್ಜಯಿನಿ ಜಿಲ್ಲೆಯಲ್ಲಿದೆ. ಉಜ್ಜಯನಿ ಐತಿಹಾಸಿಕ ಮಹತ್ವ ಉಳ್ಳ ನಗರ. ಅದು ಕ್ಷಿಪ್ರಾನದಿಯ ದಡದ ಮೇಲಿದೆ. ಪುರಾಣಗಳಲ್ಲಿ ಹೇಳಲಾಗುವ ಶ್ರೀಕೃಷ್ಣ ವಿದ್ಯಾಭ್ಯಾಸ ಮಾಡಿದ ಸಾಂಧೀಪಮುನಿಯ ಆಶ್ರಮ ಇಲ್ಲಿದೆ. ಶ್ರೀ ಮಹಾಕಾಳೇಶ್ವರ ಜ್ಯೋತಿರ್ಲಿಂಗ ದೇವಾಲಯವು ವಿಶಾಲವಾದ ಆವರಣದಲ್ಲಿದೆ.

ಮಂದಿರದ ಒಳಗಡೆ ಸ್ವಲ್ಪ ದೂರ ನಡೆದು ಸಣ್ಣ ಮೆಟ್ಟಿಲುಗಳನ್ನು ಇಳಿದು ಗರ್ಭಗುಡಿಯನ್ನು ಪ್ರವೇಶಿಸಬೇಕು. ಗರ್ಭಗುಡಿ ಬಹಳ ಚಿಕ್ಕದಾಗಿದ್ದು, ಶ್ರೀ ಮಹಾಕಾಳೇಶ್ವರ ಜ್ಯೋತಿರ್ಲಿಂಗವು ಸಹಾ ಚಿಕ್ಕದಾಗಿದೆ. ಇಲ್ಲಿ ಸ್ವತಃ ನಾವೇ ಅಭಿಷೇಕ ಮಾಡಿ ಪೂಜೆ ಮಾಡಬಹುದು. ಶಿವಲಿಂಗವನ್ನು ಸ್ಪರ್ಶಿಸಿ ಪುಣ್ಯವನ್ನು ಪಡೆಯಬಹುದು. ಶ್ರೀ ಮಹಾಕಾಳೇಶ್ವರ ಜ್ಯೋತಿರ್ಲಿಂಗದ ದರ್ಶನದಿಂದ ಅಕಾಲ ಮೃತ್ಯು, ಮತ್ತು ಭಯದಿಂದ ಮುಕ್ತಿ ದೊರಕುವುದೆಂಬುದು ಭಕ್ತರ ನಂಬುಗೆ. ಹರಿದ್ವಾರ, ಪ್ರಯಾಗ, ನಾಸಿಕದಂತೆ ಇಲ್ಲಿಯೂ ಹನ್ನೆರಡು ವರ್ಷಕ್ಕೊಮ್ಮೆ ಕುಂಭಮೇಳ ನಡೆಯುತ್ತದೆ.

## ಶ್ರೀ ಓಂಕಾರೇಶ್ವರ ಜ್ಯೋತಿರ್ಲಿಂಗ

ಓಂಕಾರೇಶ್ವರ ಇಂದೂರಿನಿಂದ 77 ಕಿ.ಮೀ ಮತ್ತು ಉಜ್ಜಯಿನಿಗೆ 133 ಕಿ.ಮೀ. ದೂರದಲ್ಲಿದೆ. ಶ್ರೀ ಓಂಕಾರೇಶ್ವರ ಜ್ಯೋತಿರ್ಲಿಂಗ ದೇವಾಲಯ ಮಧ್ಯ ಪ್ರದೇಶದಲ್ಲಿ ನರ್ಮದಾ ನದಿಯ ದಡದ ಹತ್ತಿರದ ದ್ವೀಪದ ಮೇಲಿದೆ. ಮಾಂಧಾತ ಅಥವಾ ಶಿವಪುರಿ ಎಂದು ಕರೆಯಲ್ಪಡುವ ಈ ದ್ವೀಪವು ಓಂ (ಸಂಸ್ಕೃತ) ಕಾರದ





Download From : www.kpscvaani.com

ರೂಪದಲ್ಲಿರುವುದರಿಂದ ಈ ಹೆಸರು ಬಂದಿದೆ. ದೇವಾಲಯ ಭವ್ಯವಾದ ಗೋಪುರ ಹೊಂದಿದೆ. ಪುಟ್ಟದಾದ ಶ್ರೀ ಓಂಕಾರೇಶ್ವರ ಜ್ಯೋತಿರ್ಲಿಂಗಕ್ಕೆ ಭಕ್ತರು ಸ್ವತಃ ಪೂಜೆಮಾಡಿ ಸಂತೋಷ ಪಡಬಹುದು. ಪೂಜಾಸಂಕಲ್ಪ ಮತ್ತು ವಿಶೇಷ ಪೂಜೆ ಮಾಡಿಸಲು ಅರ್ಚಕರು ಕೂಡ ಇದ್ದಾರೆ. ವಿಶೇಷವೆಂದರೆ ಇಲ್ಲಿ ಓಂಕಾರೇಶ್ವರನಿಗೆ ಬಿಲ್ವ ಪತ್ರದ ಜೊತೆ ತುಳಸಿಯನ್ನೂ ಅರ್ಪಿಸುತ್ತಾರೆ.

ಲಿಂಗದ ಹಿಂಭಾಗದಲ್ಲಿ ಪ್ರತ್ಯೇಕವಾಗಿ ಪಾರ್ವತಿಯ ಶ್ವೇತವರ್ಣದ ಮೂರ್ತಿ ಇದೆ. ರಾತ್ರಿ ಆದ ಮೇಲೆ ಪಾರ್ವತಿ ಪರಮೇಶ್ವರರಿಗಾಗಿ ಶಯನ ಸಿದ್ಧಪಡಿಸಿ, ಪಕ್ಕದಲ್ಲಿ ಪಗಡೆ ಮಣೆ ಇಟ್ಟಿರುತ್ತಾರೆ. ಪ್ರತಿ ರಾತ್ರಿ ಶಿವ ಪಾರ್ವತಿಯರು ಆಗಮಿಸಿ ವಿಶ್ರಾಂತಿ ಪಡೆದು ಪಗಡೆಯಾಡುತ್ತಾರೆ ಎಂದು ಭಕ್ತರ ನಂಬುಗೆ. ಭಕ್ತರು ಇಲ್ಲಿ ಬಂದು ಮನೋ ನಿವೇದನೆ ಮಾಡಿಕೊಂಡರೆ ಅವರ ಎಲ್ಲಾ ಮನೋಕಾಮನೆಗಳು ಈಡೇರುತ್ತವೆ ಎಂದು ಹೇಳುತ್ತಾರೆ.

ಓಂಕಾರೇಶ್ವರನಿಗೆ ರಾತ್ರಿ ನಡೆಯುವ ದೀಪಾರತಿ ನೋಡಲು ಚೆನ್ನಾಗಿರುತ್ತದೆ. ಎಲೆಗಳನ್ನು ಬಟ್ಟಲಿನಂತೆ ಮಡಚಿ, ಮಧ್ಯದಲ್ಲಿ ಎಣ್ಣೆ ಬತ್ತಿ ಇಟ್ಟು ದೀಪ ಹಚ್ಚಿ ನದಿಯಲ್ಲಿ ತೇಲಿಬಿಡುತ್ತಾರೆ. ಸಾವಿರಾರು ಸಂಖ್ಯೆಯಲ್ಲಿ ನದಿಯಲ್ಲಿ ತೇಲುತ್ತಾ ಹೋಗುವ ದೀಪಗಳನ್ನು ನೋಡುವುದು ಒಂದು ಅವಿಸ್ಮರಣೀಯ ದೃಶ್ಯ.

### ಶ್ರೀ ವೈದ್ಯನಾಥ ಜ್ಯೋತಿರ್ಲಿಂಗ



ಶ್ರೀ ವೈದ್ಯನಾಥೇಶ್ವರ ಸ್ವಾಮಿ ಜ್ಯೋತಿರ್ಲಿಂಗವು ಜಾರ್ಖಂಡ್‌ನ ಸಂಥಾಲ್ ಜಿಲ್ಲೆಯಲ್ಲಿದೆ. ಭಸ್ಮಧಾರಿ ಪರಶಿವ ಸಾಮಾನ್ಯವಾಗಿ ರುದ್ರಭೂಮಿಯಲ್ಲಿ ಇರುವುದಾಗಿ ಪುರಾಣಗಳು ಹೇಳುತ್ತವೆ. ಇಲ್ಲಿ ಅದನ್ನು ಕಾಣಬಹುದು. ಶ್ರೀ ವೈದ್ಯನಾಥೇಶ್ವರ ಸ್ವಾಮಿ ಕ್ಷೇತ್ರವು ಚಿತಾ ಭೂಮಿಯಲ್ಲಿದೆ ಎಂದು ಹೇಳುತ್ತಾರೆ.

ಶ್ರೀ ವೈದ್ಯನಾಥೇಶ್ವರ ಸ್ವಾಮಿ ಜ್ಯೋತಿರ್ಲಿಂಗವನ್ನು ರಾವಣ ಕೈಲಾಸದಿಂದ ತಂದನೆಂದು ಪ್ರತೀತಿ ಇದೆ. ಕರ್ನಾಟಕ ರಾಜ್ಯದ ಶ್ರೀ ಗೋಕರ್ಣ ಕ್ಷೇತ್ರದ ಪುರಾಣದಂತೆ ಈ ಕಥೆ ತೋರುತ್ತದೆ. ಗರ್ಭಗುಡಿಯ ಒಳಗಿರುವ ಶ್ರೀ ವೈದ್ಯನಾಥೇಶ್ವರ ಸ್ವಾಮಿ ಜ್ಯೋತಿರ್ಲಿಂಗ ತುಂಬಾ ಚಿಕ್ಕದಾಗಿದೆ. ಪಾಣಿಪೀಠದ ಮಧ್ಯೆ ಕಪ್ಪದಾದ ಚಿಕ್ಕ ಲಿಂಗವನ್ನು ಕಾಣಬಹುದು. ಇಲ್ಲಿಯೂ ಕೂಡ ಭಕ್ತರೇ ಸ್ವತಃ ಅಭಿಷೇಕ ಮಾಡಿ ಪೂಜೆ ಮಾಡಬಹುದು. ಶ್ರೀ ವೈದ್ಯನಾಥ ಜ್ಯೋತಿರ್ಲಿಂಗ ದರ್ಶನದಿಂದ ಸಂಸಾರಿಕ ಕಷ್ಟ-ಕೋಟಲೆಗಳೆಲ್ಲಾ ತಪ್ಪಿ, ಮಾನಸಿಕ ಶಾಂತಿ ದೊರೆಯುವುದೆಂಬುದು ಭಕ್ತರ ನಂಬುಗೆ.

### ಶ್ರೀ ರಾಮೇಶ್ವರ ಜ್ಯೋತಿರ್ಲಿಂಗ

ಶ್ರೀ ರಾಮೇಶ್ವರ ದೇವಾಲಯವು ಭಾರತದಲ್ಲಿಯೇ ಅತಿದೊಡ್ಡ ದೇವಾಲಯವೆಂದು ಹೆಸರು ಪಡೆದಿದೆ. ತಮಿಳುನಾಡಿನ ದಕ್ಷಿಣ ಸಮುದ್ರ ತೀರದಲ್ಲಿರುವ ಈ ಕ್ಷೇತ್ರದ ಮಹತ್ವವನ್ನು ಸ್ಕಂದ ಪುರಾಣವು ಬಹಳಷ್ಟು ವರ್ಣಿಸಿದೆ.



ರಾಮೇಶ್ವರ ಸ್ವಾಮಿ ದೇವಾಲಯವು 1000 ಅಡಿ ಉದ್ದ 650 ಅಡಿಗಳ ಅಗಲ 150 ಅಡಿಗಳ ಎತ್ತರವಾಗಿದ್ದು, ಶಿಲ್ಪ ಕಲೆಗಳಿಂದ ಸುಂದರವಾಗಿದೆ. ಈ ಕ್ಷೇತ್ರದಲ್ಲಿ ನಂದೀಶ್ವರನ ಬೆಳ್ಳಿಯ ರಥ ಮತ್ತು ಬಂಗಾರದ ಗೋಪುರಗಳು ನೋಡಬೇಕಾದವುಗಳು. ಆಲಯವು 1200 ಸ್ತಂಭಗಳಿಂದ ಕೂಡಿದೆ.

ರಾಮನಾಥೇಶ್ವರನ ಮಂದಿರವನ್ನು ಪಾಂಡ್ಯ ರಾಜರು ನಿರ್ಮಿಸಿದರೆನ್ನುತ್ತಾರೆ. ಶ್ರೀ ರಾಮಚಂದ್ರ ಪ್ರಭು ರಾವಣನೊಡನೆ ಯುದ್ಧ ಮಾಡುವುದಕ್ಕಾಗಿ ಸೇತುವೆ ಕಟ್ಟುವ ಮೊದಲು ಶಿವನನ್ನು ಪೂಜಿಸಲು ಬಯಸಿದನು. ಆಂಜನೇಯನು ಲಿಂಗವನ್ನು ತರಲು ಕೈಲಾಸಕ್ಕೆ ಹೋದನಂತೆ. ಆಂಜನೇಯನು ಬರುವುದು ತಡವಾದ್ದರಿಂದ ಶ್ರೀರಾಮನು ಮರಳಿನಿಂದ ಲಿಂಗ ನಿರ್ಮಿಸಿ ಪೂಜೆ ಮಾಡಿದನಂತೆ. ಶ್ರೀರಾಮನಿಂದ ಪೂಜಿಸಲ್ಪಟ್ಟ ಲಿಂಗಕ್ಕೆ ರಾಮೇಶ್ವರ ಎಂದು ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಗರ್ಭಗುಡಿಯ ಎದುರಿಗೆ ಇರುವ ಸುಮಾರು 13 ಅಡಿ ಎತ್ತರ ಇರುವ ನಂದಿಯನ್ನು ನೋಡಲು ಬಹಳ ಸಂತೋಷವಾಗುತ್ತದೆ. ಮಂದಿರದ ನಾಲ್ಕು ದ್ವಾರಗಳ ಮೇಲೂ ಎತ್ತರವಾದ ಗೋಪುರಗಳಿವೆ.

ಪ್ರತಿದಿನ ಬೆಳಿಗ್ಗೆ 4 ಗಂಟೆಗೆ ಭಕ್ತರಿಗೆ ಸ್ಪಟಿಕದ ಲಿಂಗ ದರ್ಶನ ಸಿಗುತ್ತದೆ. ಗರ್ಭಗುಡಿಯಲ್ಲಿರುವ ಜ್ಯೋತಿರ್ಲಿಂಗಕ್ಕೆ ಅರ್ಚಕರೇ ಪೂಜೆ ಮಾಡಿ ಕೊಡುತ್ತಾರೆ. ರಾಮೇಶ್ವರಂನ ರಾಮನಾಥೇಶ್ವರ ಮತ್ತು ಕಾಶಿಯ ವಿಶ್ವನಾಥರನ್ನು ಜೀವನದಲ್ಲಿ ಒಮ್ಮೆಯಾದರೂ ದರ್ಶನ ಮಾಡಬೇಕೆಂದು ಹೇಳಲಾಗುತ್ತದೆ, ಇವೆರಡೂ ಹಿಂದುಗಳಿಗೆ ಅತಿ ಪವಿತ್ರ ಸ್ಥಳಗಳು.

### ಶ್ರೀ ನಾಗೇಶ್ವರ ಜ್ಯೋತಿರ್ಲಿಂಗ



ಶ್ರೀ ನಾಗೇಶ್ವರ ಜ್ಯೋತಿರ್ಲಿಂಗವು ಗುಜರಾತಿನ ದ್ವಾರಕೆಯ (ದಾರುಕಾ ವನದಲ್ಲಿ)ಗೋಮತಿಗೆ ಅರಬ್ಬಿ ಸಮುದ್ರದ ಸಂಗಮ ಸ್ಥಾನದ ನಾಗೇಶ್ವರ ಎಂಬ ಊರಿನಲ್ಲಿದೆ. ಒಂದು ಕಾಲಕ್ಕೆ ಶ್ರೀ ಕೃಷ್ಣನ ನಿವಾಸ ಸ್ಥಾನವಾದ ದ್ವಾರಕಾ ನಗರ ಈ ದಾರುಕಾ ವನದೊಳಗಿತ್ತು.

ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ನಾಗನಾಥ ಆಲಯವೇ ಅತಿ ಚಿಕ್ಕದು. ವಿವಿಧ ರೀತಿಯ ಕೆತ್ತನೆಯಿಂದ ಕೂಡಿರುವ ಈ ಮಂದಿರವು ನೋಡಲು ತುಂಬಾ ಸುಂದರವಾಗಿದೆ. ಶ್ರೀ ನಾಗೇಶ್ವರ ಜ್ಯೋತಿರ್ಲಿಂಗದ ದರ್ಶನದಿಂದ ಎಲ್ಲಾ ಅಭೀಷ್ಟಗಳೂ ಪೂರ್ಣಗೊಳ್ಳುತ್ತವೆ ಎಂದು ಭಕ್ತರು ನಂಬಿದ್ದಾರೆ.

ಶಿವ ಪುರಾಣದ ಇನ್ನೊಂದು ಕಥೆಯಂತೆ ಇಲ್ಲಿ ದಾರುಕಾವನವಿತ್ತು. ಚಿಕ್ಕ ಶರೀರದವರಾದ ವಾಲಿಖಿಲ್ಯ ಮುನಿಗಳು ಇಲ್ಲಿ ತಪಸ್ಸು ಮಾಡುತ್ತಿದ್ದರು. ಒಮ್ಮೆ ಶಿವನು ಸರ್ಪಗಳನ್ನು ಧರಿಸಿ ದಿಗಂಬರನಾಗಿ ಆ ವನದಲ್ಲಿ



ಸಂಚರಿಸಿದನು. ಅವನನ್ನು ನೋಡಿದ ಮುನಿಪತ್ನಿಯರು ಮೋಹಗೊಂಡು ಅವನ ಹಿಂದೆಯೇ ಹೋದರು. ಇದರಿಂದ ಕೋಪಗೊಂಡ ಮುನಿಗಳು ಶಿವನಿಗೆ ಅವನ ಲಿಂಗ ಉದುರಿ ಹೋಗಲಿ ಎಂದು ಶಾಪವಿತ್ತರು. ಹಾಗೆ ಆದಾಗ, ಜಗತ್ತೇ ನಡುಗಿ ಹೋಯಿತು. ಬ್ರಹ್ಮ ಮತ್ತು ವಿಷ್ಣು ಬಂದು ಶಿವನನ್ನು ಜಗತ್ತನ್ನು ಉಳಿಸಲು ಕೋರಿದರು. ಶಿವನು ಪುನಃ ಆ ಲಿಂಗವನ್ನು ಧರಿಸಿದನು. ನಾಗಧಾರನಾಗಿ ಬಂದ ಶಿವನು ನಾಗೇಶ್ವರನಾಗಿಯೂ ಪಾರ್ವತಿಯು ನಾಗೇಶ್ವರಿಯಾಗಿಯೂ ಅಲ್ಲಿ ನೆಲೆಸಿದರು ಎನ್ನಲಾಗುತ್ತದೆ.

### ಶ್ರೀ ವಿಶ್ವೇಶ್ವರ ಜ್ಯೋತಿರ್ಲಿಂಗ –ಕಾಶಿ



ವಿಶ್ವೇಶ್ವರ ಲಿಂಗವು ಪುರಾಣ ಪ್ರಸಿದ್ಧವಾದ ಕಾಶಿ ನಗರದಲ್ಲಿದೆ. ಕಾಶಿಯ ಶ್ರೀ ವಿಶ್ವೇಶ್ವರ ಲಿಂಗವು ಭಾರತದ ಪುಣ್ಯ ಕ್ಷೇತ್ರಗಳಲ್ಲಿ ಅತ್ಯಂತ ಪ್ರಾಚೀನ ಮತ್ತು ಶ್ರೀಮಂತವಾದುದು. ಹೇಗೆ ಇಲ್ಲಿಯ ಕಾಶಿವಿಶ್ವನಾಥ ಜ್ಯೋತಿರ್ಲಿಂಗ ಪ್ರಸಿದ್ಧವೋ ಹಾಗೇ ಕಾಶಿಯು ಭಾರತ ಸಂಸ್ಕೃತಿಯ ಪ್ರತೀಕವೂ ಆಗಿದೆ.

ಮೋಕ್ಷದಾಯಕವಾದ 7 ಕ್ಷೇತ್ರದಲ್ಲಿ ಕಾಶಿ ಕ್ಷೇತ್ರ ಪ್ರಸಿದ್ಧಿ ಹೊಂದಿದೆ. ವೇದಗಳಲ್ಲಿ ಪುರಾಣಗಳಲ್ಲಿ ಕಾಶಿ ಕ್ಷೇತ್ರದ ಮಹಿಮೆ ಮಹತ್ವವಾಗಿ ವರ್ಣಿಸಲಾಗಿದೆ. ಪ್ರಳಯ ಕಾಲದಲ್ಲಿ ಪರಮೇಶ್ವರನು ಕಾಶಿನಗರವನ್ನು ತನ್ನ ತ್ರಿಶೂಲದ ಮೇಲೆ ನಿಲ್ಲಿಸಿದ್ದಾನೆಂದು ಹೇಳುತ್ತಾರೆ. ಈ ಕ್ಷೇತ್ರದಲ್ಲಿ ಮರಣಿಸಿದವರಿಗೆ ಕಾಶೀ ವಿಶ್ವೇಶ್ವರನು ಎಡ ಕಿವಿಯೊಳಗೆ ತಾರಕ ಮಂತ್ರವನ್ನು ಉಪದೇಶಿಸುತ್ತಾನೆಂದು ಪುರಾಣಗಳು ಹೇಳುತ್ತವೆ.

ದೇವಾಲಯದ ಆವರಣದಲ್ಲಿ ಒಂದು ಪುರಾತನ ವಟವೃಕ್ಷವಿದೆ. ಮನಸ್ಸಿನಲ್ಲಿ ಬೇಕಾದ ಕೋರಿಕೆಯನ್ನು ಸಂಕಲ್ಪಸಿಕೊಂಡು ಅದಕ್ಕೆ ದಾರ ಕಟ್ಟಿದರೆ ಆಸೆ ಕೈಗೂಡುವುದೆಂದು ಹೇಳುತ್ತಾರೆ. ಹಾಗಾಗಿ ಲಕ್ಷಾಂತರ ದಾರಗಳು ವೃಕ್ಷವನ್ನು ಸುತ್ತಿಕೊಂಡಿವೆ. ವಿಶ್ವನಾಥನ ದರ್ಶನ ಮಾಡಿದ ನಂತರ ತಾಯಿ ವಿಶಾಲಾಕ್ಷಿಯ ದರ್ಶನ ಮತ್ತು ಅನ್ನಪೂರ್ಣೇಶ್ವರಿ ಹಾಗೂ ಕಾಲಭೈರವನ ದರ್ಶನ ಮಾಡಲೇಬೇಕು. ಇಲ್ಲದಿದ್ದರೆ ವಿಶ್ವನಾಥನ ದರ್ಶನ ಮಾಡಿದ ಪುಣ್ಯ ಲಭಿಸುವುದಿಲ್ಲವೆಂಬ ನಂಬುಗೆ ಇದೆ.

### ಶ್ರೀ ಭೀಮಶಂಕರ ಜ್ಯೋತಿರ್ಲಿಂಗ



ಮಹಾರಾಷ್ಟ್ರದ ಪೂನಾದ ಬಳಿ ಸಹ್ಯಾ ಪರ್ವತದ ಶಿಖರದಲ್ಲಿ ಪರಮಶಿವನು ಭೀಮಶಂಕರ ಜ್ಯೋತಿರ್ಲಿಂಗವಾಗಿ ನೆಲೆಸಿದ್ದಾನೆ. ಭೀಮಾನದಿ ಇಲ್ಲಿಯೇ ಹುಟ್ಟಿದೆ. ಭೀಮಾಶಂಕರನು ಶಾಕಿನಿ, ಢಾಕಿನಿ ಮೊದಲಾದ ರಾಕ್ಷಸ ಸಮೂಹದಿಂದ ಪೂಜಿಸಲ್ಪಟ್ಟಿದ್ದಾನೆಂದು ಪುರಾಣ ವಚನ ಹೇಳಲಾಗಿದೆ.

ಭೀಮಾಶಂಕರ ದೇವಾಲಯವು ಪೂನಾದಿಂದ ಸರಿಸುಮಾರು 110 ಕಿಲೋಮೀಟರ್ ದೂರದಲ್ಲಿದೆ. ಭಗವಾನ್ ಶಂಕರ ಕೋಪೋದ್ರಿಕ್ತನಾದಾಗ, ರಾಕ್ಷಸ ತ್ರಿಪುರಾಸುರನನ್ನು ಸಂಹಾರ ಮಾಡಿದನೆಂದು ಹೇಳಲಾಗುತ್ತದೆ. ಇವರಿಬ್ಬರ ಕಾಳಗದಿಂದ ಉಂಟಾದ ಶಾಖವು ಭೀಮಾ ನದಿಯ ಹುಟ್ಟಿಗೆ ಕಾರಣವಾಯಿತು. ಇದೆ ಕಾರಣದಿಂದಾಗಿ ಇದನ್ನು ಭೀಮಾಶಂಕರ ಎಂದು ಕರೆಯಲಾಗುತ್ತದೆ.

18 ನೇ ಶತಮಾನದ ಮಧ್ಯಭಾಗದಲ್ಲಿ ನಿರ್ಮಿಸಲಾಗಿರುವ ಈ ದೇವಾಲಯವು ನಾಗರ ವಾಸ್ತು ಶೈಲಿಯಲ್ಲಿದೆ. ಜೊತೆಗೆ ಇದನ್ನು ನಾಗರ ವಾಸ್ತುಶೈಲಿಯಲ್ಲಿ ನಿರ್ಮಿಸಲಾಗಿದೆ. ದೇವಾಲಯದ ಗೋಪುರವನ್ನು ನಾನಾ ಫಡ್ನಾವಿಸ್ ನಿರ್ಮಿಸಿದ್ದಾರೆ. ಮರಾಠರ ನಾಯಕ ಶಿವಾಜಿ ಸಹ ಪೂಜಾ ಕೈಂಕರ್ಯಗಳು ಸುಲಭವಾಗಿ ನಡೆಸಲು ಅನುಕೂಲವಾಗುವಂತೆ ದೇವಾಲಯಕ್ಕೆ ದತ್ತಿಯನ್ನು ನೀಡಿದನೆಂದು ಹೇಳಲಾಗುತ್ತದೆ.

### ಶ್ರೀ ತ್ರ್ಯಂಭಕೇಶ್ವರ ಜ್ಯೋತಿರ್ಲಿಂಗ



ಶ್ರೀ ತ್ರ್ಯಂಭಕೇಶ್ವರ ಜ್ಯೋತಿರ್ಲಿಂಗವು ಮಹಾರಾಷ್ಟ್ರದ ನಾಸಿಕ ನಗರದಿಂದ 28 ಕಿ.ಮೀಟರ್ ದೂರದಲ್ಲಿ ಗೋದಾವರಿ ನದಿಯ ಉಗಮದ ಹತ್ತಿರವಿದೆ. ತ್ರ್ಯಂಭಕೇಶ್ವರದ ವೈಶಿಷ್ಟ್ಯವೆಂದರೆ ಇಲ್ಲಿನ ಜ್ಯೋತಿರ್ಲಿಂಗವು ಮೂರು ಮುಖಗಳನ್ನು ಹೊಂದಿದ್ದು ಈ ಮುಖಗಳು ಬ್ರಹ್ಮ, ವಿಷ್ಣು ಮತ್ತು ಶಿವನ ಪ್ರತೀಕವಾಗಿವೆ. ಭಾರತದ ಉಳಿದ ಹನ್ನೊಂದು ಜ್ಯೋತಿರ್ಲಿಂಗಗಳೆಲ್ಲವೂ ಶಿವಪ್ರಧಾನವಾಗಿವೆ. ಬ್ರಹ್ಮಗಿರಿ ಬೆಟ್ಟಗಳ ತಪ್ಪಲಿನಲ್ಲಿರುವ ತ್ರ್ಯಂಭಕೇಶ್ವರ ದೇವಾಲಯವು ಕರಿಕಲ್ಲಿನಿಂದ ಕಟ್ಟಲ್ಪಟ್ಟದ್ದು ಸುಂದರ ವಾಸ್ತುಶಿಲ್ಪಕ್ಕೆ ಹೆಸರಾಗಿದೆ.

ಶ್ರೀ ತ್ರ್ಯಂಭಕೇಶ್ವರ ಜ್ಯೋತಿರ್ಲಿಂಗ ದೇವಾಲಯದ ಪ್ರಾಂಗಣ ಬಹಳ ವಿಶಾಲವಾಗಿದೆ. ಒಂದೇ ಪೀಠದ ಮೇಲೆ ಮೂರು ಸಣ್ಣ ಸಣ್ಣ ಲಿಂಗಗಳಿವೆ. ಅವನ್ನು ಬ್ರಹ್ಮ ವಿಷ್ಣು ಮಹೇಶ್ವರ ರೂಪವೆಂದು ಹೇಳುತ್ತಾರೆ. ಗರ್ಭಗುಡಿಯೆದುರು ಗಣಪತಿಯ ಹಾಗೂ ಇತರೆ ವಿಗ್ರಹಗಳಿವೆ. ಮುಂದಿನ ಮಂಟಪದಲ್ಲಿ ಭವ್ಯವಾದ ನಂದಿಯ ದೊಡ್ಡ ವಿಗ್ರಹವಿದೆ. ಇಲ್ಲಿ ಶ್ರಾವಣ ಮಾಸ ಹಾಗೂ ಸೋಮವಾರದಂದು ವಿಶೇಷ ಪೂಜೆ ಇರುತ್ತವೆ. ದೇವಾಲಯದ ಆವರಣದಲ್ಲಿ ಸುಂದರವಾದ ಅಮೃತಕುಂಡವಿದೆ.

### ಶ್ರೀ ಕೇದಾರನಾಥ ಜ್ಯೋತಿರ್ಲಿಂಗ



ಕೇದಾರನಾಥ ಇದು ಹಿಂದುಗಳಿಗೆ ಪವಿತ್ರವಾದ ದೇವಾಲಯ. ಪುರಾಣಗಳ ಪ್ರಕಾರ, ಮಹಾಭಾರತ ಯುದ್ಧ ಮುಗಿಯುತ್ತಿದ್ದಂತೆ ತಮ್ಮದೇ ಕುಲದ ಜನರನ್ನು ಹತ್ಯೆ ಮಾಡಿದ



Download From : www.kpscvaani.com



ಪಾಪದ ಪ್ರಾಯಶ್ಚಿತ ಮಾಡಲು ವೇದವ್ಯಾಸರ ಆಜ್ಞೆಯಂತೆ ಪಾಂಡವರು ಇದೇ ಸ್ಥಳದಲ್ಲಿ ಶಿವನ ಉಪಾಸನೆ ಮಾಡಿದ್ದರು. ಹಿಮಾಲಯದಲ್ಲಿ ಕೇದಾರ ಶಿಖರದ ಮೇಲೆ ಮಂದಾಕಿನಿ ತೀರದಲ್ಲಿ ವಿರಾಜಿಸುವ ಜ್ಯೋತಿರ್ಲಿಂಗವೇ ಕೇದಾರನಾಥ ಲಿಂಗ. ಸ್ಕಂದ ಪುರಾಣದಲ್ಲಿ ಕೇದಾರೇಶ್ವರ ಜ್ಯೋತಿರ್ಲಿಂಗ ಮಹಿಮೆಯನ್ನು ಬಹಳ ವರ್ಣಿಸಲಾಗಿದೆ.

ಕೇದಾರನಾಥರ ಕ್ಷೇತ್ರ ಹರಿದ್ವಾರಕ್ಕೆ 240 ಕಿ.ಮೀಗಳು. ಋಷಿಕೇಶಕ್ಕೆ 211 ಕಿ.ಮೀ. ಕೇದಾರನಾಥ ಯಾತ್ರೆಯು 'ಗೌರಿಕುಂಡ'ವೆಂಬ ಪ್ರದೇಶದಿಂದ ಪ್ರಾರಂಭವಾಗುತ್ತದೆ. ಸಮತಟ್ಟಾದ ಪ್ರದೇಶವಾದ ಇಲ್ಲಿಂದ ಸುಮಾರು 18 ಕಿ.ಮೀ. ಕಾಲ್ನಡಿಗೆ, ಕುದುರೆ ಸವಾರಿ ಅಥವಾ ಡೋಲಿಯಲ್ಲಿ ಪಯಣಿಸಬೇಕು. ಸಮುದ್ರ ಮಟ್ಟಕ್ಕೆ ಸುಮಾರು 16000 ಅಡಿಗಳ ಎತ್ತರದಲ್ಲಿದೆ. ಇದು 12 ಜ್ಯೋತಿರ್ಲಿಂಗಗಳಲ್ಲಿ ಅತಿ ದೊಡ್ಡದಾದ ಲಿಂಗವಾಗಿದೆ. ಗರ್ಭಗುಡಿಯಲ್ಲಿರುವ ಕೇದಾರಲಿಂಗವು ಡುಬ್ಬಾಕಾರದಲ್ಲಿದೆ. ಇಲ್ಲಿ ಜ್ಯೋತಿರ್ಲಿಂಗವನ್ನು ಮುಟ್ಟಿ ಪೂಜಿಸಲು ಅವಕಾಶವಿದೆ.

ಪೌರಾಣಿಕ ಹಿನ್ನಲೆಯಂತೆ ಕುರುಕ್ಷೇತ್ರ ಯುದ್ಧದಲ್ಲಿ ಕೌರವರನ್ನು ಕೊಂದು ಪಾಂಡವರು ತಮ್ಮ ಪಾಪ ಪರಿಹಾರಕ್ಕಾಗಿ ಈಶ್ವರನ ದರ್ಶನ ಪಡೆಯಲು ವಾರಣಾಸಿ ಕ್ಷೇತ್ರಕ್ಕೆ ಬರುತ್ತಾರೆ. ಅವರನ್ನು ಪರೀಕ್ಷಿಸಲು ಶಿವ ಗುಪ್ತಕಾಶಿಗೆ ನಂತರ ಕೇದಾರಕ್ಕೆ ಬರುತ್ತಾನೆ. ಇದನ್ನು ಅರಿತ ಪಾಂಡವರೂ ಕೇದಾರಕ್ಕೆ ಬರುತ್ತಾರೆ. ಶಿವನು ಅವರಿಗೆ ಕಾಣದಂತೆ ಎತ್ತಿನ ರೂಪ ತಾಳಿ ಮೇಯುತ್ತಿರುತ್ತಾನೆ. ಇದನ್ನು ಗ್ರಹಿಸಿದ ಭೀಮನು ಶಿವನ ದರ್ಶನ ಪಡೆದೇ ತೀರುವ ಛಲದಿಂದ ಎರಡು ಪರ್ವತಗಳ ನಡುವೆ ಒಂದೊಂದು ಕಾಲಿಟ್ಟು ಹಸುಗಳು ಹೋಗುವ ದಾರಿಯಲ್ಲಿ ನಿಂತು ಬಿಡುತ್ತಾನೆ. ಎಲ್ಲಾ ಜಾನುವಾರುಗಳು ಅವನ ಕಾಲಿನಡಿ ನುಸುಳಿ ಹೋಗುತ್ತವೆ. ಆದರೆ ಒಂದು ಎತ್ತು ಮಾತ್ರ ಹಾಗೇ ಹೋಗದೆ ನಿಂತು ಬಿಡುತ್ತದೆ. ಇದನ್ನು ಗಮನಿಸಿದ ಭೀಮ ಈತನೇ ಶಂಕರನೆಂದು ಖಚಿತವಾಗಿ ತಿಳಿದು ಅದನ್ನು ಹಿಡಿಯುತ್ತಾನೆ. ತಪ್ಪಿಸಿಕೊಳ್ಳುವ ಸಲುವಾಗಿ ಎತ್ತು ನೆಲದಲ್ಲಿ ಇಳಿದು ಬಿಡುತ್ತದೆ. ಆಗ ಎತ್ತಿನ ಡುಬ್ಬ ಮಾತ್ರ ಕೈಗೆ ಸಿಕ್ಕಿ ಅದನ್ನೇ ಹಿಡಿದು ಮೇಲಕ್ಕೆತ್ತುತ್ತಾನೆ. ಎತ್ತಿನ ಡುಬ್ಬ ಮಾತ್ರ ಕೇದಾರನಾಥದಲ್ಲಿ ಉಳಿದು ಬಿಡುತ್ತದೆ. ಇದೇ ಕೇದಾರಲಿಂಗ.

### ಶ್ರೀ ಘೃಷ್ಮೇಶ್ವರ ಜ್ಯೋತಿರ್ಲಿಂಗ



ದಕ್ಷಿಣ ಭಾರತದ ಜ್ಯೋತಿರ್ಲಿಂಗದೊಳಗೆ ಒಂದಾದ ಘೃಷ್ಮೇಶ್ವರ ಲಿಂಗ ಮಹಾರಾಷ್ಟದ ಔರಂಗಾಬಾದಿಗೆ 4 ಕೀ.ಮೀ ಸಮೀದಲ್ಲಿದೆ, ಈ ಜ್ಯೋತಿರ್ಲಿಂಗ "ಸರ್ಪವೇದಿ" ಲಿಂಗ. ಸಂತಾನ ಇಲ್ಲದವರು ಈ ಸ್ವಾಮಿಯನ್ನು ಪೂಜಿಸಿ ಸಂತಾನವನ್ನು ಹೊಂದುತ್ತಾರೆ. 18 ನೇ ಶತಮಾನದಲ್ಲಿ ಕಟ್ಟಿರುವ ಈ ದೇವಾಲಯ ಬಹಳ ವಿಶಾಲವಾಗಿ ಭವ್ಯವಾಗಿದ್ದು, ಪುರಾತನ ಶೈಲಿಯ ಕೆತ್ತನೆಯಿಂದ ಕೂಡಿದೆ. ಪ್ರತಿಯೊಂದು ಕಲ್ಲೂ ಕೆತ್ತನೆಯಿಂದ ಕೂಡಿದೆ. ಆವರಣದಲ್ಲಿ ಸುಂದರವಾದ ಕೊಳವಿದೆ. ಕೆಂಪು ಕಲ್ಲಿನಿಂದ ನಿರ್ಮಿತವಾದ ಈ ದೇವಾಲಯವು ಐದು ಅಂತಸ್ತುಗಳುಳ್ಳ ಶಿಖರವನ್ನು ಹೊಂದಿದೆ. ದೇವಾಲಯದ ಒಳಗೆ ಒಂದು ಪವಿತ್ರ ಜಲದ ಚಿಲುಮೆ ಇದೆಯಂತೆ.

ವೆರೋಲದ ಪಾಳೇಗಾರ (ಪಟೇಲ) ಭೋಸಲೆ ಶಿವ ಭಕ್ತ. ಅವನು ಒಂದು ಹುತ್ತದಲ್ಲಿ ಸಿಕ್ಕ ನಿಧಿಯಿಂದ ಈ ಶಿವ ಮಂದಿರವನ್ನು ಜೀರ್ಣೋದ್ಧಾರ ಮಾಡಿದನು ಎಂದು ಹೇಳಲಾಗುತ್ತದೆ. ಮಂದಿರದಲ್ಲಿ ಅಂದವಾದ ತೈಲ ಚಿತ್ರಗಳೂ, ನಾನಾ ವಿಧದ ಮೂರ್ತಿಗಳೂ ಇವೆ. ಗರ್ಭಗುಡಿಯು ಪೂರ್ವಾಭಿಮುಖವಾಗಿದ್ದು, ದೇವಾಲಯದ ವಿಶಾಲ ಪ್ರಾಂಗಣದಲ್ಲಿ ಭವ್ಯವಾದ ನಂದಿಕೇಶ್ವರನನ್ನು ಪ್ರತಿಷ್ಠಾಪಿಸಲಾಗಿದೆ. ■





# ಮೀನುಗಾರಿಕೆಗೆ ಸಹಾಯಧನ: ಮೀನುಗಾರರಲ್ಲಿ ಹೊಸ ಆಶಾಕಿರಣ

ರಮ್ಯಾ ಜಿ. ಎಸ್.

**ಯಾಂತ್ರೀಕೃತ ಮೀನುಗಾರಿಕೆ ಆರಂಭಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ. ರಾಜ್ಯದ ಎಂಟು ಕರಾವಳಿ ತಾಲೂಕುಗಳಲ್ಲಿ 144 ಮೀನುಗಾರಿಕಾ ಹಳ್ಳಿಗಳಿವೆ. ಅಲ್ಲದೇ ಇತರ ಅನೇಕ ಒಳನಾಡು ಜಲಸಂಪನ್ಮೂಲಗಳ ಮೂಲಕ ಕೂಡ ಮೀನುಗಾರಿಕೆಗೆ ವಿಪುಲ ಅವಕಾಶವಿದೆ. ಸರ್ಕಾರದ ಸಹಾಯಧನದ ಪ್ರಯೋಜನ ಪಡೆದು ಮೀನುಗಾರರು ತಮ್ಮ ಬದುಕು ಹಸನಾಗಿಸಿಕೊಳ್ಳಬಹುದಾಗಿದೆ. ಆಯಾ ಜಿಲ್ಲೆಗಳ ಮೀನುಗಾರಿಕಾ ಇಲಾಖೆಯ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಹೆಚ್ಚಿನ ಮಾಹಿತಿ ಪಡೆದು ಸಂಪನ್ಮೂಲಗಳ ಸಮರ್ಥ ಬಳಕೆ ಮೂಲಕ ಮತ್ಸ್ಯೋದ್ಯಮ ಇನ್ನಷ್ಟು ಯಶ ಕಾಣಬಹುದಾಗಿದೆ.**

ಕೃಷಿಯಷ್ಟೇ ಮೀನುಗಾರಿಕೆ ವಲಯ ಕೂಡ ರಾಜ್ಯದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದೆ. ಅಲ್ಲದೇ ಭಾರತದ ಕಡಲ ಆಹಾರ ಉದ್ಯಮಕ್ಕೆ ಕರ್ನಾಟಕದ ಕೊಡುಗೆ ಅಪಾರ. ಮೀನುಗಾರಿಕೆ, ಕರಾವಳಿ ಜನರ ಜೀವನಾಡಿಯಾಗಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಾಸಿಸುವ ಬಹುತೇಕ ಜನರು ಮೀನುಗಾರಿಕೆಯನ್ನೇ ಕಸುಬಾಗಿಸಿಕೊಂಡಿದ್ದಾರೆ. ರಾಜ್ಯದಲ್ಲಿ 320 ಕಿಲೋಮೀಟರ್ ಉದ್ದದ ಕರಾವಳಿ ತೀರವಿದೆ. ಜೊತೆಗೆ 5.65 ಲಕ್ಷ ಹೆಕ್ಟೇರ್‌ನಷ್ಟು ವಿವಿಧ ಒಳನಾಡು ಜಲಸಂಪನ್ಮೂಲವಿದೆ. ಕರಾವಳಿಯಲ್ಲಿ ಸುಮಾರು 3.28 ಲಕ್ಷ ಹಾಗೂ ಒಳನಾಡಿನಲ್ಲಿ 6.33 ಲಕ್ಷ ಮೀನುಗಾರರು ವಿವಿಧ ಮೀನುಗಾರಿಕಾ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದಾರೆ.

ಹವಾಮಾನ ವೈಪರೀತ್ಯದಿಂದ ಕೇವಲ ರೈತರು ಮಾತ್ರ ಸಂಕಷ್ಟಕ್ಕೀಡಾಗುವುದಿಲ್ಲ. ಅದು ಮೀನುಗಾರರಿಗೂ ಸಂಕಷ್ಟ ತರಬಲ್ಲದು. ಸಮುದ್ರದ ವೈಪರೀತ್ಯ ಮೀನುಗಾರರನ್ನು ಅತಂತ್ರ ಸ್ಥಿತಿಗೆ ದೂಡಿದೆ. ಸಾಗರ ಪ್ರಕ್ಷುಬ್ಧತೆ ಸಂದರ್ಭಗಳಲ್ಲಿ ಮೀನುಗಾರಿಕೆಗಾಗಿ ನೀರಿಗಿಳಿಯದಂತೆ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡುತ್ತದೆ. ಹೀಗಾಗಿ ಅಂತಹ ಸಂದರ್ಭಗಳಲ್ಲಿ ಮೀನುಗಾರರಿಗೆ ಕೆಲಸವಿಲ್ಲದಂತಾಗಿ ಜೀವನ ನಿರ್ವಹಣೆ ದುಸ್ತರವಾಗುತ್ತದೆ. ಇನ್ನು ಕಡಲಕೊರೆತದಿಂದ ಮೀನಿನ ಅಭಾವ ಉಂಟಾದಾಗ ಕೂಡ ಮೀನುಗಾರರ ಜೀವನ ನಿರ್ವಹಣೆ ಬಾಧಿತವಾಗುತ್ತದೆ. ಕರಾವಳಿ ಬಿಟ್ಟು ಇತರೆಡೆ ಪ್ರವಾಹ, ಬರದಂತಹ ಪರಿಸ್ಥಿತಿಗಳಲ್ಲಿ ಮೀನುಗಾರರು ಸಂಕಷ್ಟ ಎದುರಿಸಬೇಕಾಗಬಹುದು. ಪ್ರತೀಕೂಲ ಹವಾಮಾನದ ಸಂದರ್ಭಗಳಲ್ಲಿ ಸರ್ಕಾರದ ಯೋಜನೆಗಳ ಮೂಲಕ ಜೀವನೋಪಾಯ ಕಂಡುಕೊಳ್ಳಬಹುದಾಗಿದೆ.

ಮೀನುಗಾರರ ಹಿತಕ್ಕಾಗಿ ರಾಜ್ಯ ಸರ್ಕಾರ ಕಡಲ ಮೀನುಗಾರಿಕೆ ನಿಯಮಗಳಿಗೆ ತಿದ್ದುಪಡಿ ತರಲು ಸಹ ನಿರ್ಧರಿಸಿದೆ. ಮಾಲಿನ್ಯ, ಪರಿಸರದ ಮೇಲಿನ ನಕಾರಾತ್ಮಕ ಪರಿಣಾಮ ಮೊದಲಾದ ಸಮಸ್ಯೆಗಳನ್ನು ಬಗೆಹರಿಸಿ ಜಲಸಂಪನ್ಮೂಲಗಳ ಹಾಗೂ ಜಲಚರಗಳ ರಕ್ಷಣೆಗೆ ನಿಯಮಾವಳಿಗಳಿಗೆ ಅಗತ್ಯ ತಿದ್ದುಪಡಿ ತರುವ ಉದ್ದೇಶ ಹೊಂದಲಾಗಿದೆ.

ಮೀನುಗಾರರ ಸಂಕಷ್ಟವನ್ನರಿತ ರಾಜ್ಯ ಸರ್ಕಾರ ಮೀನುಗಾರರ ಸಾಲ ಮನ್ನಾ ಮಾಡಲು ಮುಂದಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಮೀನುಗಾರರು ಸಹಕಾರಿ ಸಂಘಗಳಲ್ಲಿ ಪಡೆದ 50 ಸಾವಿರ ರೂ ವರೆಗಿನ ಸಾಲ ಮನ್ನಾಗೆ ಮೌಖಿಕವಾಗಿ ಆದೇಶ ನೀಡಲಾಗಿತ್ತು. ನಂತರ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೂಡಲೇ ಮೀನುಗಾರರು ಪಡೆದಿರುವ 50 ಸಾವಿರ ರೂ ವರೆಗಿನ ಸಾಲ ಮನ್ನಾಗೆ ವಿಧ್ಯುಕ್ತ ಘೋಷಣೆ ಮಾಡಿದರು.

ಮೀನುಗಾರಿಕಾ ಮತ್ತು ಪಶುಸಂಗೋಪನಾ ಇಲಾಖೆಯ



Download From : www.kpscvaani.com

ಪ್ರಧಾನ ಕಾರ್ಯದರ್ಶಿ ನೀಡಿರುವ ಆದೇಶದಲ್ಲಿ ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ಮೀನುಗಾರರು ಪಡೆದಿರುವ ಸಾಲ ಮನ್ನಾ ಮಾಡಲಾಗುವುದು ಎಂದಿತ್ತು. ಇದು ಮೀನುಗಾರರಲ್ಲಿ ಗೊಂದಲ ಮೂಡಿಸಿತ್ತು. ಬಹುತೇಕ ಮೀನುಗಾರರು ವಾಣಿಜ್ಯ ಹಾಗೂ ಪ್ರಾದೇಶಿಕ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದರು. ಇನ್ನು ಕೆಲವರು ಸರ್ಕಾರದಿಂದ ಶೇ 2 ಮತ್ತು ಶೂನ್ಯ ಬಡ್ಡಿ ದರದಲ್ಲಿ ಸಾಲ ಪಡೆದಿದ್ದರು. ಈ ಆದೇಶದಿಂದಾಗಿ ಇತರೆ ಸಾಲ ಮನ್ನಾ ಆಗುವುದಿಲ್ಲ ಎಂಬ ಆತಂಕ ಮೀನುಗಾರರಲ್ಲಿ ಮನೆ ಮಾಡಿತ್ತು. ಎಲ್ಲಾ ಬಗೆಯ ಸಾಲ ಮನ್ನಾ ಆಗಲಿದೆ ಎಂದು ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಾದ ಕೋಟಾ ಶ್ರೀನಿವಾಸ ಪೂಜಾರಿ ಭರವಸೆ ನೀಡಿದ ನಂತರ ಮೀನುಗಾರರ ಆತಂಕ ದೂರವಾಗಿದೆ.

**ಎಷ್ಟು ಸಾಲ ಮನ್ನಾ?**

ವಾಣಿಜ್ಯ, ಪ್ರಾದೇಶಿಕ, ಗ್ರಾಮೀಣ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ 2017–18 ಮತ್ತು 2018–19 ರಲ್ಲಿ ಪಡೆದ 50 ಸಾವಿರ ರೂ ವರೆಗಿನ ಸಾಲ ಮನ್ನಾ ಆಗಲಿದೆ. ಕರಾವಳಿಯ ಮೂರು ಜಿಲ್ಲೆಗಳ ಮೀನುಗಾರರ ಒಟ್ಟು 60 ಕೋಟಿ ರೂ ಸಾಲ ಮನ್ನಾ ಮಾಡಲಾಗಿದ್ದು 23,507 ಮೀನುಗಾರರಿಗೆ ಪ್ರಯೋಜನವಾಗಲಿದೆ.

**ಇತರ ನೆರವು**

- ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ಮೀನುಗಾರಿಕೆ ಇಲ್ಲದ ಅವಧಿಗೆ ಮೀನುಗಾರರಿಗೆ ಆರ್ಥಿಕ ನೆರವು
- ಸಂಕಷ್ಟ ಪರಿಹಾರ ನಿಧಿಯಡಿ ನೆರವು
- ಅರ್ಹ ಮೀನುಗಾರರಿಗೆ ಸಲಕರಣೆಗಳ ಕಿಟ್ ವಿತರಿಸುವ ಮೂಲಕ ಮೀನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ
- ಮೀನುಗಾರಿಕೆ ಮತ್ತು ಮೀನು ಮಾರಾಟ ಉಪಕರಣಗಳಿಗೆ ಸಹಾಯಧನ
- ಮತ್ಸ್ಯಾಶ್ರಯ ಯೋಜನೆಯಡಿ ವಸತಿರಹಿತ ಮೀನುಗಾರರಿಗೆ ಮನೆ

**ಪ್ರೋತ್ಸಾಹಕಗಳು**

ಕರಾವಳಿ ಮೀನುಗಾರರಿಗೆ ಮಾತ್ರವಲ್ಲದೇ ಇತರ ಒಳನಾಡು ಜಲಸಂಪನ್ಮೂಲಗಳ ಮೀನುಗಾರಿಕೆಗೂ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಮೀನು ಕೃಷಿ ಮೂಲಕ ಕಡಿಮೆ ಬಂಡವಾಳದೊಂದಿಗೆ ಉತ್ತಮ ಆದಾಯಗಳಿಸಲು ಸಾಧ್ಯವಿದೆ. 25 ಎಕರೆಗೂ ಕಡಿಮೆ ವಿಸ್ತೀರ್ಣ ಹೊಂದಿರುವ ಸಣ್ಣ ಕೆರೆಗಳಲ್ಲಿ ವಷವಿಡೀ ಕನಿಷ್ಠ 3 ಅಡಿ ನೀರಿರುವೆಡೆ ಮೀನು ಸಾಕಬಹುದಾಗಿದೆ. ಕೃಷಿ ಹೊಂಡಗಳು, ನಾಲಾ ಬದುಗಳು, ಸಂಗ್ರಹಣಾ ಕೊಳಗಳು, ಕುಂಟೆಗಳಲ್ಲಿ ಮೀನು ಸಾಕಣೆ ಮಾಡಲು ಅವಕಾಶವಿದೆ.

ಇನ್ನು ಮೀನು ಸಾಕಣೆಯಿಂದ ಅನೇಕ ಉದ್ಯಮಗಳು ಹುಟ್ಟಿಕೊಂಡಿವೆ. ಮೀನು ಸಾಕಣೆ, ಮೀನು ಆಹಾರೋತ್ಪನ್ನಗಳು ಮತ್ತು ಮಾರಾಟ ಕೇಂದ್ರ, ಮೀನಿನ ಶುದ್ಧೀಕರಣ ಹಾಗೂ ಶೀತಲೀಕರಣ, ರಫ್ತು ಉದ್ಯಮಗಳು ಮೀನುಗಾರಿಕೆಯಿಂದ ಸಾಧ್ಯವಾಗಿವೆ.

**ಮತ್ಸ್ಯ ಜೋಪಾಸನೆ ಯೋಜನೆ**

ಮೀನುಗಾರಿಕೆ ಆದಾಯ ಗಳಿಕೆಯ ಮಾರ್ಗ ಎಂಬುದೇನೋ ಸರಿ. ಆದರೆ ಮೀನಿನ ಸಂರಕ್ಷಣೆ ಸುಲಭವೇನಲ್ಲ. ಸಮುದ್ರದಿಂದ ತೆಗೆದ ಮೀನು ಹೆಚ್ಚು ದಿನ ಕೆಡದಂತೆ ಸಂರಕ್ಷಿಸಬೇಕಾಗಿದೆ ಕೂಡ. ಹೀಗಾಗಿ ಮೀನು ಹಾಳಾಗದಂತೆ ಸಂರಕ್ಷಿಸಿಡಲು ಮತ್ಸ್ಯ ಜೋಪಾಸನೆ ಯೋಜನೆಯಡಿ ಹತ್ತು ಶೀತಲೀಕರಣ ಘಟಕಗಳ ಸ್ಥಾಪನೆಗೆ ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಲಾಗಿದೆ.



ಪ್ರತೀಕೂಲ ಹವಾಮಾನದ ಸಂದರ್ಭಗಳಲ್ಲಿ ಮೀನುಗಾರಿಕೆ ಚಟುವಟಿಕೆಗಳು ಸ್ತಬ್ಧವಾದಾಗ ಶೀತಲೀಕರಣ ಘಟಕಗಳಲ್ಲಿ ಶೇಖರಿಸಿಟ್ಟ ಮೀನುಗಳೇ ಮಾರಾಟದ ಜೀವಾಳ. ಹೀಗಾಗಿ ಮತ್ಸ್ಯ ಸಂರಕ್ಷಣೆ ಅತಿ ಮುಖ್ಯವಾಗಿದೆ.

ಮೀನುಗಳ ಸಂರಕ್ಷಣೆಗಾಗಿ ಶೀತಲಾಗಾರ ಘಟಕಗಳ ನಿರ್ಮಾಣಕ್ಕೆ ನೆರವು ನೀಡುವುದರ ಜೊತೆಗೆ ಈ ಘಟಕಗಳ ವಿದ್ಯುತ್ ದರಕ್ಕೂ ಸಬ್ಸಿಡಿಯನ್ನು ನೀಡುವ ಮೂಲಕ ಮೀನುಗಾರರ ಹೊರೆ ಕಡಿಮೆ ಮಾಡಲಾಗಿದೆ.

**ನೀಲಿ ಕ್ರಾಂತಿ ಯೋಜನೆ**

ಮೀನುಗಾರರ ಆದಾಯ ದ್ವಿಗುಣಗೊಳಿಸುವ ಕೇಂದ್ರ ಸರ್ಕಾರದ ನೀಲಿ ಕ್ರಾಂತಿ ಯೋಜನೆಯಡಿ ಮೀನುಗಾರರಿಗೆ ಸಹಾಯಧನ ಸೌಲಭ್ಯ ನೀಡಲಾಗುತ್ತಿದೆ. ಈ ಯೋಜನೆ ಮೂಲಕ ಪರಿಸರ ಸಮಸ್ಯೆಗಳನ್ನು ನಿವಾರಿಸಿ ಜೈವಿಕ ಭದ್ರತೆ, ಸುಸ್ಥಿರತೆ ಖಾತ್ರಿಪಡಿಸುವ ಉದ್ದೇಶ ಹೊಂದಲಾಗಿದೆ.

ಸಾಂಪ್ರದಾಯಿಕ ದೋಣಿಗಳ ಮೋಟರೀಕರಣ, ಹಳೆಯ ಮರದ ದೋಣಿಗಳ ಬದಲಿಗೆ ಎಫ್ ಆರ್ ಪಿ ದೋಣಿಗಳ ನಿರ್ಮಾಣ, ಮೀನು ಮಾರಾಟಕ್ಕೆ ದ್ವಿಚಕ್ರ/ ತ್ರಿಚಕ್ರ ವಾಹನ ಖರೀದಿ ವೆಚ್ಚ, ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ ಹೀಗೆ ವಿವಿಧ ಚಟುವಟಿಕೆಗಳಿಗಾಗಿ ಈ ಯೋಜನೆಯಡಿ ಸಹಾಯಧನ ನೀಡಲಾಗುತ್ತದೆ.

**ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ**

ಮತ್ಸ್ಯೋದ್ಯಮದ ಆಡಳಿತ ನಿರ್ವಹಣಾ ಜಾಲದ ಅಭಿವೃದ್ಧಿಗಾಗಿ ಮೀನುಗಾರಿಕಾ ಇಲಾಖೆಯಡಿ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ ಜಾರಿ ಬಗ್ಗೆ 2019–20 ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಮೀನುಗಾರಿಕೆ ಮೂಲಸೌಕರ್ಯ ಅಭಿವೃದ್ಧಿ, ಉದ್ಯಮದ ಆಧುನೀಕರಣ, ಉತ್ಪಾದನೆ, ಗುಣಮಟ್ಟ ನಿಯಂತ್ರಣ ಮೊದಲಾದ ಕಾರ್ಯಗಳಿಗೆ ಈ ಯೋಜನೆ ನೆರವಾಗಲಿದೆ.

**ಇಲಾಖೆಯ ಪ್ರಮುಖ ಚಟುವಟಿಕೆಗಳು**

- ಮೀನು ಮರಿ ಉತ್ಪಾದನೆ ಮತ್ತು ಸರಬರಾಜು
- ಮೀನು ಕೊಳ ನಿರ್ಮಾಣಕ್ಕೆ ನೆರವು
- ಅಲಂಕಾರಿಕ ಮೀನುಗಾರಿಕೆ ಪ್ರೋತ್ಸಾಹಕ್ಕೆ ಅಕ್ವಾಪಾರ್ಕ್ ಸ್ಥಾಪನೆ
- ಮೀನುಗಾರಿಕೆ ದೋಣಿಗಳ ನೋಂದಣಿ
- ನಾಡದೋಣಿಗಳ ಮೋಟರೀಕರಣ
- ಶೀತಲಾಗಾರಗಳ ವಿದ್ಯುತ್ ಬಳಕೆಯ ಮೇಲೆ ಸಹಾಯಧನ
- ಗುಂಪು ಅಪಘಾತ ವಿಮಾ ಯೋಜನೆ

**ವಾಣಿಜ್ಯ, ಪ್ರಾದೇಶಿಕ, ಗ್ರಾಮೀಣ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ 2017–18 ಮತ್ತು 2018–19 ರಲ್ಲಿ ಪಡೆದ 50 ಸಾವಿರ ರೂ ವರೆಗಿನ ಸಾಲ ಮನ್ನಾ ಆಗಲಿದೆ. ಕರಾವಳಿಯ ಮೂರು ಜಿಲ್ಲೆಗಳ ಮೀನುಗಾರರ ಒಟ್ಟು 60 ಕೋಟಿ ರೂ ಸಾಲ ಮನ್ನಾ ಮಾಡಲಾಗಿದ್ದು 23,507 ಮೀನುಗಾರರಿಗೆ ಪ್ರಯೋಜನವಾಗಲಿದೆ.**

**ಮೀನು ಕೃಷಿಕರ ದಿನಾಚರಣೆ**

1957 ರ ಜುಲೈ 10 ರಂದು ಏಷ್ಯಾದಲ್ಲಿ ಪ್ರಪ್ರಥಮ ಬಾರಿಗೆ ನಿಂತ ನೀರಿನಲ್ಲಿ ಮೀನುಮರಿ ಸಂತಾನೋತ್ಪತ್ತಿ ಡಾ. ಹಿರಾಲಾಲ್ ಚೌಧರಿ ಮತ್ತು ಡಾ. ಆಲಿಕುನಿ ಮೀನುಗಾರಿಕಾ ವಿಜ್ಞಾನಿಗಳ ಪರಿಶ್ರಮದಿಂದ ಸಾಧ್ಯವಾಯಿತು. ಅಂದಿನಿಂದ ಭಾರತ, ವಿಶ್ವದಲ್ಲೇ ಅತಿ ಹೆಚ್ಚು ಮೀನು ಉತ್ಪಾದಿಸುವ ದೇಶವಾಗಿ ನೀಲಿ ಕ್ರಾಂತಿಗೆ ನಾಂದಿಯಾಯಿತು. ಇವರ ಸ್ಮರಣಾರ್ಥ ಪ್ರತಿ ವರ್ಷ ಜುಲೈ 10 ರಂದು ಮೀನು ಕೃಷಿಕರ ದಿನ ಆಚರಿಸಲಾಗುತ್ತದೆ.

ಪ್ರತಿ ವರ್ಷ ನವೆಂಬರ್ 21 ರಂದು ವಿಶ್ವ ಮೀನುಗಾರಿಕೆ ದಿನ ಆಚರಿಸುವ ಮೂಲಕ ಮೀನುಗಾರಿಕೆಯ ಮಹತ್ವ ಮತ್ತು ಅಗತ್ಯತೆ ಪ್ರಚುರಪಡಿಸಲಾಗುತ್ತಿದೆ.

ಋತುವಿಗೆ ತಕ್ಕಂತೆ ಯಾವ ರೀತಿಯ ಮೀನುಗಳು ಸಿಗುತ್ತವೆ ಎಂಬ ಅರಿವು ಹಿಂದಿನ ಪೀಳಿಗೆಗಿತ್ತು. ತಂತ್ರಜ್ಞಾನವಿಲ್ಲದ ಆಗಿನ ಕಾಲದಲ್ಲೂ ಮೀನನ್ನು ಹುಡುಕಿ ಬಲೆ ಬೀಸುವ ಚಾಕಚಕ್ಯತೆ ಇತ್ತು. ಇದೀಗ ಯಂತ್ರಚಾಲಿತ ದೋಣಿಗಳು ಕಡಲಿಗಿಳಿದು ಮೀನುಗಾರಿಕೆ ಉದ್ಯಮವಾಗಿ ಪರಿವರ್ತನೆಯಾಗಿದೆ. ಹಿಂದೆ ನಾಡದೋಣಿಗಳ ಮೂಲಕ ಸಮುದ್ರದಲ್ಲಿ ಕೇವಲ 10 ಮೈಲು ದೂರದಲ್ಲಿ ಮೀನುಗಾರಿಕೆ ಮಾಡಲಾಗುತ್ತಿತ್ತು. ಇದೀಗ ಮೋಟಾರು ದೋಣಿಗಳಿಂದಾಗಿ 150 – 200 ಮೈಲುಗಳ ದೂರ ಸಾಗಿ ಮೀನಿಗೆ ಬಲೆ ಬೀಸಬಹುದಾಗಿದೆ. ಇದು ಮತ್ಸ್ಯೋದ್ಯಮಕ್ಕೆ ಪೂರಕವಾಗಿದೆ.


ಹಡಗುಗಳ ಸಂಚಾರ ಹೆಚ್ಚಿದರೆ ಕೂಡ ಕಡಲಜೀವಿಗಳಿಗೆ ಅಪಾಯ. ಇದು ಮೀನುಗಾರಿಕೆ ಮೇಲೂ ದುಷ್ಪರಿಣಾಮ ಬೀರಬಲ್ಲದಾಗಿದೆ. ಹೀಗಾಗಿ ಸುರಕ್ಷತಾ ಕ್ರಮಗಳನ್ನಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ತೈಲ ಸಮುದ್ರಕ್ಕೆ ಸೋರದಂತೆ ಮುನ್ನೆಚ್ಚರಿಕೆ ವಹಿಸುವುದೂ ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡಾಗ ಮಾತ್ರ ಜಲ ಹಾಗೂ ಜಲಚರಗಳ ಹಿತರಕ್ಷಣೆಯೊಂದಿಗೆ ಲಾಭದಾಯಕ ಮೀನುಗಾರಿಕೆ ಸಾಧ್ಯ.

ಅರ್ಹ ಬಡ ಮೀನುಗಾರರು ಸರ್ಕಾರದಿಂದ ದೊರೆಯುವ ಧನಸಹಾಯ ಮತ್ತು ಸರ್ಕಾರ ಮತ್ತು ಮೀನುಗಾರಿಕಾ ಇಲಾಖೆಯ ಯೋಜನೆಗಳಡಿ ನೀಡಲಾಗುವ ಉಚಿತ ಜೀವರಕ್ಷಕ ಸಾಧನಗಳನ್ನು ಪಡೆದುಕೊಂಡು ಮೀನು ಕೃಷಿಯಲ್ಲಿ ತೊಡಗಿಸಿಕೊಳ್ಳುವ ಮೂಲಕ ತಮ್ಮ ಬದುಕನ್ನು ಹಸನಾಗಿಸಿಕೊಳ್ಳಬೇಕು. ಆಗ ಮಾತ್ರ ಸರ್ಕಾರದ ಸೌಲಭ್ಯಗಳ ಸದುಪಯೋಗದೊಂದಿಗೆ ಜಲಸಂಪನ್ಮೂಲಗಳ ಸಮರ್ಥ ಬಳಕೆ ಮೂಲಕ ಮೀನುಗಾರಿಕಾ ವಲಯದಲ್ಲಿ ಧನಾರ್ಜನೆ ಜೊತೆಗೆ ದೇಶದ ಪ್ರಗತಿಗೆ ಕೊಡುಗೆ ನೀಡಬಹುದಾಗಿದೆ.





Download From : www.kpscvaani.com



# ಕಾವ್ಯ ಲೋಕದ ತಪಸ್ವಿ: ಹೆಚ್.ಎಸ್. ವೆಂಕಟೇಶ್ ಮೂರ್ತಿ

**ಡಾ. ಹೆಚ್.ಎಸ್. ವೆಂಕಟೇಶ್ ಮೂರ್ತಿಯವರದು ಬಹುಮುಖ ಪ್ರತಿಭೆ. ಮೂಲಭೂತವಾಗಿ ಅವರು ಕವಿಯಾಗಿದ್ದರೂ ಸಹ ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ಕಾವ್ಯವಲ್ಲದೆ, ನಾಟಕ, ವಿಮರ್ಶೆ, ಕಥೆಗಳು, ಕಾದಂಬರಿ, ಮಕ್ಕಳ ಸಾಹಿತ್ಯ, ಕನ್ನಡದ ಸಿನಿಮಾಗಳಿಗೆ ಚಿತ್ರಕಥೆ, ಸಂಭಾಷಣೆ, ಹಾಡುಗಳನ್ನು ರಚಿಸಿದ್ದಾರೆ. ಜೊತೆಗೆ ಒಂದು ಸಿನಿಮಾವನ್ನು ನಿರ್ದೇಶನ ಮಾಡಿದ ಅನುಭವವೂ ಅವರದಾಗಿದೆ.**

ಡಾ॥ ಎನ್. ಜಗದೀಶ ಕೊಪ್ಪ


ಕಲಬುರಗಿ ನಗರದಲ್ಲಿ ನಡೆಯುವ ಎಂಬತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ನಾಡಿನ ಹಿರಿಯ ಕವಿ ಡಾ.ಎಚ್.ಎಸ್.ವೆಂಕಟೇಶ ಮೂರ್ತಿ ಅವರು ಆಯ್ಕೆಯಾಗಿದ್ದಾರೆ. ಮಾತಿಗಿಂತ ಹೆಚ್ಚಾಗಿ ಮೌನಕ್ಕೆ ಮತ್ತು ಕನ್ನಡದ ಕಾವ್ಯ ಪರಂಪರೆಗೆ ಹಾಗೂ ಅದರ ಶಬ್ದ ಜಗತ್ತಿನಾಚೆಗಿನ ಧ್ಯಾನಕ್ಕೆ ಪ್ರಾಧಾನ್ಯತೆಯನ್ನು ನೀಡಿ ಯಾವುದೇ ಬಾಹ್ಯ ಲೋಕದ ಲೌಕಿಕ ಚಟುವಟಿಕೆಗಳಿಗೆ ಅಷ್ಟಾಗಿ ತೆರೆದುಕೊಳ್ಳದ ಹೆಚ್.ಎಸ್.ವಿ.ಯವರು ಒಂದರ್ಥದಲ್ಲಿ ಮೌನಿ ಕೂಡ ಹೌದು. ಅವರ ಈ ಮೌನ, ಘನತೆಯ ಬದುಕಿನ ಪ್ರತೀಕವಾಗಿ ಯಾವ ಸನ್ಮಾನ, ಸ್ಥಾನಮಾನ ಹಾಗೂ ಪ್ರಶಸ್ತಿಗಳಿಗೆ ಹಾತೊರೆಯದಂತೆ ಮಾಡಿರುವುದು ವಿಶೇಷ. ಮೂರ್ತಿಯವರ ಈ ಗುಣದಿಂದಾಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಅವರನ್ನು ಅರಸಿಕೊಂಡು ಬಂದಿದೆ.

ಇಂದಿನ ದಿನಮಾನಗಳಲ್ಲಿ ಪ್ರಶಸ್ತಿ ಹಾಗೂ ಸ್ಥಾನಮಾನಗಳಿಗೆ ಜಾತಿ, ಧರ್ಮ, ಪ್ರಾದೇಶಿಕತೆ ಮುಂತಾದ ಅಂಶಗಳು ಮುನ್ನೆಲೆಗೆ ಬರುವುದರ ಮೂಲಕ ಕವಿ ಅಥವಾ ಲೇಖಕನೊಬ್ಬನ ಸಾಧನೆ ಮತ್ತು ಆತನ ಸಾಹಿತ್ಯ ಕೃಷಿ ಮುಂತಾದವುಗಳು ಕನ್ನಡ ಸಾರಸ್ವತ ಲೋಕದ ಮೇಲೆ ಬೀರಿರುವ ಪರಿಣಾಮ ಇವೆಲ್ಲವೂ ಹಿನ್ನೆಲೆಗೆ ಮೌನವಾಗಿ ಸರಿಯುತ್ತಿವೆ. ಈವರೆಗೆ ರಾಜಕಾರಣದಲ್ಲಿದ್ದ ಲಾಭಿ, ಶಿಫಾರಸ್ಸು, ಪ್ರಭಾವಿ ವ್ಯಕ್ತಿಗಳ ಕೃಪಾಕಟಾಕ್ಷ ಇತ್ತೀಚೆಗೆ ದೇಶದ ಸಾಂಸ್ಕೃತಿಕ ಲೋಕಕ್ಕೆ ಲಗ್ಗೆ ಇಟ್ಟಿವೆ. ಹಾಗಾಗಿ ಪ್ರಶಸ್ತಿ, ಗೌರವ ಮತ್ತು ಸನ್ಮಾನಗಳೆಲ್ಲವನ್ನೂ ಪ್ರಜ್ಞಾವಂತ ನಾಗರೀಕರು ಮತ್ತು ಸೂಕ್ಷ್ಮ ಸಂವೇದನೆಯ ಬರಹಗಾರರು ಹಾಗೂ ಕಲಾವಿದರು ಅನುಮಾನದಿಂದ ನೋಡುವಂತಾಗಿದೆ. ಆದರೆ, ಡಾ.ಹೆಚ್.ಎಸ್.ವೆಂಕಟೇಶ್‌ಮೂರ್ತಿಯವರು ಇಂತಹ ಎಲ್ಲಾ ಸದ್ದುಗದ್ದಲದ ಪ್ರಕ್ರಿಯೆಗಳಿಂದ ದೂರವಾಗಿದ್ದುಕೊಂಡು, ತಮ್ಮ ಪಾಡಿಗೆ ತಾವು ಕಾವ್ಯ ಕೃಷಿಯಲ್ಲಿ ತೊಡಗಿಸಿಕೊಂಡು ಬದುಕಿದವರು. ಅವರ ಇಂತಹ ಘನತೆಯ ಬದುಕಿಗೆ ಈ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ನಿಜಕ್ಕೂ ಸಾಂಸ್ಕೃತಿಕ ಲೋಕಕ್ಕೆ ಸಂದ ನಿಜವಾದ ಗೌರವವಾಗಿದೆ.




ಡಾ. ಹೆಚ್.ಎಸ್. ವೆಂಕಟೇಶ್ ಮೂರ್ತಿಯವರದು ಬಹುಮುಖ ಪ್ರತಿಭೆ. ಮೂಲಭೂತವಾಗಿ ಅವರು ಕವಿಯಾಗಿದ್ದರೂ ಸಹ ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ಕಾವ್ಯವಲ್ಲದೆ, ನಾಟಕ, ವಿಮರ್ಶೆ, ಕಥೆಗಳು, ಕಾದಂಬರಿ, ಮಕ್ಕಳ ಸಾಹಿತ್ಯ, ಕನ್ನಡದ ಸಿನಿಮಾಗಳಿಗೆ ಚಿತ್ರಕಥೆ, ಸಂಭಾಷಣೆ, ಹಾಡುಗಳನ್ನು ರಚಿಸಿದ್ದಾರೆ. ಜೊತೆಗೆ ಒಂದು ಸಿನಿಮಾವನ್ನು ನಿರ್ದೇಶನ ಮಾಡಿದ ಅನುಭವವೂ ಅವರದಾಗಿದೆ. ವೆಂಕಟೇಶ್ ಮೂರ್ತಿಯವರ ಬದುಕು, ಅವರ ಸಾಧನೆ ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದಾಗ ಒಂದು ರೀತಿಯಲ್ಲಿ ಅವರದು ಏಕಲವ್ಯನ ಸಾಧನೆಗೆ ಹೋಲುವಂತಹದ್ದು. ಕನ್ನಡ ಸಾಹಿತ್ಯ ಲೋಕವಲ್ಲದೆ, ಇತರೆ ಭಾಷೆಗಳಲ್ಲಿಯೂ ಸಹ ಕಂಡು ಬರುವ ಗುಂಪುಗಾರಿಕೆಗಳು ಮತ್ತು ಎಡ, ಬಲ, ಮಧ್ಯಮ ಮಾರ್ಗ ಅಥವಾ ನವೋದಯ, ಪ್ರಗತಿ, ನವ್ಯ, ಬಂಡಾಯ ಇಂತಹುಗಳಿಂದ ಒಂದು ಅಂತರವನ್ನು ಕಾಯ್ದುಕೊಂಡು, ಬಸವಣ್ಣನವರ "ಆನು ಹಾಡುವನಯ್ಯಾ, ನಿನಗೆ ಕೇಡಿಲ್ಲವಾಗಿ" ಎಂಬ ವಚನದ ಸಾಲಿನಂತೆ ಬದುಕುತ್ತಾ, ತಮ್ಮೆದೆಯ ಹಾಡು ಪಾಡುಗಳನ್ನು ಅಕ್ಷರ ರೂಪಕ್ಕಳಿಸಿ ಕನ್ನಡದ ಕಾವ್ಯ ಜಗತ್ತಿನಲ್ಲಿ ಸೂಕ್ಷ್ಮ ಸಂವೇದನೆಯ ಕವಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ವೆಂಕಟೇಶ್ ಮೂರ್ತಿಯವರ ಜನನ, ಅವರ ಬಾಲ್ಯ ಮತ್ತು ಬದುಕು ರೂಪಿಸಿಕೊಂಡು ಬೆಳೆದ ಪರಿ ನಿಜಕ್ಕೂ ಸೋಜಿಗದ ಸಂಗತಿ. ಅಂದಿನ ಶಿವಮೊಗ್ಗ ಜಿಲ್ಲೆಗೆ ಸೇರಿದ್ದ ಹೋದಿಗೆರೆ ಎಂಬ ಗ್ರಾಮದ ಬ್ರಾಹ್ಮಣ ಕುಟುಂಬದಲ್ಲಿ 1944 ರ ಜೂನ್ 23 ರಂದು ಜನಿಸಿದ ಇವರು ತಮ್ಮ ಜನನಕ್ಕೆ ಮುನ್ನ ತಂದೆಯನ್ನು ಕಳೆದುಕೊಂಡ ನತದೃಷ್ಟರು. ಇವರ ತಾಯಿ ಶ್ರೀಮತಿ ನಾಗರತ್ನಮ್ಮನವರು ಆರು ತಿಂಗಳ ಗರ್ಭಿಣಿಯಾಗಿದ್ದಾಗ, ವೆಂಕಟೇಶ ಮೂರ್ತಿಯವರ ತಂದೆ ನಾರಾಯಣ ಭಟ್ಟರು ಅಕಾಲಿಕ ನಿಧನಕ್ಕೆ ತುತ್ತಾದರು. ಇವರ ಅಜ್ಜ ಭೀಮರಾಯರು (ತಾಯಿಯ ತಂದೆ) ವೃತ್ತಿಯಲ್ಲಿ ಶ್ಯಾನುಭೋಗರಾಗಿದ್ದುಕೊಂಡು ವಿಧವೆಯಾದ ಮಗಳು ಮತ್ತು ಆಗ ತಾನೆ ಜನಿಸಿದ ಮೊಮ್ಮಗನನ್ನು ಆರೈಕೆ ಮಾಡಿದರು. ವೆಂಕಟೇಶ ಮೂರ್ತಿಯವರ ಕುಟುಂಬದಲ್ಲಿ ಇನ್ನೊಂದು ಆಕಸ್ಮಿಕ ದುರಂತವೂ ಸಂಭವಿಸಿತು. ಮಗಳು ಮತ್ತು ಮೊಮ್ಮಗನನ್ನು ಅತ್ಯಂತ ಜತನದಿಂದ ನೋಡಿಕೊಳ್ಳುತ್ತಿದ್ದ ಅಜ್ಜಿ ಸೀತಮ್ಮನವರು ಸಹ ವೆಂಕಟೇಶ್ ಮೂರ್ತಿಯವರು ಹತ್ತು ವರ್ಷದ ಬಾಲಕನಾಗಿದ್ದಾಗ ತೀರಿಕೊಂಡರು. ಹುಟ್ಟಿನಿಂದ ಅನಾಥ ಪ್ರಜ್ಞೆಯ ಭಾವ, ಮತ್ತು ಹೆತ್ತ ತಾಯಿಯ ವೈಧವ್ಯ ಇವೆಲ್ಲವನ್ನೂ ನೋಡಿಕೊಂಡು ಬೆಳೆದ ಮೂರ್ತಿಯವರಿಗೆ ಅಜ್ಜ ಭೀಮರಾಯರು, ಮತ್ತು ಅಜ್ಜಿಯ ಅಕ್ಕನಾದ ಭೀಮಜ್ಜಿಯವರು ಆಸರೆಯಾಗಿ ಯಾವುದೇ ಕೊರತೆಯಾಗದಂತೆ ಬೆಳೆಸಿದರು. ನಂತರ ವೆಂಕಟೇಶ್ ಮೂರ್ತಿಯವರ ತಾಯಿ ನಾಗರತ್ನಮ್ಮನವರು ತಂದೆಯ



**ಮೂರ್ತಿಯವರು ನಿವೃತ್ತಿಯಾದಾಗ, ಅವರ ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿ ಅಭಿನಂದನಾ ಗ್ರಂಥವನ್ನು ಹೊರ ತರುವುದರ ಜೊತೆಗೆ ಒಂದು ಲಕ್ಷ ರೂಪಾಯಿ ಗೌರವ ನಿಧಿಯನ್ನು ಅರ್ಪಿಸಿದರು. ಆದರೆ, ವೆಂಕಟೇಶ್‌ಮೂರ್ತಿಯವರು ಆ ನಿಧಿಯನ್ನು ಬಳಸಿಕೊಳ್ಳದೆ, ಬ್ಯಾಂಕಿನಲ್ಲಿ ಠೇವಣಿಯಾಗಿಟ್ಟು, ಪ್ರತಿ ವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ತಮ್ಮ ಬಳಿ ಕನ್ನಡ ಕಲಿತ ವಿದ್ಯಾರ್ಥಿಗಳ ಕೃತಿಗಳನ್ನು ಹೊರತರುತ್ತಿದ್ದಾರೆ.**






Download From : www.kpscvaani.com

ಆಶ್ರಯದಲ್ಲಿ ಆ ಕಾಲದ ಎಲ್.ಎಸ್. ಶಿಕ್ಷಣವನ್ನು ಪೂರೈಸಿ, ಶಿಕ್ಷಕಿಯಾಗಿ ಉದ್ಯೋಗವನ್ನು ಪಡೆದು ಅಭದ್ರತೆಯ ನಡುವೆ ನಲುಗಿದ್ದ ತನ್ನ ಕುಟುಂಬಕ್ಕೆ ಆಸರೆಯಾಗಿ ತಮ್ಮ ಪಾಲಿಗಿದ್ದ ಏಕೈಕ ಕುಡಿ ವೆಂಕಟೇಶ್ ಮೂರ್ತಿಯವರ ಭವಿಷ್ಯದ ಬದುಕಿಗೆ ಭದ್ರ ಬುನಾದಿ ಹಾಕಿದರು.

ಪ್ರಾಥಮಿಕ ಶಿಕ್ಷಣವನ್ನು ಹೋದಿಗೆರೆಯಲ್ಲಿ ಮತ್ತು ಪ್ರೌಢಶಿಕ್ಷಣವನ್ನು ಹೊಳಲ್ಕೆರೆಯಲ್ಲಿ ಮುಗಿಸಿದ ಮೂರ್ತಿಯವರು ಚಿತ್ರದುರ್ಗದಲ್ಲಿ ಪಿ.ಯು.ಸಿ. ಮುಗಿಸಿ. ಆನಂತರ ಭದ್ರಾವತಿಯಲ್ಲಿ ಡಿಪ್ಲಮೋ ಪದವಿ ಪಡೆದರು. ಡಿಪ್ಲಮೋ ಪದವಿಯ ನಂತರ ಮಲ್ಲಾಡಿ ಹಳ್ಳಿಯ ಪ್ರೌಢಶಾಲೆಗೆ ಕರಕುಶಲ ಶಿಕ್ಷಕರಾಗಿ ( ಕ್ರಾಫ್ಟ್ ಟೀಚರ್ )ಉದ್ಯೋಗ ಜೀವನಕ್ಕೆ ಕಾಲಿಟ್ಟರು. ವೆಂಕಟೇಶ್ ಮೂರ್ತಿಯವರ ಸಾಹಿತ್ಯ ಅಥವಾ ಕಾವ್ಯಾಸಕ್ತಿ ದಿಢೀರನೆ ಹುಟ್ಟಿಕೊಂಡಿದಲ್ಲ. ಅವರ ಅಜ್ಜ ಭೀಮರಾಯರು ಆ ಕಾಲದಲ್ಲಿ ಖ್ಯಾತ ಮೃದಂಗ ವಾದಕರಾಗಿದ್ದರು. ಹಾಗಾಗಿ ಬಾಲ್ಯದಿಂದ ಅಜ್ಜನ ಮನೆಯಲ್ಲಿ ಕಿವಿಗೆ ಬೀಳುತ್ತಿದ್ದ ಮಹಾಭಾರತ, ರಾಮಾಯಣದಂತಹ ಪುರಾಣ ಕಾವ್ಯಗಳ ವಾಚನ, ಕುಮಾರವ್ಯಾಸನ ಭಾರತದ ಗಮಕ ವಾಚನ, ಊರಿನಲ್ಲಿ ನಡೆಯುತ್ತಿದ್ದ ಹಬ್ಬ ಮತ್ತು ಜಾತ್ರೆಗಳಲ್ಲಿ ನಡೆಯುತ್ತಿದ್ದ ಹರಿಕಥಾ ಕಾಲಕ್ಷೇಪ ಇವೆಲ್ಲವೂ ಬಾಲಕನಾಗಿದ್ದ ವೆಂಕಟೇಶ್ ಮೂರ್ತಿಯವರಲ್ಲಿ ಆಸಕ್ತಿ ಮೂಡಿಸಿದ್ದವು. ಇವರ ಪುಣ್ಯವೆಂಬಂತೆ ಹೈಸ್ಕೂಲ್ ವಿದ್ಯಾಭ್ಯಾಸದ ವೇಳೆ ಇವರಿಗೆ ಗುರುಗಳಾಗಿದ್ದ ಸೀತಾರಾಮಯ್ಯ, ಸುಬ್ಬರಾಯರು, ಅನಂತರಾಮಯ್ಯ, ಚಿದಾನಂದ ಮೂರ್ತಿ, ನರಸಿಂಹಶಾಸ್ತ್ರಿ, ರಾಮಚಂದ್ರರಾಯರಂತಹ ಶಿಕ್ಷಕ ಮಹಾನುಭಾವರು ತಾವು ಪಾಠ ಮಾಡುತ್ತಿದ್ದ ಹೊಳಲ್ಕೆರೆ ಮುನ್ಸಿಪಲ್ ಹೈಸ್ಕೂಲ್‌ನಲ್ಲಿ ತಿಂಗಳಿಗೆ ಸರಿಯಾಗಿ ವೇತನ ಬಾರದಿದ್ದರೂ ಸಹ ವಿದ್ಯಾರ್ಥಿಗಳಿಗೆ ಮಾತ್ರ ಅತ್ಯಂತ ಶ್ರದ್ಧೆಯಿಂದ ಬೋಧಿಸುತ್ತಿದ್ದರು. ಈ ವೇಳೆಯಲ್ಲಿ ನರಸಿಂಹ ಶಾಸ್ತ್ರಿ ಎಂಬ ಕನ್ನಡ ಶಿಕ್ಷಕರು ತಮ್ಮ ಅತ್ಯಂತ ಪ್ರೀತಿಯ ಹಾಗೂ ವಿಧೇಯನಾದ ವಿದ್ಯಾರ್ಥಿಯಾಗಿದ್ದ ವೆಂಕಟೇಶ್ ಮೂರ್ತಿಯವರಿಗೆ ತಮ್ಮ ಬಳಿ ಇದ್ದ ಬೇಂದ್ರೆ, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಶಿವರಾಮಕಾರಂತ ಮುಂತಾದವರ ಕಥೆ, ಕಾದಂಬರಿ, ಕಾವ್ಯ ಕೃತಿಗಳನ್ನು ನೀಡಿ ಹೆಚ್.ಎಸ್. ವೆಂಕಟೇಶ್ ಮೂರ್ತಿಯವರಲ್ಲಿ ಸಾಹಿತ್ಯದ ಅಭಿರುಚಿಯನ್ನು ಮೂಡಿಸಿದರು. ಅಂದು ಮೂರ್ತಿಯವರ ಎದೆಯೊಳಗಿದ್ದ ಬೀಜ ಮೊಳಕೆಯೊಡೆದು ಸಸಿಯಾಗಿ ಬೆಳೆದು, ಮುಂದಿನ ದಿನಗಳಲ್ಲಿ ಹೆಮ್ಮರವಾಗಿ ಬೆಳೆಯಿತು. ಹೈಸ್ಕೂಲ್‌ನಲ್ಲಿ ಕವಿತೆ ಬರೆಯುತ್ತಿದ್ದ ಮೂರ್ತಿಯವರ ಪ್ರತಿಭೆಯನ್ನು ಗುರುತಿಸಿ ನರಸಿಂಹಶಾಸ್ತ್ರಿಗಳು ಶಿಷ್ಯನ ಕವಿತೆಗಳನ್ನು ತಿದ್ದುವುದರ ಮೂಲಕ ಪ್ರೋತ್ಸಾಹಿಸುತ್ತಿದ್ದರು.
ಹಾಗಾಗಿ ವೆಂಕಟೇಶ್ ಮೂರ್ತಿಯವರು ತಮ್ಮ ಪ್ರಥಮ ಕವಿತಾ ಸಂಕಲನವನ್ನು ತಮ್ಮ ಗುರುಗಳಾದ ನರಸಿಂಹಶಾಸ್ತ್ರಿಯವರಿಗೆ ಅರ್ಪಿಸಿದ್ದಾರೆ.

ಮಲ್ಲಾಡಿಹಳ್ಳಿಯಲ್ಲಿ ಶಿಕ್ಷಕ ವೃತ್ತಿಯಲ್ಲಿದ್ದುಕೊಂಡು, ಕನ್ನಡದ ಸಾಹಿತ್ಯದ ಅಭಿಮಾನ ಮತ್ತು ಅಭಿರುಚಿಯಿಂದಾಗಿ ವೆಂಕಟೇಶ್ ಮೂರ್ತಿಯವರು 1966 ರಿಂದ 1971 ನಡುವೆ ಧಾರವಾಡದ ಕರ್ನಾಟಕ ವಿಶ್ವ ವಿದ್ಯಾನಿಲಯದಿಂದ ಬಾಹ್ಯ ವಿದ್ಯಾರ್ಥಿಯಾಗಿದ್ದುಕೊಂಡು ಬಿ.ಎ. ತರಗತಿ ಪಡೆದರು. ಆ ವೇಳೆಗೆ ಅವರು 1968 ರಲ್ಲಿ ಪರಿವೃತ ಎಂಬ ಕಾವ್ಯ ಸಂಕಲನವನ್ನು ಹೊರ ತಂದಿದ್ದರು. ಈ ಕೃತಿ ಕುರಿತು ಸಾಹಿತ್ಯ ವಲಯದಿಂದ ಒಳ್ಳೆಯ ಪ್ರತಿಕ್ರಿಯೆ ಕೂಡ ದೊರಕಿತ್ತು. ಹಿರಿಯ ಕವಿ ಎನ್.ಲಕ್ಷ್ಮಿನಾರಾಯಣ ಭಟ್ಟರ ಶಿಫಾರಸ್ಸಿನ ಮೇರೆಗೆ ಬೆಂಗಳೂರಿನ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಹಿರಿಯ ಕವಿ. ಜಿ.ಎಸ್. ಶಿವರುದ್ರಪ್ಪನವರು ವೆಂಕಟೇಶ್ ಮೂರ್ತಿಯವರಿಗೆ ಎಂ.ಎಂ. ಪದವಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟರು. ಚಿನ್ನದ ಪದಕಗಳೊಂದಿಗೆ ಕನ್ನಡದಲ್ಲಿ ಎಂ.ಎ. ಪಡೆದ ಮೂರ್ತಿಯವರು "ಕನ್ನಡದ ಕಥನ ಕಾವ್ಯಗಳು" ಕುರಿತು ಅಧ್ಯಯನ ಮಾಡಿ ಪಿ.ಹೆಚ್.ಡಿ. ಪದವಿಯನ್ನೂ ಸಹ ಪಡೆದರು. ತಮ್ಮ ವೈಯಕ್ತಿಕ ಶ್ರಮ ಮತ್ತು ಪ್ರತಿಭೆಯ ಮೂಲಕ ಬೆಂಗಳೂರಿನ ಪ್ರತಿಷ್ಠಿತ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡು ಸತತ ಮುವತ್ತು ವರ್ಷಗಳ ಕಾಲ ಕನ್ನಡದ ಪಾಠ ಮಾಡಿ, ಇಂಗ್ಲೀಷ್ ವಾತಾವರಣದ ಆ ಕಾಲೇಜಿನಲ್ಲಿ ಕನ್ನಡದ ಪಾಠ, ಕಾವ್ಯ, ನಾಟಕ, ಸಂಗೀತ ಇತ್ಯಾದಿ ಅಭಿರುಚಿಗಳನ್ನು ವಿದ್ಯಾರ್ಥಿಗಳಲ್ಲಿ ಹುಟ್ಟು ಹಾಕಿ ಅನೇಕ ಕನ್ನಡದ ಮನಸ್ಸುಗಳನ್ನು ಮತ್ತು ಪ್ರತಿಭಾವಂತರನ್ನು ಹುಟ್ಟು ಹಾಕಿದರು.



**ಐದು ದಶಕಗಳ ಕಾವ್ಯ ಹಾಗೂ ಸಾಹಿತ್ಯದ ಇತರೆ ಪ್ರಕಾರಗಳಲ್ಲಿ ಸಲ್ಲಿಸಿರುವ ಸಾಧನೆಗಾಗಿ ಹೆಚ್.ಎಸ್. ವೆಂಕಟೇಶ್ ಮೂರ್ತಿಯವರು ಈವರೆಗೆ ಐದು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದು ದಾಖಲೆಯನ್ನು ನಿರ್ಮಿಸಿದ್ದಾರೆ.**

ಭಾರತದ ಸಿನಿಮಾರಂಗದ ಬಹುಭಾಷಾ ಪ್ರತಿಭಾವಂತ ನಟ ಹಾಗೂ ಎರಡು ಬಾರಿ ರಾಷ್ಟ್ರ ಪಶಸ್ತಿ ಪಡೆದ ಕಲಾವಿದ ಪ್ರಕಾಶ್ ರೈ ವೆಂಕಟೇಶ್ ಮೂರ್ತಿಯವರ ಶಿಷ್ಯರಲ್ಲಿ ಒಬ್ಬರಾಗಿದ್ದಾರೆ. ಕ್ರಿ.ಶ. 2000 ದಲ್ಲಿ ಮೂರ್ತಿಯವರು ನಿವೃತ್ತಿಯಾದಾಗ, ಅವರ ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿ ಅಭಿನಂದನಾ ಗ್ರಂಥವನ್ನು ಹೊರ ತರುವುದರ ಜೊತೆಗೆ ಒಂದು ಲಕ್ಷ ರೂಪಾಯಿ ಗೌರವ ನಿಧಿಯನ್ನು ಅರ್ಪಿಸಿದರು. ಆದರೆ, ವೆಂಕಟೇಶ್‌ಮೂರ್ತಿಯವರು ಆ ನಿಧಿಯನ್ನು ಬಳಸಿಕೊಳ್ಳದೆ, ಬ್ಯಾಂಕಿನಲ್ಲಿ ಠೇವಣಿಯಾಗಿಟ್ಟು, ಪ್ರತಿ ವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ತಮ್ಮ ಬಳಿ ಕನ್ನಡ ಕಲಿತ ವಿದ್ಯಾರ್ಥಿಗಳ ಕೃತಿಗಳನ್ನು ಹೊರತರುತ್ತಿದ್ದಾರೆ. ಜೊತೆಗೆ ಹಳೆಯ ವಿದ್ಯಾರ್ಥಿ ಬಳಗವನ್ನು ರಚಿಸಿಕೊಂಡು ಪ್ರತಿ ತಿಂಗಳು ಸಾಹಿತ್ಯ, ನಾಟಕ, ಕಾವ್ಯ ಕುರಿತು ಉಪನ್ಯಾಸ ನೀಡುವ ಮೂಲಕ ತಮ್ಮ ಕನ್ನಡದ ಪ್ರೀತಿಯನ್ನು ಹಸಿರಾಗಿ ಉಳಿಸಿಕೊಂಡಿದ್ದಾರೆ.

ಕಳೆದ 2019ರ ಜೂನ್ ತಿಂಗಳಿನಲ್ಲಿ ಎಪ್ಪತ್ತೈದು ವರ್ಷಕ್ಕೆ ಕಾಲಿರಿಸಿದ ವೆಂಕಟೇಶ್ ಮೂರ್ತಿಯವರನ್ನು ಅವರ ಅಭಿಮಾನಿಗಳು ಹಾಗೂ ಹಿತೈಷಿಗಳು ಬೆಂಗಳೂರು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕಾವ್ಯ ತಪಸ್ವಿ ಎಂಬ ಬಿರುದನ್ನಿತ್ತು ಸನ್ಮಾನಿಸಿದರು. ಕನ್ನಡ ನವೋದಯ ಸಾಹಿತ್ಯ ಅಥವಾ ಕಾವ್ಯದ ಮಹಾನ್ ದಿಗ್ಗಜರಾದ ಕುವೆಂಪು, ಬೇಂದ್ರೆ, ಮಾಸ್ತಿ, ಪು.ತಿ.ನರಸಿಂಹಚಾರ್ಯರು ಹಾಗೂ ಕೆ.ಎಸ್. ನರಸಿಂಹಸ್ವಾಮಿ ಮುಂತಾದವರ ಪ್ರತಿನಿಧಿಯಂತೆ ಕಾಣುವ ವೆಂಕಟೇಶ್ ಮೂರ್ತಿಯವರು ಕವಿ. ಕೆ. ಎಸ್. ನಿಸಾರ್ ಅಹಮದ್‌ರವರನ್ನು ತಮ್ಮ ಕಾವ್ಯದ ಗುರು ಎಂದು ಹೇಳಿಕೊಂಡವರು. ಇವರು ಕಾವ್ಯಲೋಕಕ್ಕೆ ಪ್ರವೇಶಿಸುವ ವೇಳೆಗೆ ಕನ್ನಡದ ಕಾವ್ಯಲೋಕದಲ್ಲಿ ನವೋದಯ ಕಾವ್ಯದ ಅಬ್ಬರವಿಳಿದು ನವ್ಯ ಕವಿ. ಗೋಪಾಲಕೃಷ್ಣ ಅಡಿಗರ ನಾಯಕತ್ವದಲ್ಲಿ ನವ್ಯಕಾವ್ಯ ಉತ್ತುಂಗದಲ್ಲಿತ್ತು. ಇಂತಹ ಸಮಯದಲ್ಲಿ ಕವಿ ನಿಸಾರ್ ಅಹಮದ್ ಹಾಗೂ ಕಥನ ಕಾವ್ಯದ ಕವಿ ಸು.ರ. ಎಕ್ಕುಂಡಿಯವರನ್ನು ಮಾದರಿಯಾಗಿಟ್ಟುಕೊಂಡು ಯಾವುದೇ ಪಂಥಗಳೊಂದಿಗೆ ಗುರುತಿಸಿಕೊಳ್ಳದೆ ಕಾವ್ಯಾಸಕ್ತರ ಗಮನ ಸೆಳೆಯುವುದರ ಜೊತೆಗೆ ಜನಸಾಮಾನ್ಯರ ನಾಲಿಗೆಯ ಮೇಲೆ ತಮ್ಮ ಕವಿತೆಗಳು ಭಾವಗೀತೆಯ ರೂಪದಲ್ಲಿ ನಲಿದಾಡುವಂತೆ ಕಾವ್ಯವನ್ನು ರಚಿಸುತ್ತಾ ಹೋದರು.



ಸಿಂದಾಬಾದನ ಆತ್ಮಕಥೆ, ಕ್ರಿಯಾ ಪರ್ವ, ಒಣಗಿದ ಮರದ ಗಿಣಿಗಳು, ಋತುವಿಲಾಸ, ಎಷ್ಟೊಂದು ಮುಗಿಲು, ಅಮೇರಿಕಾದಲ್ಲಿ ಬಿಲ್ಲು ಹಬ್ಬ, ವಿಮುಕ್ತಿ, ಭೂಮಿಯೂ ಒಂದು ಆಕಾಶ, ನದಿ ತೀರದಲ್ಲಿ, ಮುವತ್ತು ಮಳೆಗಾಲ(ಸಮಗ್ರ ಕಾವ್ಯ ಸಂಕಲನ) ಎಂಬ ಕೃತಿಗಳಲ್ಲದೆ, ಚಿತ್ರಪಟ, ಅಗ್ನಿವರ್ಣ, ಉರಿವ ಉಯ್ಯಾಲೆ, ಒಂದು ಸೈನಿಕ ವೃತ್ತಾಂತ, ಕತ್ತಲೆಗೆ ಎಷ್ಟೊಂದು ಮುಖ, ನಾಟಕಗಳು ಹಾಗೂ ತಾಪಿ ಎಂಬ ಕಾದಂಬರಿ ಮತ್ತು ಬಾನಸವಾಡಿಯ ಬೆಂಕಿ, ಪುಟ್ಟಾಚಾರಿಯ ಮತಾಂತರ ಪ್ರಸಂಗ ಮತ್ತು ಇತರ ಕಥೆಗಳು ಎಂಬ ಕಥಾ ಸಂಕಲನಗಳು, ಆಕಾಶದ ಹಕ್ಕು ಮತ್ತು ತಾವರೆಯ ಬಾಗಿಲು ಎಂಬ ವಿಮರ್ಶೆ ಮತ್ತು ಕಾವ್ಯ ಕುರಿತಾದ ಕೃತಿಗಳನ್ನು ರಚಿಸಿದ್ದಾರೆ. ಕುಮಾರವ್ಯಾಸನ ಕಾವ್ಯವನ್ನು ಸರಳಗನ್ನಡದಲ್ಲಿ ರಚಿಸುವುದರ ಜೊತೆಗೆ, ಕನ್ನಡದ ಧಾರವಾಹಿಗಳು ಮತ್ತು ಚಲನಚಿತ್ರಗಳಿಗೆ ಸಂಭಾಷಣೆ, ಗೀತೆಗಳನ್ನು ರಚಿಸಿರುವುದು ಮೂರ್ತಿಯವರ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಚಿನ್ನಾರಿಮುತ್ತ, ಕೊಟ್ರೆಶಿಯ ಕನಸು, ಕ್ರೌರ್ಯ, ಮತದಾನ ಮುಂತಾದ ಸಿನಿಮಾಗಳಿಗೆ ಮೂರ್ತಿಯವರು ರಚಿಸಿದ ಗೀತೆಗಳು ಅತ್ಯಂತ ಜನಪ್ರಿಯ ಗೀತೆಗಳ ಸಾಲಿಗೆ ಸೇರಿರುವುದು ವಿಶೇಷವಾಗಿದೆ. ಮಕ್ಕಳ ಸಾಹಿತ್ಯ ಕುರಿತಂತೆ ವಿಶೇಷ ಆಸಕ್ತಿ ಬೆಳೆಸಿಕೊಂಡಿರುವ ಇವರು ಅನೇಕ ಮಕ್ಕಳ ಗೀತೆಗಳು ಮತ್ತು ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹಕ್ಕಿಸಾಲು, ಹೂವಿನ ಮಾಲೆ, ಸೋನಿ ಪದ್ಯಗಳು, ಮತ್ತು ಅಳಿಲು ರಾಮಾಯಣ, ಸುಣ್ಣದ ಸುತ್ತು, ಮುದಿ ದೊರೆ ಮತ್ತು ಮೂವರು ಮಕ್ಕಳು( ಮಕ್ಕಳ ನಾಟಕ) ಮುಖ್ಯವಾದ ಕೃತಿಗಳಾಗಿವೆ.

"ಕವಿತೆ ಎಂಬುದು ಶಬ್ದಗಳ ಸಂಯೋಜನೆ ಹೇಗೋ, ಅದೇ ರೀತಿ ಅದು ನಿಶಬ್ದಗಳ ಸಂಯೋಜನೆಯೂ ಹೌದು. ಕವಿತೆಯನ್ನು ಕಟ್ಟುವಾಗ ಕವಿ ಮಾತುಗಳನ್ನು ಬಳಸುತ್ತಾನೆ ಎನ್ನುವುದನ್ನು ನಾವು ಬಲ್ಲೆವು. ಆದರೆ, ಮಾತಿನೊಂದಿಗೆ ಆಯಕಟ್ಟಿನ ಜಾಗದಲ್ಲಿ ಅವನು ಮೌನವನ್ನೂ ಸಹ ಬಳಸುತ್ತಾನೆ." ಎಂಬ ಮಾತಿನಲ್ಲಿ ಅಪಾರವಾಗಿ ವಿಶ್ವಾಸವಿರಿಸಿಕೊಂಡಿರುವ ವೆಂಕಟೇಶ್ ಮೂರ್ತಿಯವರು ಎಂದೂ ಸಹ ತಮ್ಮ ಕಾವ್ಯಗಳಲ್ಲಿ ಅಥವಾ ಮಾತಿನಲ್ಲಿ ಅಬ್ಬರಿಸಿದವರಲ್ಲ. ವಿನೀತ ಭಾವನೆ ಅವರ ಕಾವ್ಯ ಗುಣದ ಮೂಲಸ್ಥಾಯಿಗಳಲ್ಲಿ ಒಂದು. ಅವರು ಯಾವುದೇ ಭಾವೋದ್ರೇಕಕ್ಕೆ ಒಳಗಾಗದೆ ಅತ್ಯಂತ ಶಾಂತಚಿತ್ತ ಸ್ಥಿತಿಯಲ್ಲಿ ಬರೆದಿರುವ ಆತ್ಮ ಕಥನ "ಅನಾತ್ಮ ಕಥನ" ಕಣ್ಣುಗಳನ್ನು ತೇವಗೊಳಿಸುತ್ತವೆ.

ತಮ್ಮ ಐದು ದಶಕಗಳ ಕಾವ್ಯ ಹಾಗೂ ಸಾಹಿತ್ಯದ ಇತರೆ ಪ್ರಕಾರಗಳಲ್ಲಿ ಸಲ್ಲಿಸಿರುವ ಸಾಧನೆಗಾಗಿ ಹೆಚ್.ಎಸ್. ವೆಂಕಟೇಶ್ ಮೂರ್ತಿಯವರು ಈವರೆಗೆ ಐದು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದು ದಾಖಲೆಯನ್ನು ನಿರ್ಮಿಸಿದ್ದಾರೆ. ಜೊತೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ದಿನಕರ ದೇಸಾಯಿ ಪ್ರತಿಷ್ಠಾನದ ಪ್ರಶಸ್ತಿ ಮುಂತಾದ ಪ್ರತಿಷ್ಠಿತ ರಾಜ್ಯ ಮಟ್ಟದ ಗೌರವ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇದೀಗ ಅವರ ಹಿರಿತನಕ್ಕೆ ಮತ್ತು ಸಾಹಿತ್ಯ ಸಾಧನೆಗೆ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯ ಗೌರವ ಸಂದಿರುವುದು ನಿಜಕ್ಕೂ ಕನ್ನಡಿಗರ ಪಾಲಿಗೆ ಅಭಿಮಾನದ ಸಂಗತಿಯಾಗಿದೆ.





Download From : www.kpscvaani.com



# ಎರಡನೇ ಬಾರಿಗೆ ಸಕಾಲ ಸಾಧನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ

ಅರುಣಾ ಬಿ. ಗೌರಿಬಿದನೂರು

**ಸ**ಕಾಲ ಸಾಧನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ರಾಜ್ಯದಲ್ಲೇ ಪ್ರಥಮ ಸ್ಥಾನವನ್ನು ಗಳಿಸುವ ಮೂಲಕ ರಾಜ್ಯ ಸರ್ಕಾರದ ಪ್ರಶಂಸೆಗೆ ಪಾತ್ರವಾಗಿದೆ.

ಜಿಲ್ಲೆಯಲ್ಲಿ ಸೆಪ್ಟಂಬರ್ ತಿಂಗಳಿನಲ್ಲಿ ಸಕಾಲ ಅಧಿನಿಯಮದಡಿ ಒಟ್ಟು 108471 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳಲ್ಲಿ 105276 ಅರ್ಜಿಗಳನ್ನು ಮತ್ತು ಅಕ್ಟೋಬರ್ ತಿಂಗಳಿನಲ್ಲಿ 101720 ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಿ 2ನೇ ಬಾರಿಗೆ ರಾಜ್ಯ ಸರ್ಕಾರದ ಪ್ರಶಂಸೆಗೆ ಪಾತ್ರವಾಗಿದೆ. ಇಂತಹ ಮೆಚ್ಚುಗೆಗೆ ಕಾರಣಕರ್ತರಾದ ಸಕಾಲ ತಂಡದ ಸಿಬ್ಬಂದಿ ವರ್ಗದವರ ಕಾರ್ಯವನ್ನು ಗುರುತಿಸಿ ಸರ್ಕಾರ ಅಭಿನಂದನೆ ಸಲ್ಲಿಸಿದೆ.

ಡಿಸೆಂಬರ್ 16 ರಂದು ಸೋಮವಾರ ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಮತ್ತು ಕಾರ್ಮಿಕ ಸಚಿವರಾದ ಕೆ. ಸುರೇಶ್ ಕುಮಾರ್ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಆರ್. ಲತಾ ಅವರಿಗೆ ಪ್ರಶಂಸನಾ ಪತ್ರವನ್ನು ಪ್ರದಾನ ಮಾಡಿದ್ದಾರೆ.

ರಾಜ್ಯ ಸರ್ಕಾರ ನಿಗದಿಪಡಿಸಿರುವ ಸಕಾಲ ಸೇವೆಗಳು ಸೂಕ್ತ ಸಮಯಕ್ಕೆ ಸರಿಯಾಗಿ ಸಾರ್ವಜನಿಕರಿಗೆ ವಿಲೇವಾರಿ ಮಾಡಲಾಗುತ್ತದೆ. ಇದರಲ್ಲಿ 3 ಕೆಲಸದ ದಿನಗಳಲ್ಲಿ ಜನನ ಮತ್ತು ಮರಣ ಪ್ರಮಾಣಪತ್ರಗಳನ್ನು ವಿತರಿಸಲಾಗುತ್ತದೆ. 30 ದಿನಗಳಲ್ಲಿ ವಾಣಿಜ್ಯ ಪರವಾನಗಿ ನೀಡುವಿಕೆ, 3 ದಿನಗಳಲ್ಲಿ ಖಾತಾ ನಕಲು ನೀಡುವುದು, 30 ದಿನಗಳಲ್ಲಿ 2400 ಚದುರ ಅಡಿಗಳವರೆಗಿನ ವಸತಿ ನಿರ್ಮಾಣ ಮಾದರಿಯ ಕಟ್ಟಡ ಯೋಜನೆಯನ್ನು ಅನುಮೋದಿಸುವುದು, 15 ದಿನಗಳಲ್ಲಿ ವಸತಿ ಕಟ್ಟಡಗಳಿಗೆ ನೀರು ಸರಬರಾಜು ಮತ್ತು ಒಳ ಚರಂಡಿಯ ಹೊಸ ಸಂಪರ್ಕಕ್ಕಾಗಿ ಅನುಮತಿ ನೀಡುವುದು ಹಾಗೂ 30 ದಿನಗಳಲ್ಲಿ ವಾಸ ದೃಢೀಕರಣ ಪ್ರಮಾಣ ಪತ್ರ ನೀಡಿಕೆ ಸೇರಿದಂತೆ 1026 ಸೇವೆಗಳನ್ನು ಕಡ್ಡಾಯವಾಗಿ ಕಾಲ ಮಿತಿಯೊಳಗೆ ವಿಲೇವಾರಿ ಮಾಡಲಾಗುತ್ತದೆ.

**ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ಸಕಾಲ ಯೋಜನೆಯಡಿ ಅರ್ಜಿಗಳ ವಿಲೇವಾರಿಯಲ್ಲಿ ಜಿಲ್ಲೆಯು ಪ್ರಥಮ ಸ್ಥಾನವನ್ನು ಗಳಿಸಿರುವುದು ಹೆಮ್ಮೆಯ ವಿಷಯ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಕುರಿತು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟು, ಸಕಾಲದಲ್ಲಿ ಯೋಜನೆಗಳ ಸಂಪೂರ್ಣ ಸೇವೆಯನ್ನು ಜನಸಾಮಾನ್ಯರ ಮನೆ ಬಾಗಿಲಿಗೆ ತಲುಪುವಂತೆ ಮಾಡುವುದು ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿಯ ಕರ್ತವ್ಯ. ಈ ನಿಟ್ಟಿನಲ್ಲಿ ಜಿಲ್ಲಾ ಸಕಾಲ ತಂಡದವರ ಕಾರ್ಯ ಉತ್ತಮವಾಗಿದೆ.**

**–ಆರ್.ಲತಾ, ಜಿಲ್ಲಾಧಿಕಾರಿಗಳು**

ಒಂದು ದಾಖಲೆಯನ್ನು ಪಡೆದುಕೊಳ್ಳಲು ಸಾರ್ವಜನಿಕರು ಸರ್ಕಾರಿ ಇಲಾಖೆಗೆ ಹಲವಾರು ಬಾರಿ ಅಲೆದಾಡಬೇಕು ಮತ್ತು ಲಂಚ ನೀಡಬೇಕು ಎಂಬ ಆರೋಪದಿಂದ ಹೊರಬರಲು ಸರ್ಕಾರವು ಸಕಾಲ ಸೇವೆಯನ್ನು ಆರಂಭಿಸಿತು. ಪೊಲೀಸ್ ಇಲಾಖೆ ಸೇರಿದಂತೆ ಕಂದಾಯ, ಸ್ಥಳೀಯ ಪ್ರಾಧಿಕಾರದ ಪುರಸಭೆ, ನಗರಸಭೆ ಹಾಗೂ ಪಟ್ಟಣ ಪಂಚಾಯತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಆಹಾರ ಮತ್ತು ನಾಗರೀಕ ಸರಬರಾಜು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಅಂಗವಿಕಲರ ಕಲ್ಯಾಣಾಭಿವೃದ್ಧಿ ಇಲಾಖೆ, ಸಾರಿಗೆ ಇಲಾಖೆ ಸೇರಿದಂತೆ 91 ಇಲಾಖೆಗಳು ಸಕಾಲದ ವ್ಯಾಪ್ತಿಗೆ ಬರುತ್ತವೆ. ಸಾರ್ವಜನಿಕರು ಈ ಇಲಾಖೆಗಳಲ್ಲಿ ಬರುವ ಸೇವೆಗಳನ್ನು ಪಡೆಯಲು ಅರ್ಜಿಗಳನ್ನು ಹಾಕಿ 15 ಅಥವಾ 30 ದಿನಗಳವರೆಗೂ ಕಾಯಬೇಕಾಗುತ್ತದೆ.

"ಇಂದು ನಾಳೆ ಇನ್ನಿಲ್ಲ, ಹೇಳಿದ ಸಮಯ ತಪ್ಪೊಲ್ಲ" ಎಂಬ ಘೋಷ ವಾಕ್ಯದಡಿ ಜಾರಿಗೆ ಬಂದಿರುವ ಸಕಾಲ ಸೇವೆಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ನಿಯಂತ್ರಿಸಲಾಗುತ್ತದೆ. ಅರ್ಜಿ ಸಲ್ಲಿಸುವ ಪ್ರಕ್ರಿಯೆಯಿಂದ ಹಿಡಿದು ಅರ್ಜಿ ವಿಲೇವಾರಿ ಆಗುವ ತನಕ ಎಲ್ಲ ಪ್ರಕ್ರಿಯೆಯು ಆನ್‌ಲೈನ್ ಮೂಲಕವೇ ನಡೆಯುತ್ತದೆ. ಸಕಾಲದಡಿ ಸಾರ್ವಜನಿಕರು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವುದರಿಂದ ಸಾರ್ವಜನಿಕರು ಒಂದು ದಾಖಲೆಯನ್ನು ಪಡೆದುಕೊಳ್ಳಲು ಸರ್ಕಾರಿ ಕಚೇರಿಗಳಿಗೆ ಅಲೆಯುವುದು ತಪ್ಪುವ ಜೊತೆಗೆ ತಮ್ಮ ಅಮೂಲ್ಯವಾದ ಸಮಯ ಉಳಿಯುತ್ತದೆ. ಇಂತಹ ಸಕಾಲ ಸೇವೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಪ್ರಥಮ ಸ್ಥಾನದಲ್ಲಿರುವುದು ಅತ್ಯಂತ ಹೆಮ್ಮೆಯ ವಿಷಯ.

ಈಗ ಸಕಾಲ ಸೇವೆ ಸಂಪೂರ್ಣವಾಗಿ ಗಣಕೀಕೃತಗೊಂಡಿದ್ದು, ಸಾರ್ವಜನಿಕರು ಅರ್ಜಿಗಳನ್ನು ಅತಿ ಸುಲಭವಾಗಿ ಸಲ್ಲಿಸಬಹುದು. ನಾಗರೀಕರು ಅರ್ಜಿ ಸಲ್ಲಿಸಿದೊಡನೆ ರಸೀದಿ ನೀಡಲಾಗುತ್ತದೆ. ರಸೀದಿಯಲ್ಲಿ ಸೇವೆ ನೀಡಬೇಕಾಗಿರುವ ಅವಧಿಯನ್ನು ನಮೂದಿಸಲಾಗಿರುತ್ತದೆ. ಇದರಿಂದ ನಾಗರೀಕರ ಸಮಯ ಉಳಿತಾಯವಾಗುತ್ತದೆ. ರಸೀದಿಯಲ್ಲಿ ನೀಡಿರುವ ದಿನಾಂಕದಂದು ಬಂದು ತಾವು ಅರ್ಜಿಸಿದ ದಾಖಲೆಯನ್ನು ಪಡೆದುಕೊಳ್ಳಬಹುದು. ಸಾರ್ವಜನಿಕರು ಕೂಡ ಜಾಗೃತಗೊಂಡು ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಿ ತಮಗೆ ಬೇಕಾದ ದಾಖಲೆಯನ್ನು ಪಡೆದುಕೊಳ್ಳಬೇಕು. ಯಾವಾಗಲು ಸರ್ಕಾರದ ವ್ಯವಸ್ಥೆಯನ್ನು ತೆಗಳುತ್ತಾ ಇರುವ ಬದಲು, ತಮಗಾಗಿ ಸರ್ಕಾರ ಮಾಡಿರುವ ಸೇವೆಗಳ ಅನುಕೂಲವನ್ನು ಪಡೆದುಕೊಂಡರೆ ಮಾತ್ರ ವ್ಯವಸ್ಥೆಯನ್ನು ಬದಲಾಯಿಸಲು ಸಾಧ್ಯ.


## STATEMENT ABOUT OWNERSHIP AND OTHER PARTICULARS ABOUT VARTHA JANAPADA

### FORM IV Rule 8

1. Place of Publication : Bengaluru

2. Periodicity of Publication : Monthly

3. Printer Name : T. Venkatesh
   Nationality : Indian
   Address : M/s Abhimaani Publications Pvt. Ltd. #2/4, Dr Rajkumar Road, Rajajinagar, Benglauru - 560 010

4. Publishers Name : S. N. Siddaramappa
   Nationality : Indian
   Address : Dept. of Information & Public Relations #17, Mahaveer Road, (Infantry Rd) Bengaluru - 560 001.

5. Editor's Name : S. N. Siddaramappa
   Nationality : Indian
   Address : Dept. of Information & Public Relations #17, Mahaveer Road, (Infantry Rd) Bengaluru - 560 001.

6. License No. - Regd. No. **PMG/BG/ WPP-365/2018-20**

I, S N Siddaramappa hereby declare that the particulars given above are true to the best of my knowledge and belief.

Bengaluru
01.02.2020

Sd.
Commissioner
Signature of the Publisher






Download From : www.kpscvaani.com




# ವಿನೂತನ ರೀತಿಯಲ್ಲಿ ಪ್ಲಾಸ್ಟಿಕ್ ಮುಕ್ತ ಆಂದೋಲನ

ಹರೀಶ್ ಟಿ.ಕೆ.

ಇಂದಿನ ಯುಗದಲ್ಲಿ ನಮ್ಮೊಳಗೆ ಪ್ಲಾಸ್ಟಿಕ್ ಒಂದು ಭಾಗವಾಗಿದೆ ಎನ್ನುವುದಕ್ಕಿಂತ, ಪ್ಲಾಸ್ಟಿಕ್‌ನೊಳಗೆ ನಾವು ಒಂದು ಭಾಗವಾಗಿದ್ದೇವೆ. ಜೀವ ಬಿಟ್ಟರು ಬಿಟ್ಟೇನು, ಪ್ಲಾಸ್ಟಿಕ್‌ನ್ನು ಎಂದೂ ಬಿಡಲಾರೆ ಎನ್ನುವಷ್ಟರ ಮಟ್ಟಿಗೆ ಪ್ಲಾಸ್ಟಿಕ್‌ನೊಳಗೆ ಬೆರತು ಹೋಗಿದ್ದೇವೆ. ಪ್ರಕೃತಿಯನ್ನು ಮನುಷ್ಯ ನಾಶ ಮಾಡಿದರೆ, ಪ್ರಕೃತಿಯು ನಮ್ಮನ್ನು ನುಂಗುತ್ತದೆ ಎಂಬ



ಸಾಮಾನ್ಯ ತಿಳುವಳಿಕೆ ಇಲ್ಲದಷ್ಟು ಮಾನವ ಪ್ರಕೃತಿಯ ವಿನಾಶದತ್ತ ತನ್ನ ಹೆಜ್ಜೆಯನ್ನು ಇಡುತ್ತಿದ್ದಾನೆ.

ಸಾಕ್ಷರತೆ ಹೆಚ್ಚಾಗಿರುವ ಈ ವೈಜ್ಞಾನಿಕ ಯುಗದಲ್ಲೂ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಪ್ರಕೃತಿಯ ಉಳಿವಿಗಾಗಿ ಹಾಗೂ ಆರೋಗ್ಯಕರ ಪರಿಸರಕ್ಕಾಗಿ ನಾವು ಪ್ಲಾಸ್ಟಿಕ್ ಎಂಬ ಮಹಾಮಾರಿಯನ್ನು ಓಡಿಸಬೇಕು ಎಂಬ ಮನೋಭಾವ ನಮ್ಮಲ್ಲಿಯೇ ಮೂಡಬೇಕು. ಆದರೆ ಪ್ರಸ್ತುತದ ಪರಿಸ್ಥಿತಿ ಬೇರೆಯೇ ಇದೆ.

ಎಲ್ಲೆಡೆ ಪ್ಲಾಸ್ಟಿಕ್ ಮುಕ್ತಗೊಳಿಸಬೇಕು ಎಂಬ ಅರಿವು ಕಾರ್ಯಕ್ರಮಗಳು ಜರುಗುತ್ತಿವೆ. ಒಂದೆಡೆ ಅರಿವು ಕಾರ್ಯಕ್ರಮಗಳ ಮೂಲಕ ಪ್ಲಾಸ್ಟಿಕ್ ಮುಕ್ತವಾಗುತ್ತಿದೆ ಎನ್ನುವಾಗಲೇ, ಇನ್ನೊಂದಡೆ ಸರ್ಕಾರದ ಕಣ್ ತಪ್ಪಿಸಿ ಕಾರ್ಖಾನೆಗಳು ಪ್ಲಾಸ್ಟಿಕ್ ಉತ್ಪಾದನೆ ಮಾಡಿ ರಫ್ತು ಮಾಡುತ್ತಿವೆ.

ಪ್ಲಾಸ್ಟಿಕ್‌ನಿಂದ ಆರೋಗ್ಯದ ಮೇಲೆ ವಿಪರೀತ ಪರಿಣಾಮ ಬೀರುತ್ತದೆ. ಇದರಿಂದ ಕ್ಯಾನ್ಸರ್‌ನಂತಹ ದೊಡ್ಡ ಕಾಯಿಲೆಗಳಿಗೆ






ಜನರು ತುತ್ತಾಗುತ್ತಿದ್ದಾರೆ. ಪ್ಲಾಸ್ಟಿಕ್ ಭೂಮಿಯಲ್ಲಿ ಕೊಳೆಯದೇ ಇರುವುದರಿಂದ ಭೂ ಕಂಪನಕ್ಕೂ ನಾಂದಿಯಾಡುತ್ತದೆ. ಪ್ಲಾಸ್ಟಿಕ್ ಅನ್ನು ಸುಡುವುದರಿಂದ ವಾಯು ಮಾಲಿನ್ಯ ಉಂಟಾಗುವುದರ ಮೂಲಕ ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಇಂತಹ ಸಂದರ್ಭದಲ್ಲಿ ನಮ್ಮ ಪರಿಸರ ಆರೋಗ್ಯವಾಗಿದ್ದರೆ ಮಾತ್ರ ನಾವು ಆರೋಗ್ಯವಾಗಿ ಜೀವಿಸಲು ಸಾಧ್ಯ. ಅದನ್ನು ಅರಿಯದೇ ಪರಿಸರದ ಹಾನಿಗೆ ಮುನ್ನುಡಿ ಬರೆದರೆ, ನಮ್ಮ ವಿನಾಶದ ಹಾದಿಯು ಕೂಡ ತೆರೆಯುತ್ತದೆ ಎಂಬುದನ್ನು ಸಾರ್ವಜನಿಕರಲ್ಲಿ ಮನದಟ್ಟು ಮಾಡಲು ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಡಾ.ಎಂ.ವಿ.ವೆಂಕಟೇಶ್ ಅವರು ಮುಂದಾಗಿದ್ದಾರೆ.

ಯಾವುದೋ ಒಂದು ವೇದಿಕೆ ಮೇಲೆ ನಿಂತು ಭಾಷಣದ ಮೂಲಕ ಅರಿವು ಮೂಡಿಸಿದರೆ ಸಾಲದು, ಜನರ ಬಳಿ ಹೋಗಿ ಅರಿವು ಮೂಡಿಸಿದಾಗ ಮಾತ್ರ ಅವರನ್ನು ಪರಿವರ್ತನೆಯತ್ತ ಕೊಂಡೊಯ್ಯಬಹುದೆಂದು, ಸ್ವತಃ ಜಿಲ್ಲಾಧಿಕಾರಿಗಳೇ ನಗರ ಪ್ರದಕ್ಷಿಣೆ ಮಾಡುವ ಮೂಲಕ ನಮ್ಮ ಮಂಡ್ಯ ಜಿಲ್ಲೆಯಲ್ಲಿ ವಿನೂತನ ಆಂದೋಲನವನ್ನು ಸೃಷ್ಟಿಸಿದ್ದಾರೆ.

ತಮ್ಮ ಕಾರ್ಯದ ಒತ್ತಡಗಳ ನಡುವೆಯೂ ನಮ್ಮ ಪರಿಸರವನ್ನು ಹಾಗೂ ಸಾರ್ವಜನಿಕರ ಆರೋಗ್ಯವನ್ನು ರಕ್ಷಿಸಬೇಕು ಎಂದು ಪಣತೊಟ್ಟಿರುವ ಅವರು ಸೂರ್ಯ ಉದಯಿಸುವ ಮೊದಲೇ ಜಿಲ್ಲೆಯ ಕೇಂದ್ರ ಬಿಂದುವಾದ ಮಾರುಕಟ್ಟೆಗೆ ತೆರಳಿ ತಮ್ಮ ಆಂದೋಲನಕ್ಕೆ ಮುನ್ನುಡಿ ಬರೆದರು.



ಮಾರುಕಟ್ಟೆಯ ಮಳಿಗೆಗಳಿಗೆ ಭೇಟಿ ನೀಡಿ, ಅಲ್ಲಿರುವ ವ್ಯಾಪಾರಸ್ಥರು ಮತ್ತು ಸಾರ್ವಜನಿಕರೊಂದಿಗೆ ಮುಕ್ತವಾಗಿ ಮಾತನಾಡಿ, ವ್ಯಾಪಾರ ಮಾಡುವ ಸ್ಥಳವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಯಾವುದೇ ಪದಾರ್ಥಗಳನ್ನು ಮಾರಾಟ ಮಾಡುವಾಗ ಪ್ಲಾಸ್ಟಿಕ್ ಕವರ್ ಬಳಸುವ ಬದಲು ಪರಿಸರಸ್ನೇಹಿ ಚೀಲವನ್ನು ಬಳಸಬೇಕು. ನಮ್ಮ ಆರೋಗ್ಯವನ್ನು ಮತ್ತು ನಮ್ಮ ಪ್ರಕೃತಿಯನ್ನು ಕಾಪಾಡಿಕೊಳ್ಳುವಂತಹ ಗುರುತರ ಜವಾಬ್ದಾರಿ ಪ್ರತಿಯೊಬ್ಬನಿಗೂ ಇರಬೇಕು ಎಂದು ತಿಳಿಸಿದರು.

ಇಷ್ಟಕ್ಕೆ ನಿಲ್ಲದ ಇವರ ಪ್ರದಕ್ಷಣೆ ನಗರದ ಸಂಜಯವೃತ್ತ, ಮಹಾವೀರ ಸರ್ಕಲ್, ಶಾಲಾ–ಕಾಲೇಜು ಮುಂಭಾಗ, ಸಾರ್ವಜನಿಕ ಸ್ಥಳಗಳು ಹಾಗೂ ನಗರದ ವಾರ್ಡ್‌ಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಯನ್ನು ಪರಿಶೀಲಿಸಿ, ಅಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವುದರ ಮೂಲಕ ಸ್ವಚ್ಛತೆಯನ್ನು ಕಾಪಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲಿರುವ ಜನ ಸಾಮಾನ್ಯರ ಜತೆ ಮಾತನಾಡಿ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟುಕೊಳ್ಳಬೇಕು. ಯಾವುದೇ ಪ್ಲಾಸ್ಟಿಕ್ ವಸ್ತುವನ್ನು ಮನೆಯಲ್ಲಿ ಬಳಸಬಾರದು. ಆಹಾರ ಪದಾರ್ಥಗಳನ್ನು ಪ್ಲಾಸ್ಟಿಕ್ ಬಾಕ್ಸ್‌ನಲ್ಲಿ ಶೇಖರಿಸಬಾರದು ಎಂದು ಜನರಲ್ಲಿ ತಿಳುವಳಿಕೆ ನೀಡಿದರು.

ಹೀಗೆ ಪ್ರಾರಂಭವಾದ ಅವರ ಆಂದೋಲನ ಹಾಗೂ ನಗರ ಪ್ರದಕ್ಷಣೆ ಮುಂದುವರೆಯುತ್ತಾ ಬಂದಿದೆ. ಯಾವುದೇ ಸಮಾರಂಭ ಹಾಗೂ ಸ್ಥಳಗಳಿಗೆ ಭೇಟಿ ನೀಡಿದಾಗ ಪ್ಲಾಸ್ಟಿಕ್ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿರುತ್ತಾರೆ. ಇದು ನಿಜವಾಗಿಯೂ ಹೆಮ್ಮೆಯ ಸಂಗತಿ. ಪರಿಸರ ದಿನಾಚರಣೆ ದಿವಸ ಮಾತ್ರ ಜಾಗೃತಿ ಮೂಡಿಸಿದರೆ ಸಾಲದು ಪ್ರತಿದಿನವು ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿ ಮಾಡಲು ನಾವು ಮುಂದಾಗಬೇಕು ಎಂಬ ನಿಲುವನ್ನು ಹೊಂದಿರುವ ಜಿಲ್ಲಾಧಿಕಾರಿಗಳು ಯುವಕರಿಗೆ ಮಾದರಿಯಾಗಿದ್ದಾರೆ.


ಪ್ರಕೃತಿ ಮುನಿದರೆ ಮನುಕುಲ ವಿನಾಶವಾಗುತ್ತದೆ ಅನ್ನೋ ಮಾತು ಮನುಷ್ಯನಿಗೆ ಅರಿತಾಗ ಮಾತ್ರ ಈ ಪ್ರಕೃತಿಯನ್ನು ಮತ್ತು ಅದರೊಳಗಿರುವ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಸಾಧ್ಯ. ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟುವುದರ ಮೂಲಕ ನಮ್ಮ ಪ್ರಕೃತಿಯನ್ನು ರಕ್ಷಿಸಬೇಕು. ಹಾಗೆಯೇ ಪ್ಲಾಸಿಕ್ ಮುಕ್ತ ನಗರವನ್ನಾಗಿ ಮಾಡೋಣ ಎಂದು ನಾವೆಲ್ಲರೂ ಸಂಕಲ್ಪ ಮಾಡಿ ಸಾಗೋಣ ಎಂಬ ಆಂದೋಲನದ ಮೂಲಕ ಜನ ಜಾಗೃತಿಯನ್ನು ಜಿಲ್ಲಾಧಿಕಾರಿಗಳು ಮೂಡಿಸಿದ್ದಾರೆ.

ಸದಾ ಕಾಲ ಚಟುವಟಿಕೆಯಿಂದ ಎಲ್ಲಾ ಕಾರ್ಯಕ್ರಮಗಳಲ್ಲೂ ಸಮಯಕ್ಕೆ ಸರಿಯಾಗಿ ಹಾಜರಾಗಿ ಶಿಸ್ತಿನ ಸಿಪಾಯಿಯಂತೆ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುವ ಜಿಲ್ಲಾಧಿಕಾರಿಗಳೆಂದು ಜಿಲ್ಲೆಯಲ್ಲಿ ಮನೆಮಾತಾಗಿದ್ದಾರೆ. ಅತ್ಯಂತ ಉತ್ಸಾಹದಿಂದ ಕಾರ್ಯಪ್ರೌವೃತ್ತರಾಗಿ ವಿನೂತನ ರೀತಿಯಲ್ಲಿ ಪ್ಲಾಸ್ಟಿಕ್ ಮುಕ್ತ ಅಭಿಯಾನವನ್ನು ಆರಂಭಿಸಿರುವ ಅವರು ಮಂಡ್ಯ ಜಿಲ್ಲೆಯನ್ನು ಪ್ಲಾಸ್ಟಿಕ್ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಪಣತೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಮಾರುಕಟ್ಟೆಯ ವ್ಯಾಪಾರಸ್ಥರಿಗೆ ಬಟ್ಟೆ ಬ್ಯಾಗ್ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅವರು ಸಿದ್ಧತೆಯನ್ನು ನಡೆಸಿದ್ದಾರೆ.



Download From : www.kpscvaani.com

# ಪದಬಂಧ-4



ವಿದ್ಯಾ ವಿ. ಹಾಲಭಾವಿ

### ಎಡದಿಂದ ಬಲಕ್ಕೆ

1. ಮರಗಿಡಗಳನ್ನು ಹೆಚ್ಚಾಗಿ ಬೆಳೆಸಲು ಪ್ರೋತ್ಸಾಹಿಸಲು ಏರ್ಪಡಿಸುವ ಸಮಾರಂಭ (6)
4. ಆಲಸ್ಯವನ್ನು ಬಿಟ್ಟು ಕಾರ್ಯೋನ್ಮುಖವಾಗುವಿಕೆ (3)
7. 107ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಜರುಗಿದ ಸ್ಥಳ (4)
8. ವಂಚಕತನಕ್ಕೆ ಹೆಸರಾದ ಪ್ರಾಣಿ (2)
9. ಜಟಿಲತೆಯಿಂದ ಸಂಗ್ರಹಿಸಿದ ನೀರು (2)
10. ತಡವಾಗಿ ಕಾಣಿಸಿದ ಜಲಪಾತ (4)
12. ಕರದಲ್ಲಿರುವುದು ಪರಿಷ್ಕೃತಗೊಳ್ಳದ ಪ್ರತಿ (3)
14. ಈಕೆಯದ್ದು ಗ್ರಾಮೀಣ ಭಾಗದ ಗರ್ಭಿಣಿ ತಾಯಂದಿರು ಹಾಗೂ ಮಕ್ಕಳ ಆರೋಗ್ಯ ಪೋಷಣೆಯ ಜವಾಬ್ದಾರಿ (6)

### ಮೇಲಿಂದ ಕೆಳಕ್ಕೆ

2. ದೇವಾಲಯದ ಸಭಾ ಮಂಟಪ (4)
3. ಕೆಲಸದಿಂದ ತೆಗೆದು ಹಾಕುವಿಕೆ (2)
5. ಕುಂಬಾರನ ಚಕ್ರವಿದು (3)
6. ಶಿಕ್ಷಕರ ವೃತ್ತಿಪರ ಕೌಶಲ್ಯವನ್ನು ಹೆಚ್ಚಿಸಲು ನೀಡುವ ತರಬೇತಿ (5)
7. ಕೊನೆಗೆ ಬಲವಿದ್ದಾಗ ಕಾಣುವ ಒತ್ತಾಸೆ (3)
8. ಇದು ಅಸಲಂತೂ ಅಲ್ಲವೇ ಅಲ್ಲ (3)
9. ಜನರ ಹತ್ತಿರ ಕಾಣಿಸಿದ ತಂದೆ (3)
11. ಸೂಕ್ಷ್ಮವಾಗಿ ಪರಿಶೀಲಿಸುವವನು (4)
13. ಮೇಕೆಯಿಲ್ಲಿ ತಿರುಗಿದೆಯಲ್ಲಾ? (2)

### ಉತ್ತರ

**ಮೇಲಿಂದ ಕೆಳಕ್ಕೆ**

2.ನವರಂಗ 3.ವಜಾ 5.ತಿಗರಿ 6.ಗುರುಚೇತನ 7.ಬೆಂಬಲ 8.ನಕಲು 9.ಜನಕ 11.ಸಮೀಕ್ಷಕ 13.ಆಡು

**ಎಡದಿಂದ ಬಲಕ್ಕೆ**

1.ವನಮಹೋತ್ಸವ 4.ಜಾಗೃತಿ 7.ಬೆಂಗಳೂರು 8.ನರಿ 9.ಜಲ 10.ತಡಸಲು 12.ಕರಡು 14.ಆಶಾ ಕಾರ್ಯಕರ್ತೆ

Published by : S N Siddaramappa, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Download From : www.kpscvaani.com